06 June 2026 Saturday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

info.varthaman@gmail.com

**ಭಾವನಾಂತರಂಗ**

ಜೀವನ ಒಳ್ಳೆಯ ಆಲೋಚನೆಗಳೊಂದಿಗೆ ಒಳ್ಳೆಯ ಬದುಕನ್ನು ಕಟ್ಟಿಕೊಳ್ಳಲು ಪ್ರತಿದಿನವೂ ಒಂದು ಅವಕಾಶ ಕೊಟ್ಟಿದೆ, ಬಳಸಿಕೊಳ್ಳಬೇಕಷ್ಟೇ!

▸▸ ಸ್ನೇಹಾ ಆನಂದ್!


ಭೇದವಿಲ್ಲದೆ ಗಾಳಿ, ನೆರಳು ನೀಡುವ ಪ್ರಕೃತಿ: ನ್ಯಾ. ಎಂ.ಎಚ್.ಅಣ್ಣಯ್ಯನವರ್ — ಪುಟ ಸಂ. 2


ಜಾನುವಾರುಗಳ ಮೇಲೆ ದಾಳಿ ಮಾಡಿದ್ದ ಚಿರತೆಗಳ ಸೆರೆ — ಪುಟ ಸಂ. 3


ಕಾರು ಅಡ್ಡಗಟ್ಟಿ ದರೋಡೆಗೆ ಯತ್ನಿಸಿದ್ದ ಆರೋಪಿಗಳ ಬಂಧನ — ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು | ಗ್ರಾಮಾಂತರ ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 190 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಫಸ್ಟ್ ವಿಕೆಟ್ ಡಕೌಟ್

## ಸಚಿವ ಸ್ಥಾನಕ್ಕೆ ರಾಮಲಿಂಗಾರೆಡ್ಡಿ ರಾಜೀನಾಮೆ । ಬೆಂಗಳೂರು ನಗರಾಭಿವೃದ್ಧಿ ಖಾತೆಗೆ ಪಟ್ಟು ಖಾತೆ ಹಂಚಿಕೆ ಬೆನ್ನಲ್ಲೇ ಕಾಂಗ್ರೆಸ್‌ನಲ್ಲಿ ಭುಗಿಲೆದ್ದ ಆಕ್ರೋಶ । 'ಟ್ರಬಲ್ ಶೂಟರ್'ಗೆ ಟ್ರಬಲ್!

**ಬೆಂಗಳೂರು:** ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅಧಿಕಾರ ವಹಿಸಿಕೊಂಡ ಕೇವಲ ಎರಡೇ ದಿನದಲ್ಲಿ ಸರ್ಕಾರಕ್ಕೆ ಬಂಡಾಯದ ಬಿಸಿ ತಟ್ಟಿದೆ. 13 ಸಚಿವರಿಗೆ ಖಾತೆ ಹಂಚಿಕೆ ಮಾಡಿದ ಬೆನ್ನಲ್ಲಿಯೇ ಸಚಿವರಿಂದ ಅಸಮಾಧಾನದ ಆಕ್ರೋಶ ಭುಗಿಲೆದ್ದಿದೆ.

ತಮಗೆ ಇಷ್ಟವಿಲ್ಲದ ಜಲಸಂಪನ್ಮೂಲ ಖಾತೆ ನೀಡಿರುವುದಕ್ಕೆ ತೀವ್ರ ಆಕ್ರೋಶ ಹೊರಹಾಕಿರುವ ಹಿರಿಯ ನಾಯಕ ರಾಮಲಿಂಗಾರೆಡ್ಡಿ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ಕೋರಮಂಗಲದ ತಮ್ಮ ಕಚೇರಿಯಲ್ಲಿ ಕಾರ್ಯಕರ್ತರ ಮುಂದೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಅವರು ಘೋಷಿಸಿದ್ದಾರೆ.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಯಾರದೇ ಮನವೊಲಿಕೆಗೂ ಬಗ್ಗದ ರೆಡ್ಡಿ, ನನ್ನ ನಿರ್ಧಾರ ಅಚಲ, ಯಾರನ್ನೂ ಭೇಟಿಯಾಗುವ ಪ್ರಶ್ನೆಯೇ ಇಲ್ಲ ಎಂದು ಖಂಡಿತವಾಗಿ ತಿಳಿಸಿದ್ದಾರೆ. ರೆಡ್ಡಿ ಅವರು ಹಠವಾದಿ ಆಗಿರುವುದು ಸಿಎಂ ಡಿಕೆಶಿ ಪಾಲಿಗೆ ಆರಂಭದಲ್ಲೇ ಅತಿ ದೊಡ್ಡ ತಲೆನೋವಾಗಿ ಪರಿಣಮಿಸಿದೆ.

ರಾಮಲಿಂಗಾರೆಡ್ಡಿ ಅವರು ಕೇವಲ ಖಾತೆಗಾಗಿ ರಾಜೀನಾಮೆ ನೀಡುತ್ತಿಲ್ಲ. ಬದಲಿಗೆ ತಮಗೆ ಕೊಟ್ಟ ಮಾತು ತಪ್ಪಿದ್ದಕ್ಕಾಗಿ ಈ ನಿರ್ಧಾರಕ್ಕೆ ಬಂದಿದ್ದಾರೆ. ನಾನು ನನ್ನ ಆತ್ಮಸಾಕ್ಷಿಗೆ ವಿರುದ್ಧವಾಗಿ ಕೆಲಸ ಮಾಡಲು ಸಾಧ್ಯವಾಗದ ಕಾರಣ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ ಎಂದು ರಾಜೀನಾಮೆ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಅಲ್ಲದೆ, ಆನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಅಸಮಾಧಾನ ವ್ಯಕ್ತಪಡಿಸಿದರು. 2023ರಲ್ಲಿ ಸಿದ್ದರಾಮಯ್ಯ ಸಂಪುಟ ರಚನೆ ವೇಳೆ ನನಗೆ ಬೆಂಗಳೂರು ನಗರಾಭಿವೃದ್ಧಿ ಖಾತೆ ನೀಡುವುದಾಗಿ ಡಿಕೆಶಿ ಹಾಗೂ ಭೈರತಿ ಸುರೇಶ್ ಭರವಸೆ ನೀಡಿದ್ದರು. ಆದರೆ ಸಾರಿಗೆ ಖಾತೆ ನೀಡಲಾಯಿತು. ಆಗ ನಾನು ಬೇಸರಗೊಂಡಾಗ ಮುಂದೆ ನಾನೇ ಸಿಎಂ ಆದಾಗ ಬೆಂಗಳೂರು ನಗರಾಭಿವೃದ್ಧಿ ಇಲಾಖೆಯನ್ನೇ ಕೊಡುವುದಾಗಿ ಡಿ.ಕೆ.ಶಿವಕುಮಾರ್ ಮತ್ತು ಡಿ.ಕೆ.ಸುರೇಶ್ ಅವರು ನನ್ನ ನಿವಾಸಕ್ಕೆ ಬಂದು ಮಾತು ಕೊಟ್ಟಿದ್ದರು. ಆದರೆ ಈಗ ಸಿಎಂ ಆದ ಬೆನ್ನಲ್ಲೇ ಜಲಸಂಪನ್ಮೂಲ ಖಾತೆ ನೀಡಿದ್ದಾರೆ. ಇದಕ್ಕೆ ನನ್ನ ಮನಸ್ಸು ಒಪ್ಪುತ್ತಿಲ್ಲ ಎಂದು ರೆಡ್ಡಿ ತೀವ್ರ ಬೇಸರ ವ್ಯಕ್ತಪಡಿಸಿದರು.

ನನಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮೇಲಾಗಲಿ ಅಥವಾ ಸಿದ್ದರಾಮಯ್ಯ ಅವರ ಮೇಲಾಗಲಿ ಯಾವುದೇ ವೈಯಕ್ತಿಕ ಕೋಪವಿಲ್ಲ. ನಾನು ಯಾವ ಕಾರಣಕ್ಕಾಗಿ ರಾಜೀನಾಮೆ ನೀಡಿದ್ದೇನೆ ಎಂಬ ಸತ್ಯ ಜನರಿಗೆ ಗೊತ್ತಾಗಬೇಕಷ್ಟೇ. ನಾನು ಕಳೆದ 53 ವರ್ಷಗಳಿಂದ ಕಾಂಗ್ರೆಸ್ ಪಕ್ಷದಲ್ಲಿ ಒಬ್ಬ ನಿಷ್ಠಾವಂತ ಕಾರ್ಯಕರ್ತನಾಗಿ ಕೆಲಸ ಮಾಡುತ್ತಿದ್ದೇನೆ. ಪಕ್ಷ ನನಗೆ ಸಾಕಷ್ಟು ಅವಕಾಶಗಳನ್ನು ಮಾಡಿಕೊಟ್ಟಿದೆ. ನಾನು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆಯೇ

ಪುಟ 2ಕ್ಕೆ



### ಮಾತುತಪ್ಪಿದ ಡಿಕೆಶಿ, ಡಿಕೆಸು

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಸಹೋದರ ಡಿ.ಕೆ.ಸುರೇಶ್ ಅವರು ಕೊಟ್ಟ ಮಾತು ತಪ್ಪಿದರು ಎಂದು ರಾಮಲಿಂಗಾರೆಡ್ಡಿ ಮಾಧ್ಯಮಗಳ ಜೊತೆ ಅಸಮಾಧಾನ ವ್ಯಕ್ತಪಡಿಸಿದರು.

ಈ ಹಿಂದೆ ನೀಡಿದ್ದ ಭರವಸೆ ಈಡೇರದಿರುವ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಅಸಮಾಧಾನ ಹೊರಹಾಕಿದ ರಾಮಲಿಂಗಾ ರೆಡ್ಡಿ, ನಾನಾಗಿ ಬೆಂಗಳೂರು ಅಭಿವೃದ್ಧಿ ಖಾತೆ ಕೇಳಿರಲಿಲ್ಲ. ಆದರೂ 2023ರಲ್ಲಿ ಡಿ.ಕೆ ಶಿವಕುಮಾರ್ ಹಾಗೂ ಅವರ ಸಹೋದರ ಡಿ.ಕೆ ಸುರೇಶ್ ನನ್ನ ಮನೆಗೆ ಬಂದು ಭರವಸೆ

ಪುಟ 2ಕ್ಕೆ

### ಮಾತುಕೊಟ್ಟಿದ್ದು ಸತ್ಯ: ಡಿಕೆಶಿ

**ಬೆಂಗಳೂರು:** ರಾಮಲಿಂಗಾರೆಡ್ಡಿ ಪಕ್ಷದ ಹಿರಿಯ ನಾಯಕರು. ಅಲ್ಲದೆ, ನನ್ನ ಆಪ್ತ ಸ್ನೇಹಿತರು. ಅವರ ಅಸಮಾಧಾನವನ್ನು ಮಾತಾಡಿ ಬಗೆಹರಿಸುತ್ತೇನೆ ಎಂದು ಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಬೆಂಗಳೂರಿನಲ್ಲಿ ಮಾಧ್ಯಮಗಳ ಜೊತೆ ಅವರು ಮಾತನಾಡಿದರು. ರಾಮಲಿಂಗಾರೆಡ್ಡಿ ಅವರಿಗೆ ಬೆಂಗಳೂರು ನಗರಾಭಿವೃದ್ಧಿ ಖಾತೆ ನೀಡುವುದಾಗಿ ಮಾತು ಕೊಟ್ಟಿದ್ದು ನಿಜ. ನಾನು ಮತ್ತು ನನ್ನ ತಮ್ಮ ಅವರಿಗೆ ಮಾತು ನೀಡಿದ್ದೆವು. ಆದರೆ,

ಪುಟ 2ಕ್ಕೆ

## ಮತ್ತೆ ಆಹಾರ ಖಾತೆ ಬೇಡ: ಕೃಷಿ, ನೀರಾವರಿ, ಸಮಾಜ ಕಲ್ಯಾಣ ಕೊಡಲಿ

**ಸದ್ಯಕ್ಕೆ ಅಧಿಕಾರ ವಹಿಸಿಕೊಳ್ಳಲ್ಲ: ಕೆ.ಎಚ್.ಮುನಿಯಪ್ಪ ಅಸಮಾಧಾನ**

**ಬೆಂಗಳೂರು:** ಸಚಿವ ರಾಮಲಿಂಗಾರೆಡ್ಡಿ ರಾಜೀನಾಮೆ ಬೆನ್ನಲ್ಲೇ, ಮತ್ತೊಬ್ಬ ಹಿರಿಯ ನಾಯಕ ಹಾಗೂ ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಬಹಿರಂಗವಾಗಿಯೇ ಅಸಮಾಧಾನದ ಬಾಂಬ್ ಸಿಡಿಸಿದ್ದಾರೆ.

ಮಾಧ್ಯಮಗಳೊಂದಿಗೆ ಮಾತನಾಡಿರುವ ಅವರು, ಖಾತೆ ಬದಲಾವಣೆ ಮಾಡುವವರೆಗೆ ನಾನು ಅಧಿಕಾರ ವಹಿಸಿಕೊಳ್ಳುವುದಿಲ್ಲ. ಖಾತೆ ಹಂಚಿಕೆಯಲ್ಲಿ ಸೀನಿಯಾರಿಟಿ ಕಾಯ್ದುಕೊಂಡಿಲ್ಲ. ಈ ತಾರತಮ್ಯ ಹೀಗೆಯೇ ಮುಂದುವರಿದರೆ 2028ರ ಚುನಾವಣೆಯಲ್ಲಿ ಪಕ್ಷಕ್ಕೆ ಭಾರಿ ಕಷ್ಟವಾಗಲಿದೆ ಎಂದು ಬಹಿರಂಗ ಎಚ್ಚರಿಕೆ ನೀಡಿದ್ದಾರೆ.

ಕಳೆದ ಮೂರು ವರ್ಷಗಳಿಂದ ಆಹಾರ ಇಲಾಖೆಯನ್ನು ನಿಭಾಯಿಸಿರುವ ನನಗೆ ಮತ್ತೆ ಅದೇ ಖಾತೆ ನೀಡಿದೆ ಎಂದು ಕೆ.ಎಚ್.ಮುನಿಯಪ್ಪ ಬೇಸರ ಹೊರಹಾಕಿದ್ದಾರೆ. ನಾನು 8 ಬಾರಿ ಗೆದ್ದಿರುವ ಅತ್ಯಂತ ಹಿರಿಯ ನಾಯಕ. ಸಂಪುಟದಲ್ಲಿ ಪ್ರೊಟೊಕಾಲ್ ಪ್ರಕಾರ ಸೀನಿಯಾರಿಟಿ ನೋಡಿ ಖಾತೆ ಹಂಚಬೇಕಿತ್ತು. ಸಮಾಜ ಕಲ್ಯಾಣ ಅಥವಾ ಕೃಷಿ ಇಲಾಖೆಯಂತಹ ಜನಸೇವೆಗೆ ನೇರ ಅವಕಾಶವಿರುವ ದೊಡ್ಡ ಖಾತೆ ನೀಡುವಂತೆ ನಾನು ಮೊದಲೇ ಕೇಳಿದ್ದೆ. ಆದರೆ ಹಂಚಿಕೆಯಲ್ಲಿ ಯಾವುದೇ ಸಮಾತೋಲನ ಕಾಯ್ದುಕೊಂಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸಮಾಜ ಕಲ್ಯಾಣ, ಕೃಷಿ ಅಥವಾ ನೀರಾವರಿ ಅಂತಹ ಇಲಾಖೆಗಳನ್ನು ನೀಡಿದರೆ ಜನಸೇವೆ ಮತ್ತು ರೈತರಿಗೆ ಉತ್ತಮ ಕೊಡುಗೆ ನೀಡಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

### ಮಾರ್ಮಿಕ ನುಡಿ

**ಪಕ್ಷದ ನಾಯಕತ್ವದ ವಿರುದ್ಧ ಮಾರ್ಮಿಕವಾಗಿ ಅಸಮಾಧಾನ ವ್ಯಕ್ತಪಡಿಸಿದ ಸಚಿವರು, ನಾನು ಪಕ್ಷದಲ್ಲಿ ತಾಯಿ ಸ್ಥಾನದಲ್ಲಿದ್ದೇನೆ. ತಾಯಿಯಾದವಳು ಎಲ್ಲಾ ಮಕ್ಕಳನ್ನೂ ಒಂದೇ ಕಣ್ಣಿನಿಂದ, ಸಮಾನವಾಗಿ ನೋಡಬೇಕು. ನಾನು ಈಗಾಗಲೇ ಈ ಕುರಿತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಗಾಂಧಿ ಅವರನ್ನು ಭೇಟಿಯಾಗಿ ಮನವಿ ಮಾಡಿದ್ದೇನೆ. ಗೊಂದಲಗಳಿಗೆ ಆಸ್ಪದ ನೀಡದೆ ನನ್ನ ಖಾತೆಯನ್ನು ತಕ್ಷಣ ಬದಲಾಯಿಸುತ್ತಾರೆ ಎಂಬ ನಂಬಿಕೆ ನನಗಿದೆ ಎಂದು ಹೇಳಿದರು.**



### ಬೆಂಗಳೂರು ಖಾತೆಗೆ ಡಿಮ್ಯಾಂಡ್ ಯಾಕೆ?

- ▸▸ ಬೆಂಗಳೂರು ಅಭಿವೃದ್ಧಿ ಖಾತೆ ವ್ಯಾಪ್ತಿಯಲ್ಲಿ ಜಿಬಿಎಯ 5 ನಗರಪಾಲಿಕೆ, ಬಿಎಂಆರ್‌ಸಿಎಲ್, ಬಿಡಿಎ ಕೂಡ ಬರಲಿದೆ
- ▸▸ ಬೆಂಗಳೂರು ಅಭಿವೃದ್ಧಿಗೆ ಸಿಗುವ ಅನುದಾನವೂ ಹೆಚ್ಚು
- ▸▸ ಬೆಂಗಳೂರಿನಲ್ಲಿ ಶೀಘ್ರವೇ ಟನೆಲ್ ಕಾಮಗಾರಿ ನಡೆಯಲಿದೆ
- ▸▸ ಫ್ಲೈಓವರ್ ಸೇರಿ ರಸ್ತೆ ಕಾಮಗಾರಿಗಳಿಗೆ ಹೆಚ್ಚಿನ ಅನುದಾನ
- ▸▸ ಹೀಗಾಗಿ ಬೆಂಗಳೂರು ಅಭಿವೃದ್ಧಿ ಖಾತೆಗೆ ಭಾರೀ ಡಿಮ್ಯಾಂಡ್

## ಯಾವ್ ಟ್ರಬಲ್ ಶೂಟರ್ ರೀ!

### ಮುಖ್ಯಮಂತ್ರಿ ಡಿಕೆಶಿ ವಿರುದ್ಧ ಕೆ.ಎನ್.ರಾಜಣ್ಣ ವ್ಯಂಗ್ಯ



**ತುಮಕೂರು:** ಯಾವ್ ಟ್ರಬಲ್ ಶೂಟರ್ ರೀ, ನೀವೇ ಟ್ರಬಲ್ ಶೂಟರ್ ಮಾಡಿರುವುದು. ಆಗಿದ್ದರೆ ಅಸ್ಸಾಂಗೆ ಹೋಗಿ ಯಾಕೆ ಟ್ರಬಲ್ ಶೂಟರ್ ಆಗಲಿಲ್ಲ ಎಂದು ಮಾಜಿ ಸಚಿವ ಕೆ.ಎನ್.ರಾಜಣ್ಣ ಅವರು ಡಿ.ಕೆ.ಶಿವಕುಮಾರ್ ವಿರುದ್ಧ ವ್ಯಂಗ್ಯವಾಡಿದರು.

ಸಚಿವ ಸ್ಥಾನಕ್ಕೆ ರಾಮ ಲಿಂಗಾ ರೆಡ್ಡಿ ರಾಜೀನಾಮೆ ನೀಡಿರುವ ವಿಚಾರ ಹಾಗೂ ಖಾತೆ ಹಂಚಿಕೆ ಕುರಿತು ಕೆ.ಎನ್. ರಾಜಣ್ಣ ಅವರು ಶುಕ್ರವಾರ ಮಧುಗಿರಿಯಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದರು. ರಾಮಲಿಂಗಾ ರೆಡ್ಡಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿರುವ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಹೌದಾ.. ಹೊಸ ಸುದ್ದಿ ಹೇಳ್ತಿರಾ ಅಂದರೆ ಹಳೇ ಸುದ್ದಿ ಹೇಳ್ತಿರಲ್ಲ ಎಂದು ವ್ಯಂಗ್ಯವಾಡಿದರು. ಇದು ಯಾವುದೇ ಪತನ ಅಲ್ಲ. ಆತ್ಮಸಾಕ್ಷಿಗೆ ಅನುಗುಣವಾಗಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ಅದಕ್ಕಾಗಿ ರಾಜೀನಾಮೆ ನೀಡುತ್ತಿದ್ದಾರೆ ಎಂದರು. ಖಾತೆ ಹಂಚಿಕೆ ವಿಚಾರವನ್ನೂ ಪ್ರಸ್ತಾಪಿಸಿದ ರಾಜಣ್ಣ, ಈಶ್ವರ ಖಂಡ್ರೆ ಅವರಿಗೆ ಅದೇ ಖಾತೆ ಯಾಕೆ ಕೊಡಲಿಲ್ಲ? ಪರಮೇಶ್ವರ್ ಅವರಿಗೆ ಗೃಹ ಖಾತೆ ನೀಡಬೇಕಿತ್ತು. ಯಾಕೆ ಕಂದಾಯ ಖಾತೆ ಕೊಟ್ಟಿದ್ದಾರೆ? ಎಂದು ಪ್ರಶ್ನಿಸಿದರು.

**ಯಾರ ಆಸ್ತಿ ಯಾರಪ್ಪನ ಸ್ವತ್ತು ಅಲ್ಲ.**

**ಬದಲಾದ ಸನ್ನಿವೇಶಕ್ಕೆ ಅನುಗುಣವಾಗಿ ಅವಕಾಶಗಳು ಸಿಗುತ್ತವೆ. ಅಂತಹ ಅವಕಾಶಗಳನ್ನು ಬಳಸಿ ಕೊಂಡು ಜನಪರ ಕೆಲಸ ಮಾಡಬೇಕು ಎಂದು ತಿರುಗೇಟು ನೀಡಿದರು.**

## ಸಚಿವರ ಮನವೊಲಿಸಿ, ಇಲ್ಲವೇ ರಾಜೀನಾಮೆ ಅಂಗೀಕರಿಸಿ: ರಾಗಾ




**ಬೆಂಗಳೂರು:** ಸಚಿವ ಸ್ಥಾನಕ್ಕೆ ರಾಮಲಿಂಗಾರೆಡ್ಡಿ ರಾಜೀನಾಮೆ ನೀಡಿರುವ ಬಗ್ಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಖಡಕ್ ಎಚ್ಚರಿಕೆ ನೀಡಿದ್ದಾರೆ ಎನ್ನಲಾಗಿದೆ.

ರಾಜ್ಯ ಕಾಂಗ್ರೆಸ್ ನಲ್ಲಿ ಸಚಿವರು ಅಸಾಧಾನಗೊಂಡಿರುವ ವಿಚಾರವನ್ನು ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರ ಗಮನಕ್ಕೆ ತರಲಾಗಿದೆ. ಈ ಬಗ್ಗೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೆವಾಲಾ ಅವರು ರಾಹುಲ್ ಗಾಂಧಿಗೆ ಮಾಹಿತಿ ನೀಡಿದರು. ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಂಡಿರುವ ರಾಹುಲ್ ಗಾಂಧಿ, ಸಚಿವರನ್ನು ರಾಜೀನಾಮೆ ವಾಪಸ್ ಪಡೆಯುವಂತೆ ಮನವೊಲಿಸಿ, ಮನವೊಲಿಕೆಗೆ ಬಗ್ಗದಿದ್ದರೆ ರಾಜೀನಾಮೆ ಅಂಗೀಕರಿಸಿ ಎಂದು ಕಡ್ಡಿಮುರಿದಂತೆ ರಾಜ್ಯ ನಾಯಕರಿಗೆ ಖಡಕ್ ಸೂಚನೆ ನೀಡಿದ್ದಾರೆ.

ಇನ್ನು ರಾಮಲಿಂಗಾರೆಡ್ಡಿ ರಾಜೀನಾಮೆ ನೀಡಿದ ಬಳಿಕ ಯಾರ ಸಂಪರ್ಕಕ್ಕೆ ಸಿಗುತ್ತಿಲ್ಲ. ಅಸಮಾಧಾನ ತಣಿಸಲು ಸಿಎಂ ಡಿಕೆ ಶಿವಕುಮಾರ್ ಅವರು ರಾಮಲಿಂಗಾರೆಡ್ಡಿ ಸಂಪರ್ಕಕ್ಕೆ ಪ್ರಯತ್ನಿಸಿದರೂ ಅವರ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡಿದ್ದಾರೆ ಎನ್ನಲಾಗಿದೆ.


### ಮನಸ್ತಾಪ ಬಗೆಹರಿಸುತ್ತೇವೆ: ಕೆಪಿಸಿಸಿ ಅಧ್ಯಕ್ಷ ಹರಿಪ್ರಸಾದ್



**ಬೆಂಗಳೂರು:** ರಾಮಲಿಂಗಾರೆಡ್ಡಿ ಅವರು ನಮ್ಮ ಪಕ್ಷದ ಹಿರಿಯ ನಾಯಕರು. ಮನಸ್ತಾಪ ಇದ್ದರೆ ಬಗೆ ಹರಿಸುತ್ತೇವೆ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ತಿಳಿಸಿದರು.

ರಾಮಲಿಂಗಾರೆಡ್ಡಿ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಕುರಿತು ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಪಕ್ಷಕ್ಕೆ ಹಾನಿಯಾಗುವ ಯಾವುದೇ ಕೆಲಸವನ್ನು ರಾಮಲಿಂಗಾರೆಡ್ಡಿ ಅವರು ಮಾಡುವುದಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು.

### ಸರ್ಕಾರಕ್ಕೆ ಎಚ್ಚರಿಕೆ ಗಂಟೆ: ಎಚ್.ಕೆ.ಪಾಟೀಲ್



**ಬೆಂಗಳೂರು:** ರಾಮಲಿಂಗಾ ರೆಡ್ಡಿ ಅವರ ರಾಜೀನಾಮೆ ಸರ್ಕಾರಕ್ಕೆ ಒಂದು ಎಚ್ಚರಿಕೆ ಗಂಟೆಯಾಗಿದೆ. ಈ ವಿಷಯವನ್ನು ನ್ಯಾಯಯುತವಾಗಿ ಬಗೆಹರಿಸಲು ಎಲ್ಲ ಸಂಬಂಧಿತ

ಪುಟ 2ಕ್ಕೆ


### ಸರ್ಕಾರಿ ಅಧಿಕಾರಿಗಳು ಬೆಳಗ್ಗೆ 10ರೊಳಗೆ ಬರಬೇಕು: ಸಿಎಂ



**ಬೆಂಗಳೂರು:** ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಧಿಕಾರ ವಹಿಸಿಕೊಂಡ ನಂತರ ಆಡಳಿತ ಯಂತ್ರಕ್ಕೆ ಚುರುಕು ಮುಟ್ಟಿಸಿದ್ದಾರೆ. ಇನ್ಮುಂದೆ ಎಲ್ಲಾ ಸರ್ಕಾರಿ ಅಧಿಕಾರಿಗಳು ಮತ್ತು ಸಿಬ್ಬಂದಿ ಬೆಳಗ್ಗೆ 10 ಗಂಟೆಯೊಳಗೆ ಕಚೇರಿಯಲ್ಲಿ ಇರಬೇಕು ಎಂದು ಖಡಕ್ ಸೂಚನೆ ನೀಡಿದ್ದಾರೆ.

ಮುಖ್ಯಮಂತ್ರಿ ಸೂಚನೆ ಮೇರೆಗೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಶುಕ್ರವಾರ ಆದೇಶ ಹೊರಡಿಸಿದ್ದಾರೆ. ರಾಜ್ಯದ ಸರ್ಕಾರಿ ಕಚೇರಿಗಳಲ್ಲಿ ಪಾರದರ್ಶಕ ಆಡಳಿತ ತರುವ ಉದ್ದೇಶದಿಂದ ಬಯೋಮೆಟ್ರಿಕ್ ವ್ಯವಸ್ಥೆ ಬದಲಾಗಿ ಕೃತಕ ಬುದ್ಧಿಮತ್ತೆ ಮತ್ತು ಜಿಪಿಎಸ್ ಆಧರಿತ ಹಾಜರಾತಿ ಕಡ್ಡಾಯಗೊಳಿಸಿದೆ.

### ಬೆಂಗಳೂರು ಅಭಿವೃದ್ಧಿ ಸವಾಲು: ಕೃಷ್ಣ ಬೈರೇಗೌಡ




**ಬೆಂಗಳೂರು:** ಸಚಿವ ಸಂಪುಟ ಪುನರ್‌ರಚನೆ ಬಳಿಕ ಬೆಂಗಳೂರು ಅಭಿವೃದ್ಧಿ ಖಾತೆ ಪಡೆದಿರುವ ಸಚಿವ ಕೃಷ್ಣ ಬೈರೇಗೌಡ ಅವರು, ಈ ಜವಾಬ್ದಾರಿ ಸುಲಭವಾಗಿಲ್ಲ. ಬೆಂಗಳೂರಿನ ಜನರ ಜೀವನಮಟ್ಟ ಸುಧಾರಿಸುವುದೇ ತಮ್ಮ ಮೊದಲ ಗುರಿ ಎಂದು ತಿಳಿಸಿದರು.

ನಾನು ಕಂದಾಯ ಇಲಾಖೆಯಲ್ಲಿ ಆರಂಭಿಸಿರುವ ಕೆಲಸಗಳನ್ನು ಪೂರ್ಣಗೊಳಿಸಲು ಅವಕಾಶ ನೀಡುವಂತೆ ಮನವಿ ಮಾಡಿದ್ದೆ. ಆದರೆ ಪಕ್ಷದ ನಾಯಕತ್ವ ಬೆಂಗಳೂರು ಅಭಿವೃದ್ಧಿ ಖಾತೆ ನೀಡಿದೆ ಎಂದು ಹೇಳಿದರು. ಬೆಂಗಳೂರು ಅಭಿವೃದ್ಧಿ ಇಲಾಖೆ ದೊಡ್ಡ ಸವಾಲಿನ ಜವಾಬ್ದಾರಿ. ನಗರ ಹಲವು ಜಟಿಲ ಸಮಸ್ಯೆಗಳನ್ನು ಎದುರಿಸುತ್ತಿದೆ. ಎಲ್ಲ ಸಮಸ್ಯೆಗಳನ್ನು ಪರಿಹರಿಸುತ್ತೇವೆ ಎಂದು ಈಗಲೇ ಭರವಸೆ ನೀಡಲು ಸಾಧ್ಯವಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

### ಹಿರಿಯ ಪತ್ರಕರ್ತ ಎನ್. ಉದಯಕುಮಾರ್‌ಗೆ 'ಖಾದ್ರಿ ಶಾಮಣ್ಣ ಪತ್ರಿಕೋದ್ಯಮ ಪ್ರಶಸ್ತಿ'



**ಬೆಂಗಳೂರು:** 2026ನೇ ಸಾಲಿನ ಪ್ರತಿಷ್ಠಿತ 'ಖಾದ್ರಿ ಶಾಮಣ್ಣ ಪತ್ರಿಕೋದ್ಯಮ ಪ್ರಶಸ್ತಿ'ಗೆ ಹಿರಿಯ ಪತ್ರಕರ್ತ ಎನ್. ಉದಯಕುಮಾರ್ ಅವರು ಭಾಜನರಾಗಿದ್ದಾರೆ. ಈ ಪ್ರಶಸ್ತಿಯು 15 ಸಾವಿರ ರೂ. ನಗದು ಹಾಗೂ ಸ್ಮರಣಿಕೆಯನ್ನು ಒಳಗೊಂಡಿದೆ ಎಂದು ಖಾದ್ರಿ ಶಾಮಣ್ಣ ಸ್ಮಾರಕ ಟ್ರಸ್ಟ್ ಪ್ರಕಟಣೆಯಲ್ಲಿ ತಿಳಿಸಿದೆ.

ಮೂಲತಃ ಚಿಂತಾಮಣಿ ತಾಲೂಕಿನ ಆಂಧ್ರ ಗಡಿಗೆ ಹೊಂದಿಕೊಂಡಿರುವ ಅಂಕಾಲಮಡುಗು ಗ್ರಾಮದವರಾದ ಉದಯಕುಮಾರ್, ಸಂಪೂರ್ಣ ತೆಲುಗು ಪರಿಸರದಲ್ಲಿ ಬೆಳೆದರೂ ಸರ್ಕಾರಿ ಶಾಲೆಯಲ್ಲಿ ಕನ್ನಡ ಕಲಿತು ಪತ್ರಿಕೋದ್ಯಮದಲ್ಲಿ ಸಾಧನೆ ಮಾಡಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಎಂಎಸ್‌ಡಬ್ಲ್ಯು ಹಾಗೂ ಪತ್ರಿಕೋದ್ಯಮ ಪದವಿ ಪಡೆದ ಇವರು, 1992ರಲ್ಲಿ 'ಪ್ರಜಾವಾಣಿ' ಪತ್ರಿಕೆಯ ಮೂಲಕ ವರದಿಗಾರರಾಗಿ ತಮ್ಮ ವೃತ್ತಿಜೀವನ ಆರಂಭಿಸಿದರು.

ಬೆಳಗಾವಿ ಹಾಗೂ ಬೆಂಗಳೂರಿನಲ್ಲಿ ದೀರ್ಘಕಾಲ ಸೇವೆ

ಪುಟ 2ಕ್ಕೆ

## ಸಿಕ್ಸರ್ ನಂತರ ಹಿಟ್ ವಿಕೆಟ್!

**ಚಿಕ್ಕಮಗಳೂರು:** ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮೊದಲ ಸಂಪುಟ ಸಭೆಯಲ್ಲಿ ಸಿಕ್ಸರ್ ಹೊಡೆದರು ಎಂದು ಮಾಧ್ಯಮಗಳಲ್ಲಿ ಬಿಂಬಿಸಲಾಗಿತ್ತು. ಆದರೆ, ಈಗ ಹಿಟ್ ವಿಕೆಟ್ ಆಗಿದೆ ಎಂದು ಬಿಜೆಪಿ ನಾಯಕ ಸಿ.ಟಿ.ರವಿ ವ್ಯಂಗ್ಯವಾಡಿದರು.

ಮಾಧ್ಯಮಗಳ ಜೊತೆ ಮಾತನಾಡಿದ ಅವರು, ರಾಮಲಿಂಗಾರೆಡ್ಡಿ ರಾಜೀನಾಮೆ ಮೂಲಕ ಡಿ.ಕೆ.ಶಿವಕುಮಾರ್ ಸಂಪುಟದ ಮೊದಲ ವಿಕೆಟ್ ಪತನವಾಗಿದೆ. ರಾಮಲಿಂಗಾರೆಡ್ಡಿ ರಾಜೀನಾಮೆ ನೀಡಿರೋದು ಆಂತರಿಕ ವಿಚಾರ ಆದರೂ ಸರ್ಕಾರದಲ್ಲಿ ಎಲ್ಲವೂ ಸರಿ ಇಲ್ಲ ಅನ್ನೋದನ್ನ ಸ್ಪಷ್ಟಪಡಿಸಿದೆ. ಇದು ಭವಿಷ್ಯದ ಬೆಳವಣಿಗೆಗಳನ್ನ ಸೂಚಿಸುತ್ತದೆ. ನಮ್ಮ ಆತಂಕ ಇದು ಆಡಳಿತದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ ಅನ್ನೋದಾಗಿದೆ ಎಂದು ಟೀಕಿಸಿದರು.

ರಾಮಲಿಂಗಾರೆಡ್ಡಿ ಕೊಟ್ಟ ಮಾತು ತಪ್ಪಿದ್ದಕ್ಕೆ ರಾಜೀನಾಮೆ ನೀಡಿದ್ದಾರೆಂಬ ಪ್ರಶ್ನೆಗೆ, ಯಾರು, ಯಾರಿಗೆ ಮಾತು ಕೊಟ್ಟಿದ್ದರು ಎಂಬುದು ನಮಗೆ ಗೊತ್ತಿಲ್ಲ. ಜನರಿಗೆ ಗೊತ್ತಾಗ್ತಿರೋದು ಆಂತರಿಕ ಬೇಗುದಿ ಮಾತ್ರ. ಇವೆಲ್ಲಾ ಭವಿಷ್ಯದ ಮುನ್ಸೂಚನೆ ಕೊಡುತ್ತಿವೆ.



ಇದರಿಂದ ರಾಜ್ಯಕ್ಕೆ ಒಳ್ಳೆಯದಾಗುತ್ತದೆ ಎಂದು ಭಾವಿಸುವಂತಿಲ್ಲ ಎಂದು ಆರೋಪಿಸಿದರು.

ಇನ್ನೂ ಪೂರ್ಣ ಪ್ರಮಾಣದಲ್ಲಿ ಸಚಿವ ಸಂಪುಟ ರಚನೆಯೇ ಆಗಿಲ್ಲ. ಈಗಲೇ, ಹಿರಿಯ ಸಚಿವರಲ್ಲೇ ಈ ರೀತಿಯ ಆಂತರಿಕ ಬೇಗುದಿ ಇರುವಾಗ ಪೂರ್ಣ ಪ್ರಮಾಣದಲ್ಲಿ ಸಂಪುಟ ರಚನೆಯಾದಾಗ ಅಸಮಾಧಾನ ಮತ್ತಷ್ಟು ಸ್ಫೋಟವಾಗುತ್ತದೆ ಎಂದು ಭವಿಷ್ಯ ನುಡಿದರು.

## ರಾಜ್ಯಸಭೆ ಚುನಾವಣೆಗೆ ಖರ್ಗೆ ನಾಮಪತ್ರ ಸಲ್ಲಿಕೆ

**ಬೆಂಗಳೂರು:** ರಾಜ್ಯಸಭೆ ಚುನಾವಣೆಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಶುಕ್ರವಾರ ನಾಮಪತ್ರ ಸಲ್ಲಿಸಿದರು. ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ರಾಜ್ಯ ವಿಧಾನಸಭೆಯಿಂದ ಆಯ್ಕೆಯಾಗಬೇಕಾದ ರಾಜ್ಯಸಭೆ ಮೂರು ಸ್ಥಾನಗಳಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ವಕ್ತಾರ ಪವನ್ ಖೇರಾ, ಮನ್ಸೂರ್ ಅಲಿಖಾನ್ ಅವರ ಹೆಸರನ್ನು ಕಾಂಗ್ರೆಸ್ ಗುರುವಾರ ಅಂತಿಮಗೊಳಿಸಿತ್ತು.

ಖರ್ಗೆಯವರು ರಾಜ್ಯಸಭೆಯ ವಿರೋಧ ಪಕ್ಷದ ನಾಯಕರಾಗಿದ್ದಾರೆ. ಸದ್ಯ ಅವರು ಕರ್ನಾಟಕವನ್ನು ಪ್ರತಿನಿಧಿಸುತ್ತಿದ್ದಾರೆ. ರಾಜ್ಯಸಭೆಯ ಉಪಸಭಾಪತಿಯಾಗಿದ್ದ ಹಾಗೂ ಕೆಪಿಸಿಸಿ ಶಿಸ್ತು ಸಮಿತಿ ಅಧ್ಯಕ್ಷ ರೆಹಮಾನ್ ಖಾನ್ ಪುತ್ರ ಮನ್ಸೂರ್ ಖಾನ್ ಅವರಿಗೆ ಎಐಸಿಸಿ ಅವಕಾಶ ಕಲ್ಪಿಸಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ, ನಾರಾಯಣ ಕೊರಗಪ್ಪ, ಈರಣ್ಣ ಕಡಾಡಿ ಅವರ ಅವಧಿ ಮುಕ್ತಾಯವಾಗಲಿದೆ.



ಕರ್ನಾಟಕದಿಂದ ರಾಜ್ಯಸಭೆಯ ಈ ನಾಲ್ಕು ಸ್ಥಾನಗಳು ಸೇರಿ ರಾಜ್ಯಸಭೆಯ ಒಟ್ಟು 24 ಸ್ಥಾನಗಳಿಗೆ ಜೂನ್ 18ರಂದು ಚುನಾವಣೆ ನಿಗದಿಯಾಗಿದೆ. ಕರ್ನಾಟಕದಲ್ಲಿ ಕಾಂಗ್ರೆಸ್‌ಗೆ ಮೂರು ಹಾಗೂ ಬಿಜೆಪಿಗೆ ಒಂದು ಸ್ಥಾನ ಸಿಗಲಿದೆ. ನಾಮಪತ್ರ ಸಲ್ಲಿಸಲು ಜೂನ್ 8 ಕೊನೆ ದಿನವಾಗಿದೆ. ನಾಮಪತ್ರಗಳ ಪರಿಶೀಲನೆ 9ಕ್ಕೆ ನಡೆಯಲಿದ್ದು, ನಾಮಪತ್ರ ಹಿಂದಕ್ಕೆ ಪಡೆಯಲು 10 ಕೊನೆ ದಿನ. 18ರಂದು ಮತದಾನ ನಡೆಯಲಿದೆ. ಮತಗಳ ಎಣಿಕೆ ಸಂಜೆ 5ಕ್ಕೆ ನಡೆಯಲಿದೆ.

# ಮೊದಲ ಪುಟದಿಂದ

## ಮಾತುತಪ್ಪಿದ ಡಿಕೆಶಿ, ಡಿಕೆಸು

ನೀಡಿದ್ದರು. ಎರಡೂವರೆ ವರ್ಷದ ಬಳಿಕ ಸಿಎಂ ಆದಾಗ ನಿಮಗೇ ಈ ಖಾತೆಯನ್ನು ಕೊಡುವುದಾಗಿ ಹೇಳಿದ್ದರು. ಆದರೆ, ಇದೀಗ ಬೇರೆ ಖಾತೆ ಕೊಟ್ಟಿದ್ದಾರೆ. ಆತ್ಮಸಾಕ್ಷಿಗೆ ವಿರುದ್ಧವಾಗಿ ನಡೆದುಕೊಳ್ಳಲಾರೆ ಎಂದು ರಾಮಲಿಂಗಾ ರೆಡ್ಡಿ ತಿಳಿಸಿದರು.

## ಮಾತುಕೊಟ್ಟಿದ್ದು ಸತ್ಯ: ಡಿಕೆಶಿ

ಹೈಕಮಾಂಡ್ ನಿರ್ಧಾರದಿಂದಾಗಿ ಅವರಿಗೆ ಇಷ್ಟದ ಖಾತೆ ನೀಡಲು ಸಾಧ್ಯವಾಗಲಿಲ್ಲ ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

ಪಕ್ಷದ ಹಿರಿಯ ನಾಯಕರು. ಅವರಿಗೆ ಹಳ್ಳಿಗಳಲ್ಲಿ ಕೆಲಸ ಮಾಡಲು ಆಗಲ್ಲ ಎಂದಿದ್ದಾರೆ. ಬೇರೆ ಖಾತೆ ನೀಡಬೇಕಂಬ ಆಪೇಕ್ಷೆ ಅವರಿಗಿದೆ. ಈ ಬಗ್ಗೆ ಅವರ ಜೊತೆ ಚರ್ಚಿಸುತ್ತೇನೆ. ಕ್ಯಾಬಿನೆಟ್‌ನಲ್ಲಿ ಚರ್ಚಿಸಿ ಈ ಬಗ್ಗೆ ನಿರ್ಧರಿಸುತ್ತೇವೆ ಎಂದು ಹೇಳಿದರು.

ಡಿಕೆಶಿ ಅವರು ಸಚಿವ ರೆಡ್ಡಿ ಅವರಿಗೆ ಕರೆ ಮಾಡಿ ಸಮಾಧಾನಪಡಿಸಲು ಯತ್ನಿಸಿದಾಗ ಮತ್ತಷ್ಟು ಬೇಸರ ಹೊರಹಾಕಿದ ರಾಮಲಿಂಗಾರೆಡ್ಡಿ, ನನಗೆ ಜಲಸಂಪನ್ಮೂಲ ಖಾತೆ ಬೇಡವೇ ಬೇಡ. ಕೊಡುವುದಾದರೆ ಬೆಂಗಳೂರು ಅಭಿವೃದ್ಧಿ ಖಾತೆ ಕೊಡಿ, ಇಲ್ಲವಾದರೆ ಸಚಿವ ಸ್ಥಾನವನ್ನು ನೀವೇ ಇಟ್ಟುಕೊಳ್ಳಿ ಎಂದು ಖಡಾಖಂಡಿತವಾಗಿ ಹೇಳಿ ಫೋನ್ ಕಟ್ ಮಾಡಿದ್ದಾರೆ.

## ಸರ್ಕಾರದ ಮೊದಲ ವಿಕೆಟ್ ಪತನ

ಹೊರತು, ಕಾಂಗ್ರೆಸ್ ಪಕ್ಷಕ್ಕಲ್ಲ. ನನ್ನ ಜೀವನದಲ್ಲಿ ಎಂದಿಗೂ ಕಾಂಗ್ರೆಸ್‌ಗೆ ರಾಜೀನಾಮೆ ನೀಡಿಲ್ಲ, ಮುಂದೆಯೂ ನೀಡುವುದಿಲ್ಲ ಎಂದು ರಾಮಲಿಂಗಾ ರೆಡ್ಡಿ ನುಡಿದರು. ಕೋರಮಂಗಲದ ಕಚೇರಿಯಲ್ಲಿ ಮಾಧ್ಯಮಗಳ ಮುಂದೆಯೇ ರಾಜೀನಾಮೆ ಪತ್ರ ಸಿದ್ಧಪಡಿಸುವ ವೇಳೆ ಹೈಡ್ರಾಮಾ ನಡೆಯಿತು. ಯೂತ್ ಕಾಂಗ್ರೆಸ್ ನಾಯಕ ಮನೋಹರ್ ಆಗಮಿಸಿ, ಡಿಕೆ ಶಿವಕುಮಾರ್ ಮಾತನಾಡುತ್ತಾರೆ ನೀವು ದಯವಿಟ್ಟು ದುಡುಕಬೇಡಿ ಎಂದು ಮನವೊಲಿಸಲು ಯತ್ನಿಸಿದಾಗ ರಾಮಲಿಂಗಾರೆಡ್ಡಿ ತೀವ್ರ ಆಕ್ರೋಶಗೊಂಡರು.

ಮನೋಹರ್ ನನಗೆ ಕೋಪ ಬರಿಸಬೇಡಿ, ನನ್ನ ನಿರ್ಧಾರ ಮುಗಿದ ಕಥೆ. ನೀವು ಮೊದಲು ಹೊರಗೆ ಹೋಗಿ, ನಾನು ಮಾತನಾಡಬೇಕು ಎಂದು ಗದರಿದ್ದಾರೆ. ಅಲ್ಲದೆ, ನನ್ನ ಮಗಳು ಅಥವಾ ಕುಟುಂಬದವರ ಬಳಿಯೂ ನಾನು ಈ ಬಗ್ಗೆ ಚರ್ಚಿಸಿಲ್ಲ. 1973ರಲ್ಲಿ ವಿದ್ಯಾರ್ಥಿ ನಾಯಕನಾಗಿ ರಾಜಕೀಯಕ್ಕೆ ಬಂದು 53 ವರ್ಷಗಳಿಂದ ಪಕ್ಷದಲ್ಲಿದ್ದೇನೆ. 9 ಬಾರಿ ಶಾಸಕನಾಗಿದ್ದೇನೆ. ನಾನಾಗಿಯೇ ಯಾರ ಬಳಿಗೂ ಹೋಗಿ ರಾಜೀನಾಮೆ ಪತ್ರ ಕೊಡುವುದಿಲ್ಲ. ಇಲ್ಲಿಂದಲೇ ಘೋಷಿಸುತ್ತಿದ್ದೇನೆ ಎಂದು ಖಡಕ್ ಆಗಿ ಹೇಳಿದರು.

ಯಾವಾಗಲೂ ಸಮಧಾನಚಿತ್ತರಾಗಿ ಇರುತ್ತಿದ್ದ ಹಿರಿಯ ನಾಯಕನೇ ಹೀಗೆ ಬಹಿರಂಗವಾಗಿ ಬಂಡಾಯ ಬಾವುಟ ಹಾರಿಸಿರುವುದು ಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ದೊಡ್ಡ ಹಿನ್ನಡೆಯಾಗಿದೆ. ಆರಂಭದಲ್ಲೇ ಆಪ್ತ ವಲಯದ ಈ ಅಸಮಾಧಾನ ಇತರ ಸಚಿವರಿಗೂ ಹರಡಿದರೆ ಸರ್ಕಾರದ ಮೇಲೆ ಹಿಡಿತ ಸಾಧಿಸುವುದು ಕಷ್ಟವಾಗಬಹುದು ಎಂಬ ಆತಂಕ ಹೈಕಮಾಂಡ್ ಅನ್ನು ಕಾಡಲಾರಂಭಿಸಿದೆ.

## ಸರ್ಕಾರಕ್ಕೆ ಎಚ್ಚರಿಕೆ ಗಂಟೆ

ನಾಯಕರು ತಕ್ಷಣ ಗಂಭೀರವಾಗಿ ಪರಿಗಣಿಸಿ ಪರಿಹರಿಸಬೇಕೆಂದು ಬಯಸುವೆ ಎಂದು ಮಾಜಿ ಸಚಿವ ಎಚ್.ಕೆ.ಪಾಟೀಲ್ ಎಚ್ಚರಿಕೆ ನೀಡಿದ್ದಾರೆ.

ರಾಮಲಿಂಗಾ ರೆಡ್ಡಿ ಅವರು ರಾಜೀನಾಮೆ ನೀಡಿರುವ ವಿಚಾರವಾಗಿ ಪ್ರತಿಕ್ರಿಯಿಸಿರುವ ಎಚ್.ಕೆ.ಪಾಟೀಲ್, ರಾಜೀನಾಮೆ ನಿರ್ಧಾರವನ್ನು ಪುನರ್ ಪರಿಶೀಲಿಸುವಂತೆ ಮನವಿ ಮಾಡಿದರು.

## ಎನ್. ಉದಯಕುಮಾರ್‌ಗೆ 'ಖಾದ್ರಿ ಶಾಮಣ್ಣ ಪತ್ರಿಕೋದ್ಯಮ ಪ್ರಶಸ್ತಿ'

ಸಲ್ಲಿಸಿರುವ ಇವರು, 'ಮಯೂರ' ಮಾಸಪತ್ರಿಕೆಯಲ್ಲೂ ಕಾರ್ಯನಿರ್ವಹಿಸಿದ್ದಾರೆ. 'ಪ್ರಜಾವಾಣಿ'ಯಲ್ಲಿ ಸಹಾಯಕ ಸಂಪಾದಕರಾಗಿ ವಿವಿಧ ವಿಭಾಗಗಳಲ್ಲಿ ಯಶಸ್ವಿಯಾಗಿ ಸೇವೆ ಸಲ್ಲಿಸಿರುವ ಅವರು, ತಮ್ಮ 33 ವರ್ಷಗಳ ಸುದೀರ್ಘ ವೃತ್ತಿಜೀವನಕ್ಕೆ 2025ರ ಜೂನ್‌ನಲ್ಲಿ ನಿವೃತ್ತಿ ಘೋಷಿಸಿದ್ದರು. ಪತ್ರಿಕೋದ್ಯಮ ವಲಯದಲ್ಲಿ ಸದಾ ನಗುಮುಖದ ಹಾಗೂ ಸದ್ದುಗದ್ದಲವಿಲ್ಲದ ಕರ್ಮಯೋಗಿ ಎಂದೇ ಅವರು ಗುರುತಿಸಿಕೊಂಡಿದ್ದಾರೆ.

ಕಳೆದ ವರ್ಷ ಈ ಪ್ರಶಸ್ತಿಯನ್ನು ಮೈಸೂರಿನ ಹಿರಿಯ ಪತ್ರಕರ್ತ ಡಾ. ಕೂಡ್ಲಿ ಗುರುರಾಜ್ ಅವರಿಗೆ ಪ್ರದಾನ ಮಾಡಲಾಗಿತ್ತು. ಸದ್ಯ ಉದಯಕುಮಾರ್ ಅವರಿಗೆ ಈ ಸಾಲಿನ ಪ್ರಶಸ್ತಿ ನೀಡಲು ಟ್ರಸ್ಟ್ ಅತ್ಯಂತ ಸಂತಸ ವ್ಯಕ್ತಪಡಿಸಿದೆ ಎಂದು ಟ್ರಸ್ಟ್‌ನ ಪರವಾಗಿ ಪತ್ರಕರ್ತ ಎಚ್.ಆರ್. ಶ್ರೀಶ ಅವರು ಮಾಹಿತಿ ನೀಡಿದ್ದಾರೆ.

## ಕಾಡಾನೆ ದಾಳಿ: ಮಹಿಳೆ ಸಾವು

**ಕೊಡಗು:** ಕಾಡಾನೆ ದಾಳಿಯಿಂದ ನಿವೃತ್ತ ಐಪಿಎಸ್ ಅಧಿಕಾರಿ ಸುನಿಲ್ ಅಚ್ಚಯ್ಯ ಅವರ ಪತ್ನಿ ಸಂಧ್ಯಾ ಅಚ್ಚಯ್ಯ (52) ಸಾವನ್ನಪ್ಪಿರುವ ದುರ್ಘಟನೆ ಶುಕ್ರವಾರ ನಡೆದಿದೆ.

ದಕ್ಷಿಣ ಕೊಡಗಿನ ಗೋಣಿಕೊಪ್ಪಲು ಸಮೀಪದ ಕೋನನಕಟ್ಟೆಯ ಅವರ ಸ್ವಂತ ತೋಟದಲ್ಲಿ ದುರ್ಘಟನೆ ಸಂಭವಿಸಿದೆ. ಸಂಧ್ಯಾ ಅವರು ತಮ್ಮ ಎಸ್ಟೇಟ್‌ಗೆ ಮ್ಯಾನೇಜರ್ ಹಾಗೂ ಚಾಲಕರೊಂದಿಗೆ ತೆರಳಿದ್ದ ವೇಳೆ ಕಾಡಾನೆ ದಾಳಿ ನಡೆಸಿದೆ. ಎಸ್ಟೇಟ್ ಮ್ಯಾನೇಜರ್ ಮತ್ತು ಚಾಲಕ ಅಲ್ಲಿಂದ ತಪ್ಪಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ, ಸಂಧ್ಯಾ ಅವರಿಗೆ ತಪ್ಪಿಸಿಕೊಳ್ಳಲು ಸಾಧ್ಯವಾಗದೆ ಆನೆ ದಾಳಿಗೆ ಒಳಗಾಗಿದ್ದರು. ಗಂಭೀರ ಗಾಯಗೊಂಡಿದ್ದ ಅವರನ್ನು ತಕ್ಷಣ ಆಸ್ಪತ್ರೆಗೆ ಸಾಗಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.



# ಸಂಚಾರಿ ದಂಡ ಪಾವರಿಗೆ ಶೇ.50ರಷ್ಟು ವಿನಾಯಿತಿ ಘೋಷಣೆ

ಮೈಸೂರು: ಸಂಚಾರ ನಿಯಮ ಉಲ್ಲಂಘಿಸಿರುವ ವಾಹನ ಸವಾರರಿಗೆ ರಾಜ್ಯ ಸರ್ಕಾರ ಮತ್ತೆ ಸಿಹಿಸುದ್ದಿ ನೀಡಿದ್ದು, ಶೇ 50 ರಿಯಾಯಿತಿಯಲ್ಲಿ ದಂಡವನ್ನು ಪಾವತಿಸಲು ಆದೇಶ ಹೊರಡಿಸಿದೆ.

ಈ ಹಿನ್ನಲೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಸಾರ್ವಜನಿಕರಿಗೆ ಹಾಗೂ ವಾಹನ ಚಾಲಕರುಗಳಿಗೆ ಸಂಚಾರ ನಿಯಮ ಉಲ್ಲಂಘನೆ ಮಾಡಿ ಇ- ಚಲನ್ ನಲ್ಲಿ ಮೇ 2026ರ ಮೊದಲು ದಾಖಲಾಗಿ ಬಾಕಿ ಇರುವ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇಕಡಾ 50ರಷ್ಟು ರಿಯಾಯಿತಿಯಲ್ಲಿ ದಂಡದ ಮೊತ್ತವನ್ನು ಪಾವತಿ ಮಾಡುವಂತೆ ಮೈಸೂರು ಪೊಲೀಸ್ ಅಧೀಕ್ಷಕ ಆದೇಶ ಹೊರಡಿಸಿದ್ದಾರೆ.

ಸರ್ಕಾರದ ಆದೇಶದಂತೆ ಸಂಚಾರಿ ನಿಯಮಗಳ ಉಲ್ಲಂಘನೆ ಬಗ್ಗೆ ಇ- ಚಲನ್ ನಲ್ಲಿ ಮೇ -2026 ರ ಮೊದಲು ದಾಖಲಾಗಿ ಬಾಕಿ ಇರುವ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇಕಡಾ 50 ರಷ್ಟು ರಿಯಾಯಿತಿ ನೀಡಿ ದಂಡದ ಮೊತ್ತವನ್ನು ಜೂ.21 ರಿಂದ ಜು.10(ಒಟ್ಟು 20 ದಿನಗಳು)



ರವರೆಗೆ ಪಾವತಿಸಲು ಮೇಲ್ಕಂಡ ಉಲ್ಲೇಖದಂತೆ ಸರ್ಕಾರವು ಆದೇಶವನ್ನು ಹೊರಡಿಸಿದೆ. ಆದ್ದರಿಂದ ಸಂಚಾರ ನಿಯಮ ಉಲ್ಲಂಘನೆ ಮಾಡಿರುವ ಸಾರ್ವಜನಿಕರು ಹಾಗೂ ವಾಹನ ಚಾಲಕರುಗಳಿಗೆ ಇ- ಚಲನ್ ನಲ್ಲಿ ಮೇ -2026 ರ ಮೊದಲು ದಾಖಲಾಗಿ ಬಾಕಿ ಇರುವ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇಕಡಾ 50ರಷ್ಟು ರಿಯಾಯಿತಿ ನೀಡಲಾಗಿದೆ. ಈ ದಂಡದ ಮೊತ್ತವನ್ನು ಜೂ.21 ರಿಂದ 10ರವರೆಗೆ ಹಾಗೂ ಮೈಸೂರು ಜಿಲ್ಲೆಯ ಯಾವುದೇ ಹತ್ತಿರದ ಪೊಲೀಸ್ ಠಾಣೆಗೆ ಹೋಗಿ ದಂಡ ಪಾವತಿ ಮಾಡಿಕೊಳ್ಳುವಂತೆ ಮೈಸೂರು ಜಿಲ್ಲಾ ಪೊಲೀಸ್ ವತಿಯಿಂದ ಕೋರಿಕೊಳ್ಳುತ್ತೇವೆ ಎಂದು ಆದೇಶಿಸಿದರು.

# ಜವಾಬ್ದಾರಿಯಾಗಿ ಕಾರ್ಯ ನಿರ್ವಹಿಸಿ

ಚಾಮರಾಜನಗರ, ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯವನ್ನು ಅತ್ಯಂತ ಜವಾಬ್ದಾರಿಯುತವಾಗಿ ನಿರ್ವಹಿಸುವಂತೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಾದ ಶ್ರೀರೂಪ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗುಂಡ್ಲುಪೇಟೆಯ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್.ಐ.ಆರ್–2026) ಸಂಬಂಧ ಮತಗಟ್ಟೆ ಮಟ್ಟದ ಅಧಿಕಾರಿಗಳು (ಬಿ.ಎಲ್.ಒ) ಹಾಗೂ ಸೂಪರ್ ವೈಸರ್‌ಗಳಿಗೆ ಗುರುವಾರ (ಜೂ.4) ಹಮ್ಮಿಕೊಳ್ಳಲಾಗಿದ್ದ ತರಬೇತಿ ಕಾರ್ಯಾಗಾರ ಉದ್ದೇಶಿಸಿ ಅವರು ಮಾತನಾಡಿದರು. ಎಲ್ಲ ಅರ್ಹ ನಾಗರಿಕರನ್ನು ಮತದಾರರ ಪಟ್ಟಿಗೆ ಸೇರ್ಪಡೆಗೊಳಿಸುವುದು, ಪುನರಾವರ್ತಿತ ಹಾಗೂ ಅನರ್ಹ ದಾಖಲೆಗಳನ್ನು ತೆರವುಗೊಳಿಸುವುದು, ಮತದಾರರ ಪಟ್ಟಿಯ ನಿಖರತೆ ಮತ್ತು ವಿಶ್ವಾಸಾರ್ಹತೆಯನ್ನು ಹೆಚ್ಚಿಸುವುದು, ಮುಕ್ತ, ನ್ಯಾಯ ಸಮ್ಮತ ಮತ್ತು ಪಾರದರ್ಶಕ ಚುನಾವಣೆ ನಡೆಸಲು ನೆರವಾಗುವುದು ಪರಿಷ್ಕರಣೆಯ ಪ್ರಮುಖ ಉದ್ದೇಶಗಳಾಗಿವೆ ಎಂದು ಜಿಲ್ಲಾಧಿಕಾರಿಯವರು ತಿಳಿಸಿದರು.

ಜೂನ್ 30 ರಿಂದ ಜುಲೈ 29ರವರೆಗೆ ಮನೆ-ಮನೆ ಭೇಟಿ, ಆಗಸ್ಟ್ 5ರಂದು ಕರಡು ಮತದಾರರ ಪಟ್ಟಿ ಪ್ರಕಟಣೆ, ಆಗಸ್ಟ್ 5 ರಿಂದ ಸೆಪ್ಟೆಂಬರ್ 4ರವರೆಗೆ ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಕೆ ಹಾಗೂ ಅಕ್ಟೋಬರ್ 7ರಂದು ಅಂತಿಮ ಮತದಾರರ ಪಟ್ಟಿ



ಪ್ರಕಟಿಸಲಾಗುವುದು ಎಂದರು. ಜಿಲ್ಲೆಯಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯವನ್ನು ಯಶಸ್ವಿಗೊಳಿಸಲು ಎಲ್ಲ ಅಧಿಕಾರಿಗಳು, ಸಿಬ್ಬಂದಿ ಹಾಗೂ ಸಾರ್ವಜನಿಕರು ಸಹಕರಿಸಬೇಕು ಎಂದು ಜಿಲ್ಲಾಧಿಕಾರಿ ಶ್ರೀರೂಪ ಅವರು ತಿಳಿಸಿದರು.

ತಹಶೀಲ್ದಾರ್ ಎಂ.ಎಸ್. ತನ್ಮಯ್, ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದ ಮತದಾರರ ನೊಂದಣಾಧಿಕಾರಿಗಳು ಹಾಗೂ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಎನ್. ವಿಶ್ವನಾಥ್ ತರಬೇತಿ ಕಾರ್ಯಾಗಾರದಲ್ಲಿ ಉಪಸ್ಥಿತರಿದ್ದರು.

# ಭೇದವಿಲ್ಲದೆ ಗಾಳಿ, ನೆರಳು ನೀಡುವ ಪ್ರಕೃತಿ

## ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ನ್ಯಾ.ಎಂ.ಎಚ್.ಅಣ್ಣಯ್ಯನವರ್ ಅಭಿಮತ । ವಿಶ್ವ ಪರಿಸರ ದಿನ-2026

ರಾಮನಗರ: ಯಾವುದೇ ಜಾತಿ, ಧರ್ಮ, ಮತ ಭೇದವಿಲ್ಲದೆ ಗಿಡ, ಮರಗಳು ಎಲ್ಲರಿಗೂ ಸಮಾನವಾಗಿ ನೆರಳು, ಶುದ್ಧ ಗಾಳಿ ಮತ್ತು ಆಮ್ಲಜನಕವನ್ನು ಉಚಿತವಾಗಿ ನೀಡುತ್ತದೆ. ಸರ್ಕಾರದ 5 ಗ್ಯಾರಂಟಿಗಳಂತೆ ಪರಿಸರವೂ ಜನರಿಗೆ ಗಾಳಿ, ನೀರು, ಬೆಳಕು, ಮಣ್ಣು ಹಾಗೂ ಆಮ್ಲಜನಕ ಎಂಬ ಐದು ಅಮೂಲ್ಯ ಕೊಡುಗೆಗಳನ್ನು ನೀಡುತ್ತಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ನ್ಯಾ.ಎಂ.ಎಚ್.ಅಣ್ಣಯ್ಯನವರ್ ಹೇಳಿದರು.

ರಾಮನಗರದ ಬಸವನಪುರದ ರಣಹದ್ದು ವನ್ಯಜೀವಿ ಧಾಮದ ಶ್ರೀ ರಾಮದೇವರ ಬೆಟ್ಟದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ನ್ಯಾಯಾಂಗ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಧರೆ ಫೌಂಡೇಷನ್, ಜಿಲ್ಲಾ ವಕೀಲರ ಸಂಘ ಹಾಗೂ ಅರಣ್ಯ ಇಲಾಖೆಯ ಸಹಯೋಗದಲ್ಲಿ ಆಯೋಜಿಸಲಾಗಿದ್ದ ವಿಶ್ವ ಪರಿಸರ ದಿನ-2026 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಪ್ರತಿಯೊಬ್ಬರು ಪರಿಸರ ಸಂರಕ್ಷಣೆಗೆ ಕೈಜೋಡಿಸಬೇಕು ಎಂದರು.

ಭೂಮಿಯಲ್ಲಿ ಪ್ಲಾಸ್ಟಿಕ್ ಕರಗಲು ಸುಮಾರು 400 ವರ್ಷಗಳ ಕಾಲ ಬೇಕಾಗುತ್ತದೆ. ಅದನ್ನು ಸುಟ್ಟರೆ ವಾಯುಮಾಲಿನ್ಯ ಉಂಟಾಗುತ್ತದೆ. ರಸ್ತೆಬದಿಯಲ್ಲಿ ಎಸೆದರೆ ಸೊಳ್ಳೆ ಹಾಗೂ ಇತರ ಸಮಸ್ಯೆಗಳು ಹೆಚ್ಚಾಗುತ್ತವೆ. ಮಣ್ಣಿನಲ್ಲಿ ಪ್ಲಾಸ್ಟಿಕ್ ಸೇರುವುದರಿಂದ ಗಿಡಗಳ ಬೆಳವಣಿಗೆಯ ಮೇಲೂ



ಪರಿಣಾಮ ಬೀರುತ್ತದೆ ಎಂದು ಪ್ಲಾಸ್ಟಿಕ್ ಬಳಕೆಯಿಂದ ಉಂಟಾಗುವ ದುಷ್ಪರಿಣಾಮಗಳ ತಿಳಿಸಿ, ಪ್ಲಾಸ್ಟಿಕ್ ನಿಷೇಧಕ್ಕೆ ಸರ್ಕಾರವು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಾಲುಮರದ ತಿಮ್ಮಕ್ಕ ಅವರನ್ನು ಸ್ಮರಿಸಲಾಯಿತು.ರಾಮನಗರ ತಾಲ್ಲೂಕಿನ ಅರಳ್ಳಿಯ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ (ಪರಿಸರ) ಸಾಲುಮರದ ನಿಂಗಣ್ಣ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ನ್ಯಾ. ಪಂಚಾಕ್ಷರಿ ಎಂ., ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ನ್ಯಾ. ಎಸ್.ಎ. ಹಿದಾಯತ್ ಉಲ್ಲಾ ಷರೀಫ್, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸಿ.ಜೆ. ಎಂ. ಲೋಕೇಶ, ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನಿವೇದಿತ ಟಿ.ಎಂ., ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ. ಎಫ್.ಸಿ ಅವಿನಾಶ್ ಚಿಂದು ಹೆಚ್, ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ಪುಟ್ಟರಾಜ ಸಿ., ಅಪರ ಜಿಲ್ಲಾಧಿಕಾರಿ ಆರ್. ಚಂದ್ರಯ್ಯ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಸವಿತ

### ಪರಿಸರ ಸಮತೋಲನ ಕಾಪಾಡಬೇಕು: ಕೆ.ಕೆಂಪಯ್ಯ

**ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಕೆ. ಕೆಂಪಯ್ಯ ಮಾತನಾಡಿ, ಭೂಮಿ ಮತ್ತು ವಿಶ್ವದ ಆರಂಭಿಕ ಅವಧಿಯಲ್ಲಿ ಪ್ರಕೃತಿ ಸಂಪತ್ತು ಹಾಗೂ ಜೀವ ಸಂಪತ್ತು ಸಮತೋಲನದಿಂದ ಅಸ್ತಿತ್ವದಲ್ಲಿದ್ದವು, ಕಾಲಕ್ರಮೇಣ ಜೀವ ಸಂಪತ್ತಿನಲ್ಲಿ ಮನುಷ್ಯನು ಬುದ್ಧಿವಂತಿಕೆಯೊಂದಿಗೆ ಅಭಿವೃದ್ಧಿ ಹೊಂದಿದ್ದರೂ, ತಂತ್ರಜ್ಞಾನ ಮತ್ತು ಮಾನವ ಚಟುವಟಿಕೆಗಳ ಹೆಚ್ಚಳದಿಂದ ಪರಿಸರ ಸಮತೋಲನದ ಹದಗೆಡುತ್ತಿದೆ ಎಂದು ಅಭಿಪ್ರಾಯಪಟ್ಟರು.**

ಪಿ.ಆರ್., ಪ್ರಾದೇಶಿಕ ಅರಣ್ಯ ಇಲಾಖೆಯ ಉಪ ಅರಣ್ಯ ಸಂರಕ್ಷಣಾಧಿಕಾರಿ ರಾಮಕೃಷ್ಣಪ್ಪ ಎಂ., ಸಾಮಾಜಿಕ ಅರಣ್ಯ ಇಲಾಖೆಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಪ್ರಸನ್ನ, ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷರಾದ ಜಯರಾಮ್ ವಿ.ಎನ್., ಕಾರ್ಯದರ್ಶಿ ಚಂದ್ರಶೇಖರ್ ಟಿ.ಎಂ., ಖಜಾಂಚಿ ಜ್ಯೋತಿ ಎಚ್.ಡಿ., ಮಾಲಿನ್ಯ ನಿಯಂತ್ರಣ ಮಂಡಳಿಯ ಹಿರಿಯ ಪರಿಸರ ಅಧಿಕಾರಿ ಮಂಜುನಾಥ, ಮಾತೃ ಫೌಂಡೇಶನ್ (ರಿ) ಅಧ್ಯಕ್ಷರು ಹಾಗೂ ವಕೀಲರಾದ ಆರ್. ಚಂದ್ರಕುಮಾರ್, ಬಿ.ಟಿ. ರಾಜೇಂದ್ರ ಮತ್ತು ಹಿರಿಯ ಸಿವಿಲ್ ನ್ಯಾಯಾಧೀಶರು ಅವರು ಉಪಸ್ಥಿತರಿದ್ದರು.

# ವಿದ್ಯಾರ್ಥಿನಿಲಯಕ್ಕೆ ಜಿಲ್ಲಾಧಿಕಾರಿ ಭೇಟಿ

ಚಾಮರಾಜನಗರ, ಶ್ರೀರೂಪ ಅವರು ಗುಂಡ್ಲುಪೇಟೆ ಪಟ್ಟಣದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ನಿರ್ವಹಿಸಲಾಗುತ್ತಿರುವ ಡಿ. ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯಕ್ಕೆ ಗುರುವಾರ (ಜೂ.4) ಭೇಟಿ ನೀಡಿ ಪರಿಶೀಲನೆ ನಡೆಸಿದರು.

ವಿದ್ಯಾರ್ಥಿಗಳಿಗೆ ಒದಗಿಸಲಾಗುತ್ತಿರುವ ಮೂಲಭೂತ ಸೌಲಭ್ಯಗಳು, ವಸತಿ ವ್ಯವಸ್ಥೆಗಳನ್ನು ವೀಕ್ಷಿಸಿದರು. ಅಡುಗೆ ಮನೆಗೆ ತೆರಳಿ ಅಲ್ಲಿನ ಆಹಾರ ಧಾನ್ಯ, ಸಿದ್ದಪಡಿಸಲಾಗಿದ್ದ ಆಹಾರದ ಗುಣಮಟ್ಟವನ್ನು ಪರಿಶೀಲಿಸಿದರು.

ಶೈಕ್ಷಣಿಕ ಸೌಲಭ್ಯಗಳು, ವಿದ್ಯಾರ್ಥಿಗಳ ಕಲಿಕಾ ಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದರು. ವಿದ್ಯಾರ್ಥಿಗಳ ಕಲ್ಯಾಣಕ್ಕೆ ಸಂಬಂಧಿಸಿದ ಸೌಲಭ್ಯಗಳನ್ನು ಸಮರ್ಪಕವಾಗಿ ಕಲ್ಪಿಸಬೇಕು ಎಂದು ಜಿಲ್ಲಾಧಿಕಾರಿಯವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ವಿದ್ಯಾರ್ಥಿಗಳಿಗೆ ಉತ್ತಮ ಶೈಕ್ಷಣಿಕ ಹಾಗೂ ವಸತಿ ವಾತಾವರಣ ಕಲ್ಪಿಸುವುದು ಸರ್ಕಾರದ ಆದ್ಯತೆಯಾಗಿದ್ದು, ವಿದ್ಯಾರ್ಥಿನಿಲಯಗಳ ಗುಣಮಟ್ಟದ ನಿರ್ವಹಣೆಗೆ ಹೆಚ್ಚಿನ ಒತ್ತು ನೀಡಬೇಕು ಎಂದು



ಜಿಲ್ಲಾಧಿಕಾರಿ ಶ್ರೀರೂಪ ಅವರು ತಿಳಿಸಿದರು. ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಎನ್. ವಿಶ್ವನಾಥ್ ಭೇಟಿಯ ವೇಳೆ ಇದ್ದರು.

# ಗೋ ಪಯಣ ಆಪ್ ಗೆ ಚಾಲನೆ

ಮೈಸೂರು: ರಾಜ್ಯದಲ್ಲಿ ಆಟೋ, ಕ್ಯಾಬ್ ಮೊದಲಾದವು ಬಳಸಿಕೊಳ್ಳುತ್ತಿರುವ ಆಪ್‌ಗಳು, ಈ ರೀತಿಯ ಸೇವೆಗಳು ಹೊರ ರಾಜ್ಯ ಇಲ್ಲವೇ ಹೊರ ದೇಶದ್ದಾಗಿವೆ. ಹೀಗಾಗಿ ಇಲ್ಲಿನದೇ ಆದ ಗೋ ಪಯಣ ಎಂಬ ಆಪ್ ಸೌಲಭ್ಯ ರೂಪಿಸಿದ್ದು, ಇದಕ್ಕೆ ಜೂ.7ರ ಬೆಳಗ್ಗೆ 10ಕ್ಕೆ ನಂಜುಮಳಿಗೆಯ ಗೋಪಾಲಸ್ವಾಮಿ ಪಿಯು ಕಾಲೇಜಿನಲ್ಲಿ ಆಯೋಜಿಸಿರುವ ಸಮಾರಂಭದಲ್ಲಿ ಚಾಲನೆ ದೊರೆಯುತ್ತಿದೆ ಎಂದು ಇಂಡಿಯಾ ಮೈಂಡ್ ಟೆಕ್ನಾಲಜೀಸ್ ಎಲ್‌ಎಲ್‌ಪಿ ಸಂಸ್ಥಾಪಕ ಡಾ.ಮುರಳಿ ತಿಳಿಸಿದರು.

ನಗರದಲ್ಲಿ ಸುದ್ದಿಗಾರರಿಗೆ ಮಾಹಿತಿ ನೀಡಿ, ಆಟೋ ಚಾಲಕರು ಒಂದು ಬಾಇ 25 ರೂ. ಹಾಗೂ ಕ್ಯಾಬ್ ಚಾಲಕರು 85 ರೂ. ಪಾವತಿಸಿದಲ್ಲಿ ಇದು ದಿನದ 24 ಗಂಟೆ ಸಕ್ರಿಯವಾಗಿರುತ್ತದೆ. ನಗರದ ಪ್ರದೇಶ ಮಾತ್ರವಲ್ಲ, ಗ್ರಾಮಾಂತರ ಪ್ರದೇಶದಲ್ಲಿನ ಆಟೋ, ಕ್ಯಾಬ್ ಚಾಲಕರು ಸಹಾ ಸದಸ್ಯರಾಗಬಹುದಾಗಿದೆ. ಈ ಆಪ್ ಬಳಸಿಕೊಂಡು ಪ್ರಯಾಣಿಸುವವರು ನೇರವಾಗಿ ಆಟೋ ಅಥವಾ ಕ್ಯಾಬ್




ಚಾಲಕರಿಗೇ ಹೋಗುತ್ತದೆ. ಆದರೆ ಈ ವ್ಯವಸ್ಥೆ ಇತರೆ ಆಪ್‌ಗಳಲ್ಲಿಲ್ಲ. ಅದು ನೇರವಾಗಿ ಕಂಪನಿಗೆ ಹೋಗಿ ಬಹಳಷ್ಟು ಸಮಯದ ಬಳಿಕ ಸಂದಾಯವಾಗುತ್ತದೆ. ಈ ರೀತಿಯ ವಿಳಂಬ ತಮ್ಮ ಗೋ ಪಯಣದಲ್ಲಿಲ್ಲ ಎಂದು ವಿವರಿಸಿದರು. ಇದಲ್ಲದೆ, ಸರ್ಕಾರ ನಿಗದಿಪಡಿಸಿದ ದರವನ್ನು ಮಾತ್ರ ಪ್ರಯಾಣಿಕರು ಪಾವತಿಸುತ್ತಾರೆ. ಯಾವುದೇ ಹೆಚ್ಚುವರಿ ಶುಲ್ಕ ಅಥವಾ ಗುಪ್ತ ವೆಚ್ಚ ಇರುವುದಿಲ್ಲ. ರಾಜ್ಯದ ಜನತೆಯ ಅಭಿವೃದ್ಧಿ ಗಮನದಲ್ಲಿರಿಸಿಕೊಂಡು ಈ ಆಪ್ ರೂಪಿಸಲಾಗಿದೆ ಎಂದು ವಿವರಿಸಿದರು. ಸಿಇಓ ಪೃಥ್ವಿ, ಧನುಷ್, ನವನೀತ್ ಹಾಜರಿದ್ದರು.

## ವಿಶ್ವ ಪರಿಸರ ದಿನವನ್ನು ಗಿಡ ನೆಡುವ ಮೂಲಕ ಚಾಲನೆ

# ಮೈಸೂರು ಅಭಿವೃದ್ಧಿ ಪಡಿಸಲು ಅಗತ್ಯ ಸಹಕಾರ

ಮೈಸೂರು: ಮೈಸೂರು ಸುಂದರ ನಗರವಾಗಿದ್ದು, ಅದನ್ನು ಪ್ರವಾಸೋದ್ಯಮ ದೃಷ್ಟಿಯಿಂದಲೂ ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಕೇಂದ್ರ ಅಗತ್ಯ ಸಹಕಾರ ನೀಡಲಿದೆ ಎಂದು ಕೇಂದ್ರ ಪ್ರವಾಸೋದ್ಯಮ ಇಲಾಖೆ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಭರವಸೆ ನೀಡಿದರು.

ನಗರದ ಕಾರಂಜಿಕೆರೆಯಲ್ಲಿ ಆಯೋಜಿಸಿದ್ದ ವಿಶ್ವ ಪರಿಸರ ದಿನವನ್ನು ಗಿಡ ನೆಡುವ ಮೂಲಕ ಚಾಲನೆ ನೀಡಿ ಮಾತನಾಡಿದರು. ಮೈಸೂರು ಪ್ರವಾಸೋದ್ಯಮದ ಅಭಿವೃದ್ಧಿಗೆ ಈಗಾಗಲೇ ಪ್ರಧಾನಿ ನರೇಂದ್ರಮೋದಿ ನೇತೃತ್ವದ ಸರ್ಕಾರ ಸಾಕಷ್ಟು ಸಹಕಾರ ನೀಡಿದ್ದು, ಮುಂದಿನ ದಿನಗಳಲ್ಲಿ ಅಗತ್ಯ ನೆರವು ನೀಡಲಾಗುವುದು. ಇಂದು ಪರಿಸರ ಸಂರಕ್ಷಣೆ ಎಂಬುದು ಕೇವಲ ಸರ್ಕಾರದಿಂದ ಮಾತ್ರವ ಸಾಧ್ಯವಿಲ್ಲ ಎಲ್ಲರ ಸಹಕಾರ ಮುಖ್ಯ



ಎಂದು ಹೇಳಿದರು.

ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಕೇಂದ್ರ ಸಚಿವರು ಕಾರಂಜಿ ಕೆರೆಯಲ್ಲಿ ದೇಸಿಯ ತಳಿಯನ್ನು ನೆಟ್ಟಿದ್ದಾರೆ. ಮೈಸೂರಿನ ಅಭಿವೃದ್ಧಿಗೆ ಈಗಾಗಲೇ ಹಲವು ಅನುದಾನ ನೀಡಿದ್ದಾರೆ. ರಾಜ್ಯ ಸರ್ಕಾರದ ಯಡವಟ್ಟಿನಿಂದಾಗಿ ಮಾಲ್ ಕೆಲಸ ಅರ್ಧಕ್ಕೆ ನಿಂತಿದೆ. ಚಾಮುಂಡಿ ಬೆಟ್ಟದ ಕೆಲಸವೂ ಅರ್ಧಕ್ಕೆ ನಿಂತಿದೆ. ಆದರೆ, ಕಾರಂಜಿಕೆರೆ ಮುಂದುವರೆದ ಕಾಮಗಾರಿಗೆ ಅನುದಾನಕ್ಕೆ ಮನವಿ ಮಾಡುತ್ತಿದ್ದೇನೆ. ಇನ್ನೂ ಅಂಬಾರಿಯನ್ನು ಹೊರುತ್ತಿದ್ದ ಕಾಡಾನೆ ದಾಳಿಗೆ ತುತ್ತಾದ ಅರ್ಜುನನ ಸ್ಮಾರಕ ಹಾಗೂ ವೃತ್ತ ನಿರ್ಮಾಣಕ್ಕೆ ಮನವಿ ಮಾಡಿದ್ದೇನೆ. ಜತೆಗೆ ಮಡಿಕೇರಿಯ ಕೋಟೆಯನ್ನು ಈಗಾಗಲೇ ರಾಷ್ಟ್ರೀಯ ಸ್ಮಾರಕವಾಗಿ ಘೋಷಣೆಯಾಗಿದೆ. ಅದರ ಅಭಿವೃದ್ಧಿಗೆ ಅನುದಾನ ಒದಗಿಸಬೇಕೆಂದು ತಿಳಿಸಿದರು. ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಎಂ.ಸುಬ್ಬಣ್ಣ, ಮಾಜಿ ಮೇಯರ್ ಶಿವಕುಮಾರ್, ಸಂದೇಶ್ ಸ್ವಾಮಿ, ಉಪ ಮೇಯರ್ ಶೈಲೇಂದ್ರ, ಚಾಮರಾಜ ಕ್ಷೇತ್ರದ ಮುಖಂಡ ದಿನೇಶ್ ಗೌಡ ಇನ್ನಿತರರು ಉಪಸ್ಥಿತರಿದ್ದರು.

### ಪ್ರಾಣಿಗಳ ಸಮೀಕ್ಷೆ ಆಗಲಿ:ಯದುವೀರ

ಮೈಸೂರು: ಆನೆ ದಾಳಿಗೆ ಮಡಿಕೇರಿಯಲ್ಲಿ ಮತ್ತೊರ್ವ ವ್ಯಕ್ತಿ ಸಾವನ್ನಪ್ಪಿರುವುದು ಬೇಸರದ ಸಂಗತಿಯಾಗಿದೆ. ಇದೇ ಕಾರಣಕ್ಕಾಗಿ ಮಡಿಕೇರಿ, ಮೈಸೂರು ಭಾಗದಲ್ಲಿ ಆನೆಗಳ ಸಮೀಕ್ಷೆ ಆಗಬೇಕಿದೆ ಎಂದು ಸಂಸದ ಯದುವೀರ್ ಪ್ರತಿಕ್ರಯಿಸಿದರು.

ಅರಣ್ಯ ಇಲಾಖೆಯಲ್ಲಿ ಸಿಬ್ಬಂದಿಗಳ ಕೊರತೆಯಿದೆ. ಪೆಟ್ರೋಲಿಯಂ ವ್ಯವಸ್ಥೆ, ಬ್ಯಾರಿಕೇಡ್ ವ್ಯವಸ್ಥೆ ಹಾಗೂ ಎಸ್ಟೇಟ್‌ಗಳಲ್ಲಿ ಅರಣ್ಯ ಇಲಾಖೆ ನಿಯಮ ಪಾಲನೆ ಮಾಡುವ ಕೆಲಸ ಆಗಬೇಕಿದೆ. ಇದೆಲ್ಲವನ್ನೂ ಹಲವು ಬಾರಿ ಕೇಂದ್ರಕ್ಕೆ ಮನವಿ ಮಾಡಿದ್ದೇನೆ. ಅದು ಆಗದಿರುವುದರಿಂದ ಇಂತಹ ಘಟನೆ ಮರುಕಳಿಸುತ್ತಿದ್ದು, ನಾನು ಕೇವಲ ಸಾಂತ್ವಾನ ಹೇಳುವುದಕ್ಕಷ್ಟೇ ಸಾಧ್ಯವಾಗುತ್ತಿರುವುದು ಬೇಸರದ ಸಂಗತಿ ಎಂದರು.

ಜನತೆ ರಾಜ್ಯ ಸರ್ಕಾರಕ್ಕೆ ಐದು ವರ್ಷ ಕರ್ತವ್ಯ ಮಾಡಲು ಅಧಿಕಾರ ನೀಡಿದ್ದಾರೆ. ಆದರೆ, ಎರಡು ದಿನಕ್ಕೆ ಹೀಗೆ ರಾಜೀನಾಮೆ ನೀಡಿರುವುದು ಅವರಲ್ಲಿನ ಭಿನ್ನಮತವನ್ನು ತೋರಿಸುತ್ತದೆ. ಅದೆಲ್ಲವನ್ನೂ ಬದಿಗೊತ್ತಿ ಜನರ ಸಮಸ್ಯೆಗೆ ಸ್ಪಂದಿಸುವ ಕೆಲಸ ಮಾಡಲಿ ಎಂದು ಹೇಳಿದರು.

# ಪರಿಸರ ದಿನ: ಪರಿಸರದ ಜಾಗೃತಿ ವಾಕಥಾನ್



ಗುಂಡ್ಲುಪೇಟೆ: ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಪಟ್ಟಣದಲ್ಲಿ ಪರಿಸರದ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ವೈವಿಧ್ಯಮಯ ಹಾಗೂ ಅರ್ಥಪೂರ್ಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ತಹಶೀಲ್ದಾರ್ ತನ್ಮಯ್ ಹಾಗೂ ಖ್ಯಾತ ವನ್ಯಜೀವಿ ಛಾಯಾಗ್ರಾಹಕ ಬಿ. ವಿ. ಮಧು, ಪುರಸಭೆಯ ಮುಖ್ಯಾಧಿಕಾರಿ ಶರವಣ ಸೇರಿ ಜಂಟಿಯಾಗಿ ಹಸಿರು ಬಾವುಟ ಪ್ರದರ್ಶಿಸುವ ಮೂಲಕ ಪರಿಸರ ಜಾಗೃತಿ ?ವಾಕಥಾನ್? ಗೆ ಅಧಿಕೃತವಾಗಿ ಚಾಲನೆ ನೀಡಿದರು.

**ಬೃಹತ್ ಮಾನವ ಸರಪಳಿ**

ಈ ಜಾಗೃತಿ ನಡಿಗೆಯಲ್ಲಿ ಪುರಸಭೆಯ ಎಲ್ಲಾ ಪೌರಕಾರ್ಮಿಕರು, ನೀರು ಸರಬರಾಜು ವಿಭಾಗದ ಸಿಬ್ಬಂದಿ ಹಾಗೂ ಸ್ಥಳೀಯ ಕನ್ನಡ ಸಂಘಟನೆಯ ಪದಾಧಿಕಾರಿಗಳು ಉತ್ಸಾಹದಿಂದ ಪಾಲ್ಗೊಂಡಿದ್ದರು. ವಾಕಥಾನ್ ಪ್ರಮುಖ ರಸ್ತೆಗಳ ಮೂಲಕ ಸಾಗಿ ನೆಹರು ಬಸ್ ನಿಲ್ದಾಣವನ್ನು ತಲುಪಿತು. ನೆರೆದಿದ್ದ ನೂರಾರು ಜನರೆಲ್ಲರೂ ಒಟ್ಟಾಗಿ ಬೃಹತ್ ಮಾನವ ಸರಪಳಿ ನಿರ್ಮಿಸುವ ಮೂಲಕ ಪರಿಸರ ಸಂರಕ್ಷಣೆಯ ಮಹತ್ವದ ಕುರಿತು ಸಾರ್ವಜನಿಕರ ಗಮನ ಸೆಳೆದರು.

**'ನನ್ನ ಮರ ನನ್ನ ನೆರಳು' ಸ್ಪರ್ಧೆ ವಿವರ**

ಇದೇ ಸಂದರ್ಭದಲ್ಲಿ ಸಾರ್ವಜನಿಕರನ್ನು ಪರಿಸರ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಲು ಪುರಸಭೆ ಮುಖ್ಯಾಧಿಕಾರಿಗಳು "ನನ್ನ ಮರ ನನ್ನ ನೆರಳು" ಎಂಬ ವಿನೂತನ ಸ್ಪರ್ಧೆಯನ್ನು ಪ್ರಕಟಿಸಿ, ಅದರ ಮಾಹಿತಿ ನೀಡಿದರು.

**ಸ್ಪರ್ಧೆಯ ನಿಯಮ**

ಸಾರ್ವಜನಿಕರು ತಮ್ಮ ಮನೆಯ ಮುಂದೆ ಕಡ್ಡಾಯವಾಗಿ ಒಂದು ಗಿಡವನ್ನು ನೆಡಬೇಕು.

**ಭಾಗವಹಿಸುವ ವಿಧಾನ**

ಗಿಡ ನೆಡುವಾಗ ತೆಗೆದ ತಮ್ಮ 'ಸೆಲ್ಫಿ' ಫೋಟೋವನ್ನು ಪುರಸಭೆಯ ಅಧಿಕೃತ ಮೊಬೈಲ್ ಸಂಖ್ಯೆಗೆ ಕಳುಹಿಸಬೇಕು ಅಥವಾ ನೀಡಲಾಗಿರುವ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ, ಗೂಗಲ್ ಸ್ಪ್ರೆಡ್‌ಶೀಟ್ ಲಿಂಕ್ ಮೂಲಕ ತಮ್ಮ ವಿವರಗಳನ್ನು ಅಪ್‌ಲೋಡ್ ಮಾಡಬೇಕು. "ಕೇವಲ ಪುರಸಭೆ ಅಥವಾ ಸರ್ಕಾರ ಮಾತ್ರವೇ ಪರಿಸರವನ್ನು ರಕ್ಷಿಸಲು ಸಾಧ್ಯವಿಲ್ಲ, ಸಾರ್ವಜನಿಕರ ಸಕ್ರಿಯ ಪಾಲ್ಗೊಳ್ಳುವಿಕೆ ಅತ್ಯಗತ್ಯ" ಎಂದು ಕರೆ ನೀಡಿದ ಮುಖ್ಯಾಧಿಕಾರಿಗಳು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಗಿಡಗಳನ್ನು ನೆಟ್ಟು ಈ ಸ್ಪರ್ಧೆಯಲ್ಲಿ ಭಾಗವಹಿಸಬೇಕಾಗಿ ವಿನಂತಿಸಿಕೊಂಡರು.

## ಶೇಷಾದ್ರಿ ಪಾರ್ಕ್‌ನಲ್ಲಿ ಸಸಿ ನಾಟಿ ಕಾರ್ಯಕ್ರಮ

ನೆಹರು ಸರ್ಕಲ್‌ನಿಂದ ಮುಂದುವರಿದ ಜಾಗೃತಿ ಜಾಥಾವು ಶೇಷಾದ್ರಿ ಪಾರ್ಕ್ ತಲುಪಿತು. ಅಲ್ಲಿ ಮುಖ್ಯ ಅತಿಥಿಗಳಾದ ತಹಶೀಲ್ದಾರ್ ತನ್ಮಯ್, ಬಿಇಒಸ್ವಾಮಿ, ಎ.ಡಿ. ಸತೀಶ್ ಹಾಗೂ ಹಿಮವದ್ ಗೋಪಾಲಸ್ವಾಮಿ ಬೆಟ್ಟದ ಪ್ರಧಾನ ಅರ್ಚಕರು ಜಂಟಿಯಾಗಿ ಸಸಿಗಳನ್ನು ನೆಡುವ ಮೂಲಕ ಹಸಿರು ಆಂದೋಲನಕ್ಕೆ ಚಾಲನೆ ನೀಡಿದರು. ಪಾರ್ಕ್ ಆವರಣದಲ್ಲಿ ಹಲವು ಉಪಯುಕ್ತ ಸಸಿಗಳನ್ನು ನೆಡಲಾಯಿತು.

## ತ್ಯಾಜ್ಯ ವಿಂಗಡಣೆ ಮತ್ತು ಪರಿಸರ ಜಾಗೃತಿ

ಈ ಸಂದರ್ಭದಲ್ಲಿ ಮಾತನಾಡಿದ ಹಿಮವದ್ ಗೋಪಾಲಸ್ವಾಮಿ ಬೆಟ್ಟದ ಪ್ರಧಾನ ಅರ್ಚಕರು, ಪರಿಸರ ಸಂರಕ್ಷಣೆ ನಮ್ಮ ಧರ್ಮವಾಗಬೇಕು ಎಂದರು. ಅಲ್ಲದೆ, ಪ್ರಮುಖವಾಗಿ ನಾಲ್ಕು ವಿಧದ ತ್ಯಾಜ್ಯಗಳ (ಹಸಿ ಕಸ, ಒಣ ಕಸ, ಹಾನಿಕಾರಕ ಕಸ ಮತ್ತು ಎಲೆಕ್ಟ್ರಾನಿಕ್ ತ್ಯಾಜ್ಯ) ಬಗ್ಗೆ ಸಾರ್ವಜನಿಕರಿಗೆ ವಿವರವಾದ ಮಾಹಿತಿ ನೀಡಿ, ಕಸವನ್ನು ಮೂಲದಲ್ಲೇ ವಿಂಗಡಿಸುವುದರಿಂದ ಪರಿಸರ ಮಾಲಿನ್ಯವನ್ನು ಹೇಗೆ ತಡೆಯಬಹುದು ಎಂದು ಜಾಗೃತಿ ಮೂಡಿಸಿದರು.

# ಪರಿಸರ ಮಾಲಿನ್ಯ ಜಗತ್ತಿನ ಸವಾಲು

## ಮಂಡ್ಯ ಕೃಷಿ ವಿವಿ ವಿಸ್ತರಣಾ ನಿರ್ದೇಶಕ ಡಾ.ಸಿ.ರಾಮಚಂದ್ರ ಕಳವಳ

ಮೈಸೂರು: ಹವಾಮಾನ ಬದಲಾವಣೆ, ಜೀವವೈವಿಧ್ಯದ ಕ್ಷೀಣತೆ ಹಾಗೂ ಪರಿಸರ ಮಾಲಿನ್ಯವು ಪ್ರಸ್ತುತ ಜಗತ್ತಿನ ಮುಂದಿರುವ ಅತ್ಯಂತ ಗಂಭೀರ ಸವಾಲುಗಳಾಗಿವೆ ಎಂದು ಮಂಡ್ಯ ಕೃಷಿ ವಿಶ್ವವಿದ್ಯಾನಿಲಯದ ವಿಸ್ತರಣಾ ನಿರ್ದೇಶಕ ಡಾ.ಸಿ.ರಾಮಚಂದ್ರ ಕಳವಳ ವ್ಯಕ್ತಪಡಿಸಿದರು.



**ಪರಿಸರ ಸಂರಕ್ಷಣೆಯಲ್ಲಿ ಜೇನು ಕೃಷಿಯ ಪಾತ್ರ**

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ನಾಗನಹಳ್ಳಿ ಸಾವಯವ ಕೃಷಿ ಸಂಶೋಧನಾ ಕೇಂದ್ರದ ಕೃಷಿ ವಿಸ್ತರಣಾ ಶಿಕ್ಷಣ ಘಟಕ ಹಾಗೂ ಕೃಷಿ ತಂತ್ರಜ್ಞರ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ?ಪ್ರಕೃತಿಯಿಂದ ಪ್ರೇರಣೆ, ಹವಾಮಾನಕ್ಕಾಗಿ, ನಮ್ಮ ಭವಿಷ್ಯಕ್ಕಾಗಿ? ಎಂಬ ಘೋಷವಾಕ್ಯದಡಿ ಆಯೋಜಿಸಿದ್ದ ?ಪರಿಸರ ಸಂರಕ್ಷಣೆಗಾಗಿ ಜೇನು ಕೃಷಿ? ಕುರಿತ ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜೇನುನೊಣಗಳು ಪ್ರಕೃತಿಯ ಅತ್ಯುತ್ತಮ ಪರಾಗಸ್ಪರ್ಶಕಗಳಾಗಿದ್ದು, ಇವುಗಳಿಂದ ವಿವಿಧ ಬೆಳೆಗಳಲ್ಲಿ ಶೇ.20 ರಿಂದ 40ರಷ್ಟು ಹೆಚ್ಚಿನ ಇಳುವರಿ ಪಡೆಯಬಹುದು. ಜೇನು ಕೃಷಿಯು ರೈತರಿಗೆ ಆರ್ಥಿಕವಾಗಿ ನೆರವಾಗುವುದರ ಜೊತೆಗೆ ಜೀವವೈವಿಧ್ಯ ಸಂರಕ್ಷಣೆ ಮತ್ತು ಪರಿಸರ ಸಮತೋಲನವನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಅವರು ವಿವರಿಸಿದರು.

**ಗಣ್ಯರ ಉಪಸ್ಥಿತಿ ಹಾಗೂ ವಿಚಾರ ವಿನಿಮಯ**

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಕೃಷಿ ತಂತ್ರಜ್ಞರ ಸಂಸ್ಥೆಯ ಕಾರ್ಯದರ್ಶಿ ಡಾ.ಕೆ.ಆರ್. ರವೀಂದ್ರ ಹಾಗೂ ಬೆಂಗಳೂರು ಕೃಷಿ ವಿವಿಯ ನಿವೃತ್ತ ಡೀನ್ ಡಾ.ಡಿ.ರಾಜಗೋಪಾಲ್ ಉಪಸ್ಥಿತರಿದ್ದರು. ಹಿರಿಯ ಕ್ಷೇತ್ರ ಅಧಿಕಾರಿ ಡಾ.ಎನ್.ಉಮಾಶಂಕರ್ ಕುಮಾರ್, ಬೇಸಾಯಶಾಸ್ತ್ರ ಪ್ರಾಧ್ಯಾಪಕ ಡಾ.ಪಿ.ಪ್ರಕಾಶ್, ಕೃಷಿ ಕೀಟಶಾಸ್ತ್ರ ಸಹಾಯಕ ಪ್ರಾಧ್ಯಾಪಕಿ ಡಾ.ಎಂ.ಆರ್.ಮೌಲ್ಯಾ, ತೋಟಗಾರಿಕೆ ಸಹಾಯಕ ಪ್ರಾಧ್ಯಾಪಕ ಡಾ.ಶಿವಕುಮಾರ್, ಮಡಿಕೇರಿ ಕೃಷಿ ವಿಸ್ತರಣಾ ಶಿಕ್ಷಣ ಘಟಕದ ಪ್ರಾಧ್ಯಾಪಕ ಡಾ.ಆರ್.ಎನ್.ಕೆಂಚಾರೆಡ್ಡಿ ಪಾಲ್ಗೊಂಡಿದ್ದರು. ಶಿಬಿರದಲ್ಲಿ 80ಕ್ಕೂ ಹೆಚ್ಚು ರೈತರು, ಕೃಷಿ ವಿಜ್ಞಾನಿಗಳು ಹಾಗೂ ಅಧಿಕಾರಿಗಳು ಉತ್ಸಾಹದಿಂದ ಭಾಗವಹಿಸಿ ಸುಸ್ಥಿರ ಕೃಷಿ ಮತ್ತು ಜೇನು ಕೃಷಿಯ ಮಹತ್ವದ ಕುರಿತು ವಿಚಾರ ವಿನಿಮಯ ನಡೆಸಿದರು.

### ಸುಸ್ಥಿರ ಕೃಷಿ ಪದ್ಧತಿಗಳ ಅಳವಡಿಕೆಗೆ ಕರೆ

ಅರಣ್ಯ ನಾಶ, ಮಿತಿಮೀರಿದ ರಾಸಾಯನಿಕಗಳ ಬಳಕೆ ಹಾಗೂ ನೈಸರ್ಗಿಕ ಸಂಪನ್ಮೂಲಗಳ ದುರ್ಬಳಕೆಯಿಂದಾಗಿ ಪರಿಸರದ ಸಮತೋಲನ ತೀವ್ರವಾಗಿ ಹದಗೆಡುತ್ತಿದೆ. ಇದರ ನೇರ ಪರಿಣಾಮವಾಗಿ ಮಳೆಯ ಅನಿಶ್ಚಿತತೆ, ತಾಪಮಾನ ಏರಿಕೆ ಹಾಗೂ ಕೃಷಿ ಉತ್ಪಾದನೆಯಲ್ಲಿ ಕುಸಿತ ಉಂಟಾಗುತ್ತಿದೆ.
ಈ ಹಿನ್ನೆಲೆಯಲ್ಲಿ ರೈತರು ಸಾವಯವ ಕೃಷಿ, ನೈಸರ್ಗಿಕ ಕೃಷಿ, ಸಮಗ್ರ ಕೃಷಿ ಪದ್ಧತಿ ಹಾಗೂ ಕೃಷಿ ಅರಣ್ಯ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳುವ ಮೂಲಕ ಪರಿಸರ ಸಂರಕ್ಷಣೆಗೆ ಮುಂದಾಗಬೇಕು ಎಂದು ಸಲಹೆ ನೀಡಿದರು.

### ಪರಿಸರ ರಕ್ಷಣೆ ಪ್ರತಿಯೊಬ್ಬರ ಹೊಣೆ

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪರಿಸರ ಸಂರಕ್ಷಣೆ ಕೇವಲ ಇಂದಿನ ಪೀಳಿಗೆಗಷ್ಟೇ ಅಲ್ಲ, ಭವಿಷ್ಯದ ಪೀಳಿಗೆಗಳ ಉಳಿವಿಗೂ ಅತ್ಯಗತ್ಯ. ಪರಿಸರವನ್ನು ಕಾಪಾಡುವುದು ಕೇವಲ ಸರ್ಕಾರದ ಕರ್ತವ್ಯವಲ್ಲ, ಅದು ಪ್ರತಿಯೊಬ್ಬ ನಾಗರಿಕನ ಸಾಮಾಜಿಕ ಜವಾಬ್ದಾರಿಯಾಗಿದೆ ಎಂದು ಪ್ರತಿಪಾದಿಸಿದರು.

# ರೈತರ ಉಳಿವಿಗಾಗಿ ಕೆರೆ–ಕಟ್ಟೆಗಳ ಸಂರಕ್ಷಣೆ ಅತ್ಯಗತ್ಯ

**ಕುರುಬೂರು ಶಾಂತಕುಮಾರ್**




ಚಾಮರಾಜನಗರ: ರೈತರ ಉಳಿವಿಗಾಗಿ ಕೆರೆ–ಕಟ್ಟೆಗಳನ್ನು ಉಳಿಸಿ, ಪರಿಸರವನ್ನು ಸಂರಕ್ಷಿಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಪ್ರತಿಪಾದಿಸಿದರು. ನಗರದ ಎಪಿಎಂಸಿ ಕಚೇರಿ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ಸಹಯೋಗದಲ್ಲಿ ಆಯೋಜಿಸಿದ್ದ ಚಿಂತನ–ಮಂಥನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

**ಕೆರೆಗಳ ಪುನರ್ಜೀವನ ಮತ್ತು ಸಾವಯವ ಕೃಷಿಗೆ ಒತ್ತು**

ರಾಜ್ಯದಲ್ಲಿ 41,200 ಕೆರೆಗಳಿದ್ದು, ಚಾಮರಾಜನಗರ ಜಿಲ್ಲೆಯ 690 ಕೆರೆಗಳನ್ನು ಪುನರ್ಜೀವನಗೊಳಿಸಿ ಪರಿಸರ ಸಂರಕ್ಷಿಸಬೇಕಿದೆ. ರೈತರು ತಮ್ಮ ಭಾಗದ ಕೆರೆಗಳ ಹೂಳೆತ್ತಿ ಜಮೀನಿಗೆ ಹಾಕಿಕೊಳ್ಳುವುದರಿಂದ ಭೂಮಿಯ ಫಲವತ್ತತೆ ವೃದ್ಧಿಯಾಗುತ್ತದೆ. ಇದರಿಂದ ರಸಗೊಬ್ಬರ ಹಾಗೂ ಕೀಟ ನಾಶಕಗಳ ಬಳಕೆ ಕಡಿಮೆಯಾಗಿ ಉತ್ತಮ ಗುಣಮಟ್ಟದ ಆಹಾರ ಬೆಳೆಯಲು ಸಾಧ್ಯವಾಗುತ್ತದೆ. ಪ್ರಸ್ತುತ ರಾಸಾಯನಿಕಯುಕ್ತ ಆಹಾರದಿಂದಾಗಿ ಹುಟ್ಟುವ ಮಕ್ಕಳಲ್ಲೂ ರೋಗಬಾಧೆ ಕಾಣಿಸಿಕೊಳ್ಳುತ್ತಿದ್ದು, ಇದನ್ನು ತಪ್ಪಿಸಲು ಸಾವಯವ ಕೃಷಿಗೆ ಒತ್ತು ನೀಡಬೇಕು. ಇದು ಮುಂದಿನ ತಲೆಮಾರಿಗೆ ನಾವು ನೀಡುವ ಅತ್ಯುತ್ತಮ ಉಡುಗೊರೆಯಾಗಲಿದೆ ಎಂದು ವಿವರಿಸಿದರು.

### ತಾಯಿಯ ಹೆಸರಿನಲ್ಲಿ ಗಿಡ ನೆಡಿ

ಸರ್ಕಾರಿ ಶಾಲೆಯ ಮುಖ್ಯ ಶಿಕ್ಷಕಿ ಗೌರಮ್ಮ ಅವರು ಮಾತನಾಡಿ, 45 ಕೆಜಿ ತೂಕವಿದ್ದ ತಾಯಿ ನಿಧನರಾದಾಗ ಆಕೆಯ ಋಣ ತೀರಿಸಲು ಮಗನೊಬ್ಬ 4500 ಮರಗಳನ್ನು ಬೆಳೆಸಿ ವಿಶಿಷ್ಟವಾಗಿ ಸಂತಾಪ ಸೂಚಿಸಿದ ಉದಾಹರಣೆಯನ್ನು ನೀಡಿದರು. ಪ್ರತಿಯೊಬ್ಬರೂ ಅದೇ ರೀತಿಯ ಪ್ರೇರಣೆ ಪಡೆದು ತಮ್ಮ ತಾಯಿಯ ಹೆಸರಿನಲ್ಲಿ ಗಿಡ ನೆಟ್ಟು ಮರ ಬೆಳೆಸುವಂತೆ ಅವರು ಸಲಹೆ ನೀಡಿದರು.

**ಅಂತರ್ಜಲ ವೃದ್ಧಿ ಹಾಗೂ ಆಮ್ಲಜನಕದ ಪ್ರಾಮುಖ್ಯತೆ**

ಕೆರೆಗಳ ಸಂರಕ್ಷಣೆಯಿಂದ ಜಿಲ್ಲೆಯ ಸುಮಾರು 25 ಸಾವಿರ ಕೊಳವೆಬಾವಿಗಳಲ್ಲಿ ಅಂತರ್ಜಲ ಮಟ್ಟ ಹೆಚ್ಚಲಿದೆ. ಅಲ್ಲದೆ, ಕೆರೆ ಏರಿಗಳ ಮೇಲೆ ಗಿಡಮರಗಳನ್ನು ಬೆಳೆಸುವುದರಿಂದ ಉಸಿರಾಟಕ್ಕೆ ಅಗತ್ಯವಾದ ಶುದ್ಧ ಆಮ್ಲಜನಕ ಲಭ್ಯವಾಗುತ್ತದೆ. ಪ್ರಸ್ತುತ ವರದಿಗಳ ಪ್ರಕಾರ ಏಳು ಜನರಿಗೆ ಒಂದು ಮರ ಆಮ್ಲಜನಕ ನೀಡುವ ಪರಿಸ್ಥಿತಿ ಇದ್ದು, ದೆಹಲಿಯಂತಹ ಮಹಾನಗರಗಳಲ್ಲಿ ಉಂಟಾಗಿರುವ ಆಮ್ಲಜನಕದ ಕೊರತೆಯನ್ನು ನಾವೆಲ್ಲರೂ ಗಂಭೀರವಾಗಿ ಪರಿಗಣಿಸಬೇಕು. ಕರೊನಾ ಸಂದರ್ಭದಲ್ಲಿ ಆಮ್ಲಜನಕದ ಕೊರತೆಯಿಂದ ಚಾಮರಾಜನಗರದಲ್ಲಿ ಸಂಭವಿಸಿದ ದುರಂತವನ್ನು ಸ್ಮರಿಸಿದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮಂಜುನಾಥ್, ಮರಗಳಿಂದ ಮಾತ್ರ ಆಮ್ಲಜನಕ ಉತ್ಪಾದನೆಯಾಗಲು ಸಾಧ್ಯವಿರುವುದರಿಂದ ಪರಿಸರ ರಕ್ಷಣೆ ಪ್ರತಿಯೊಬ್ಬರ ಹೊಣೆಯಾಗಿದೆ ಎಂದರು.

**ಶುದ್ಧ ಗಾಳಿಯಲ್ಲಿ ಚಾಮರಾಜನಗರಕ್ಕೆ 4ನೇ ಸ್ಥಾನ**

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಸಿದ್ದಲಿಂಗಸ್ವಾಮಿ ಮಾತನಾಡಿ, ಶುದ್ಧ ಗಾಳಿ ಲಭ್ಯವಿರುವ ದೇಶದ ಜಿಲ್ಲೆಗಳ ಪೈಕಿ ಚಾಮರಾಜನಗರ 4ನೇ ಸ್ಥಾನದಲ್ಲಿದೆ. ಇಂತಹ ಪರಿಸರ ಜಾಗೃತಿ ಕಾರ್ಯಕ್ರಮಗಳು ಜನರಲ್ಲಿ ನೈಜ ಅರಿವು ಮೂಡಿಸುವಂತಾಗಬೇಕು ಎಂದರು. ಎಪಿಎಂಸಿ ಉಪ ನಿರ್ದೇಶಕ ಬಸವಣ್ಣ ಮಾತನಾಡಿ, ಕಾಯಿಲೆ ಬಂದು ಆಸ್ಪತ್ರೆಗಳ ಬಿಲ್ ನೋಡಿ ಆಘಾತಗೊಳ್ಳುವ ಬದಲು, ರೈತರು ಮತ್ತು ಸಾರ್ವಜನಿಕರು ವರ್ಷಪೂರ್ತಿ ಗಿಡಮರಗಳನ್ನು ನೆಡುವ ಮೂಲಕ ಉತ್ತಮ ಪರಿಸರ ಹಾಗೂ ಆರೋಗ್ಯಕರ ಆಹಾರಕ್ಕಾಗಿ ಶಪಥ ಮಾಡಬೇಕು ಎಂದು ಕಿವಿಮಾತು ಹೇಳಿದರು. ಈ ಚಿಂತನ–ಮಂಥನ ಕಾರ್ಯಕ್ರಮದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಕಳ್ಳಿ ಮಹದೇವಸ್ವಾಮಿ, ಕಿರಗಸೂರು ಶಂಕರ್, ಜಿಲ್ಲಾಧ್ಯಕ್ಷ ಉಡಿಗಾಲ ರೇವಣ್ಣ, ಪಿ.ಸೋಮಶೇಖರ್ ಇದ್ದರು.

# ಮೀಟ್ ಅಪ್ ಮೈಸೂರು ಕಾರ್ಯಕ್ರಮ



ಮೈಸೂರು: ಎಸ್‌ಜೆಸಿಇ– ಸ್ಟೆಪ್ ವತಿಯಿಂದ ರಾಜ್ಯದ ಉದ್ಯಮಶೀಲತಾ ಬಲವರ್ಧನೆ ನಿಟ್ಟಿನಲ್ಲಿ ಜೂ.6ರಂದು ಸಂಜೆ 4ಕ್ಕೆ ಎಸ್‌ಜೆಸಿಇ ಆವರಣದ ಆರ್.ಪಿ. ಸಿಂಘಾನಿಯಾ ಸಭಾಂಗಣದಲ್ಲಿ ಮುಂದೆ ಬನ್ನಿ ಮೀಟ್ ಅಪ್ ಮೈಸೂರು ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸ್ಟೆಪ್ ವ್ಯವಸ್ಥಾಪಕರಾದ ಎಸ್.ಡಿ.ಮೇಘನಾ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಉದ್ಯಮಿಗಳು, ನವೋದ್ಯಮ ಸಂಸ್ಥಾಪಕ, ಕೈಗಾರಿಕಾ ತಜ್ಞ, ವಿದ್ಯಾರ್ಥಿ, ಸಂಶೋಧಕ ಹಾಗೂ ಉದ್ಯಮಶೀಲತಾ ಪರಿಸರ ವ್ಯವಸ್ಥೆಯ ವಿವಿಧ ಭಾಗೀದಾರರನ್ನು ಒಂದೆಡೆ ಒಗ್ಗೂಡಿಸಿ, ವಿಚಾರ ವಿನಿಮಯ, ಅನುಭವ ಹಂಚಿಕೆ ಹಾಗೂ ನವೋದ್ಯಮ ಸಂಸ್ಕೃತಿಗೆ ಉತ್ತೇಜನ ನೀಡುವುದು ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ ಎಂದು ಮಾಹಿತಿ ನೀಡಿದರು.

ಮುಂದೆ ಬನ್ನಿ ಎಂಬುದು ರಾಜ್ಯದ ಅತ್ಯಂತ ಸಕ್ರಿಯ ಹಾಗೂ ಪ್ರಭಾವಶೀಲ ಸಮುದಾಯಗಳಲ್ಲಿ ಒಂದಾಗಿದ್ದು, ಕನ್ನಡಿಗ ಉದ್ಯಮಿಗಳು, ವೃತ್ತಿಪರರು, ಉದ್ಯಮ ನಾಯಕರು, ಉದ್ಯಮಾಕಾಂಕ್ಷಿಗಳನ್ನು ಜಾಲತಾಣ ನಿರ್ಮಾಣ, ಮಾರ್ಗದರ್ಶನ ಮತ್ತು ಜ್ಞಾನ ಹಂಚಿಕೆ ಚಟುವಟಿಕೆಗಳ ಮೂಲಕ ಸಂಪರ್ಕಿಸುವ ಕಾರ್ಯದಲ್ಲಿ ನಿರತವಾಗಿದೆ. ಈ ವೇದಿಕೆಯನ್ನು ಬಳಸಿಕೊಂಡು ಈ ಕಾರ್ಯಕ್ರಮ ಅಯೋಜಿಸಲಾಗಿದೆ. ಸಂಸ್ಥಾಪಕರಾದ ಎಂ.ಪಿ. ಪೃಥ್ವಿ, ಪಿ. ನಿಶಾಂತ್, ಎನ್. ಲಾವಣ್ಯ ಪಾಲ್ಗೊಳ್ಳಲಿದ್ದಾರೆ. ಸಂಸ್ಥಾಪಕರಾದ ಜೆ.ಟಿ. ಜ್ಯೋತಿರ್ಮಯಿ ಸಮಾರೋಪ ಭಾಷಣ ಮಾಡಲಿದ್ದು, ಆಸಕ್ತರು ಪಾಲ್ಗೊಳ್ಳಬೇಕೆಂದು ಕೋರಿದರು.

ಸಂಯೋಜನಾಧಿಕಾರಿ ಬಿ.ಎಂ. ಚಂದ್ರಶೇಖರ್, ವಿಜೇಂದ್ರಕುಮಾರ್, ವಿ. ಮಹಾಲಕ್ಷ್ಮಿ ?ಮ ಹಾಜರಿದ್ದರು.

# ಪರಿಸರ ಕಾಳಜಿ ಎಲ್ಲರ ಆದ್ಯತೆ



ಗುಂಡ್ಲುಪೇಟೆ : ಪರಿಸರ ಕಾಳಜಿ ಎಲ್ಲರ ಆದ್ಯತೆ ಆಗಬೇಕು ಎಂದು ಮಾನವ ಬಂಧುತ್ವ ವೇದಿಕೆ ಜಿಲ್ಲಾ ಸಂಚಾಲಕ ಸುಭಾಷ್ ಮಾಡ್ರಹಳ್ಳಿ ಅಭಿಪ್ರಾಯ ಪಟ್ಟರು

ಕರ್ನಾಟಕ ಗಡಿನಾಡು ವನ್ಯಜೀವಿ ಮತ್ತು ಪರಿಸರ ಸಂರಕ್ಷಣಾ ಸಂಘ ಗುಂಡ್ಲುಪೇಟೆ ಹಾಗೂ ಕೃಷಿ ಮಾರುಕಟ್ಟೆಯ ಜೆ ಎಫ್ ಸಿ ಗ್ರೂಪ್ ಸಂಯುಕ್ತ ಆಶ್ರಯದಲ್ಲಿ ಗುಂಡ್ಲುಪೇಟೆ ಕಲ್ಯಾಣಿ ಕೊಳದ ದೇವಾಲಯದ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಸಸಿಗಳನ್ನು ನೆಡುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಅಂತರರಾಷ್ಟ್ರೀಯ ಪರಿಸರ ದಿನಾಚರಣೆಯ ಮಹತ್ವವನ್ನು ಪ್ರತಿಯೊಬ್ಬರು ಅರಿಯಬೇಕು. ಅಭಿವೃದ್ಧಿಯ ನೆಪದಲ್ಲಿ ಕೈಗಾರೀಕರಣ, ನಗರೀಕರಣ ಹಾಗೂ ಪ್ಲಾಸ್ಟಿಕ್ ಬಳಕೆಯಿಂದ ಪ್ರಕೃತಿ ಮೇಲೆ ಭಾರಿ ಪ್ರಭಾವ ಬೀರುತ್ತಿದೆ. ಇದರಿಂದ ವಾಯು ಮಾಲಿನ್ಯ , ಹವಾಮಾನ ಬದಲಾವಣೆ ಹಾಗೂ ಜೀವ ವೈವಿಧ್ಯತೆಯ ಅಳಿವು ಘಟನೆ ಗಳು ಕಂಡುಬರುತ್ತಿವೆ. ಮಾನವ ಪ್ರಕೃತಿಯ ಶಿಶು ಎಂಬುದನ್ನು ಮರೆತು ಆತನ ಚಟುವಟಿಕೆಗಳು ನಡೆಯುತ್ತವೆ ಇದರಿಂದ ಜನ ಜೀವನದ ಮೇಲೆ ಗಂಭೀರ ದುಷ್ಪರಿಣಾಮ ಉಂಟಾಗುವ ಸಾಧ್ಯತೆ ಹೆಚ್ಚಿದೆ.

ಹಾಗಾಗಿ ಎಲ್ಲರೂ ಪರಿಸರ ಕಾಳಜಿಯನ್ನು ತಪ್ಪದೆ ವಹಿಸಬೇಕಾಗಿದೆ. ಸ್ವಸ್ಥ ಸಮಾಜದ ಜತೆಗೆ ಸ್ವಚ್ಛ ಪರಿಸರ ನಿರ್ಮಾಣ ಕಾರ್ಯದಲ್ಲಿ ಯುವ ಜನಾಂಗ ತೊಡಗಬೇಕು ಎಂದರು.

ಕರ್ನಾಟಕ ಗಡಿನಾಡು ವನ್ಯಜೀವಿ ಪರಿಸರ ಸಂರಕ್ಷಣಾ ಸಂಘದ ತಾಲ್ಲೂಕು ಅಧ್ಯಕ್ಷರಾದ ಪಿ ಬಾಲು ಅವರು ಮಾತನಾಡಿ, ಕೃಷಿ ಮಾರುಕಟ್ಟೆಯ ಜೆಎಫ್‌ಸಿ ಗ್ರೂಪ್ ನ ಪರಿಸರ ಪ್ರೇಮಿಗಳ ಉತ್ತೇಜಿಸುವ ಸಲುವಾಗಿ ಕೂಡಿ ವಿಶ್ವ ಪರಿಸರ ದಿನಾಚರಣೆ ಹಮ್ಮಿಕೊಂಡಿದೆ. ಅವರ ಪರಿಸರ ಪ್ರೇಮ ಶ್ಲಾಘನೀಯ ಎಂದರು. ನಮ್ಮ ಸಂಘಟನೆಯೂ ಸಹ ಪರಿಸರಕ್ಕೆ ಪೂರಕವಾಗಿ ಹಲವು ಕಾರ್ಯಕ್ರಮ ನಡೆಸುತ್ತ ಬಂದಿದೆ ಎಂದರು ಇದೆ ಸಂಧರ್ಭದಲ್ಲಿ ಕರ್ನಾಟಕ ವನ್ಯಜೀವಿ ಸಂರಕ್ಷಣಾ ಸಂಘದ ಉಪಾಧ್ಯಕ್ಷರಾದ ಜಾಕಿ, ಕಾರ್ಯದರ್ಶಿ ಶಿವಣ್ಣ, ಖಜಾಂಚಿ ಚಿಕ್ಕ ಕೂಸನಾಯ್ಕ, ದೇವಾಲಯದ ಪೂಜಾರಿಗಳಾದ ತಮ್ಮಣ್ಣ , ಜೆ ಎಫ್ ಸಿ ಗ್ರೂಪ್ ನ ಗಣೇಶ್ , ಶಿವು ,ಕಿರಣ್ , ಹಾಗೂ ಮಂಟೇಶ್ ವಡ್ಡಗೆರೆ ಭಾಗವಹಿಸಿದ್ದರು.

# ಚಾಮರಾಜನಗರ: ಜಾನುವಾರುಗಳ ಮೇಲೆ ದಾಳಿ ಮಾಡಿ ರೈತರಿಗೆ ಆತಂಕ ಹುಟ್ಟಿಸಿದ್ದ ಚಿರತೆಗಳ ಸೆರೆ



ಚಾಮರಾಜನಗರ, ಎರಡು ಊರಲ್ಲಿ ಎರಡು ಚಿರತೆಯನ್ನು ಸೆರೆ ಹಿಡಿದಿರುವ ಘಟನೆ ಹನೂರು ತಾಲೂಕು ಹಾಗೂ ಚಾಮರಾಜನಗರ ತಾಲೂಕಿನಲ್ಲಿ ವರದಿಯಾಗಿದೆ. ಚಿರತೆ ಸೆರೆಯಿಂದ ಗ್ರಾಮಸ್ಥರು ನಿರಾಳರಾಗಿದ್ದಾರೆ.

ಹೊನ್ನಹಳ್ಳಿ ಬಳಿ ಮೊದಲ ಚಿರತೆ ಸೆರೆ: ಜಾನುವಾರುಗಳ ಮೇಲೆ ದಾಳಿ ಮಾಡಿ ರೈತರಿಗೆ ಆತಂಕ ಹುಟ್ಟಿಸಿದ್ದ ಚಿರತೆ ಅರಣ್ಯ ಇಲಾಖೆ ಇರಿಸಿದ್ದ ಬೋನಿಗೆ ಸಿಕ್ಕಿ ಬಿದ್ದಿದೆ. ಸೆರೆಸಿಕ್ಕ ಚಿರತೆಯು 5 ವರ್ಷ ಪ್ರಾಯದ ಗಂಡು ಚಿರತೆಯಾಗಿದ್ದು, ಕಳೆದ ಹಲವು ದಿನಗಳಿಂದ ಜಾನುವಾರುಗಳ ಮೇಲೆ ದಾಳಿ ಮಾಡುತ್ತಿತ್ತು. ಈ ಹಿನ್ನೆಲೆ ಬಿಳಿಗಿರಿರಂಗನಾಥ ದೇವಾಲಯ ಹುಲಿ ಸಂರಕ್ಷಿತ ಪ್ರದೇಶದ ಚಾಮರಾಜನಗರ ಬಫರ್? ವಲಯ ಅರಣ್ಯ ಸಿಬ್ಬಂದಿ ಆಯಕಟ್ಟಿನ ಸ್ಥಳಗಳಲ್ಲಿ ಕೊಟ್ಟಿಗೆ ಮಾದರಿ ಬೋನಿಟ್ಟಿದ್ದರು. ಆಹಾರದಾಸೆಗೆ ಬಂದ ಚಿರತೆ ಬೋನಿಗೆ ಸೆರೆಯಾಗಿದೆ. ಸೆರೆಸಿಕ್ಕ ಚಿರತೆ ಆರೋಗ್ಯ ಸ್ಥಿರವಾಗಿದ್ದು ದಟ್ಟಾರಣ್ಯಕ್ಕೆ ಬಿಡಲಾಗುವುದು ಎಂದು ಅರಣ್ಯಾಧಿಕಾರಿಗಳು ಮಾಹಿತಿ ನೀಡಿದ್ದಾರೆ.

**ಇಂಡಿಗನತ್ತದ ಬಳಿಕ ನಾಗಮಲೆಯಲ್ಲಿ 2ನೇ ಚಿರತೆ ಸೆರೆ**

ಚಾಮರಾಜನಗರ ಜಿಲ್ಲೆ ಹನೂರು ತಾಲೂಕಿನ ಇಂಡಿಗನತ್ತ ಬಳಿ ಬಾಲಕನನ್ನು ಕೊಂದ ಚಿರತೆ ಸೆರೆ ಹಿಡಿದ ಬಳಿಕ ನಾಗಮಲೆಯಲ್ಲಿ ಉಪಟಳ ನೀಡುತ್ತಿದ್ದ ಮತ್ತೊಂದು ಹೆಣ್ಣು ಚಿರತೆಯನ್ನು ಅರಣ್ಯ ಇಲಾಖೆ ಸೆರೆ ಹಿಡಿದಿದೆ. ಮಲೆ ಮಹದೇಶ್ವರ ಬೆಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಾಗಮಲೆ ಗ್ರಾಮದಲ್ಲಿ ಕಳೆದ 15 ದಿನಗಳಿಂದ ಮೇಕೆಗಳು ಮತ್ತು ಸಾಕುನಾಯಿಗಳನ್ನು ಹೊತ್ತೊಯ್ದು ತೀವ್ರ ಆತಂಕ ಮೂಡಿಸಿತ್ತು. ಇಲ್ಲಿ ಕೂಡ ಕೊಟ್ಟಿಗೆ ಮಾದರಿ ಬೋನ್ ಇರಿಸಿ ಚಿರತೆ ಸೆರೆ ಹಿಡಿಯಲಾಗಿದ್ದು, ವೈದ್ಯಕೀಯ ಪರೀಕ್ಷೆ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಕಾವೇರಿ ವನ್ಯಜೀವಿಧಾಮ ಅಧಿಕಾರಿಗಳು ತಿಳಿಸಿದ್ದಾರೆ.

**ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರ ಸಂಘದಿಂದ ಪರಿಸರ ದಿನಾಚರಣೆ**

# ಪ್ರಕೃತಿ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿ



ಚಾಮರಾಜನಗರ, ತಾಲ್ಲೂಕಿನ ಹರವೆ ಗ್ರಾಮದ ಶ್ರೀ ಚನ್ನಬಸವೇಶ್ವರ ವಿದ್ಯಾ ಸಂಸ್ಥೆಯ ಆವರಣದಲ್ಲಿ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ಆಶ್ರಯದಲ್ಲಿ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು.

ಶಾಲಾ ಆವರಣದಲ್ಲಿ ಗಿಡ ನೆಡುವ ಮೂಲಕ ಚಾಲನೆ ನೀಡಲಾಯಿತು. ಈ ಸಂದರ್ಭದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಸಂಘದ ರಾಜ್ಯಾಧ್ಯಕ್ಷ ಹಳ್ಳಿ ಕೆರೆಹುಂಡಿ ಭಾಗ್ಯರಾಜ್ ಪ್ರಕೃತಿ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಕೈಗಾರಿಕೆ ಮತ್ತು ನಗರೀಕರಣದಿಂದಾಗಿ ಪ್ರಕೃತಿಯ ನಾಶ ಆರಂಭವಾಗುತ್ತಿದೆ. ಆದ್ದರಿಂದ ಪರಿಸರ ಸಂರಕ್ಷಣೆಗೆ ಹೆಚ್ಚು ಒತ್ತು ನೀಡಬೇಕಿದೆ ಎಂದರು. ಆಧುನಿಕ ಜಗತ್ತಿನಲ್ಲಿ ಮನುಷ್ಯರ ಜೀವನ ಶೈಲಿ ಬದಲಾದಂತೆ ಪ್ರಕೃತಿ ಮತ್ತು ಪರಿಸರದ ಅವನತಿಯು ಹೆಚ್ಚುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು. ಪರಿಸರ ಸಂರಕ್ಷಣೆ ಮಾಡುವ ಹೊಣೆಗಾರಿಕೆ ಯುವಕರ ಮೇಲಿದೆ. ನಮ್ಮ ಸುತ್ತಾ ಮುತ್ತಾ ಉತ್ತಮ ಪರಿಸರವಿದ್ದರೇ ಆರೋಗ್ಯವಂತ ಜೀವನ ನಡೆಸಲು ಸಾಧ್ಯವಿದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಶ್ರೀ ರೂಪ ಮಾತನಾಡಿ ರೈತ ಸಂಘಟನೆಗಳು ಕೇವಲ ಹೋರಾಟಕ್ಕೆ ಸೀಮಿತವಾಗದೆ ಪ್ರಕೃತಿಯ ರಕ್ಷಣೆಯ ಜವಾಬ್ದಾರಿಯ ನಿರ್ವಹಣೆಯಲ್ಲಿ ಮುಖ್ಯ ಪಾತ್ರ ವಹಿಸುತ್ತಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಹಂಡುವಿನ ಹಳ್ಳಿ ರಾಜಣ್ಣ ಹಾಲಿನ ನಾಗರಾಜ್. ಚನ್ನಬಸವೇಶ್ವರ ವಿದ್ಯಾಸಂಸ್ಥೆಯ ಆಡಳಿತ ಅಧಿಕಾರಿಗಳಾದ ಗಿರೀಶ್. ಎಸಿಎಫ್ ಮಂಜುನಾಥ್. ಮಲಿಯೂರ್ ಮಹೇಂದ್ರ ಸತೀಶ್ ಮಹೇಶ್. ಶ್ರೀಕಂಠ. ರಾಮಣ್ಣ. ಬಸವರಾಜು ನಾಗರಾಜು. ಪುಟ್ ಮಲ್ಲೇಗೌಡ. ರಾಜು ಗೌಡ ಮುಂತಾದವರು ಹಾಜರಿದ್ದರು

# ಕೆಂಪು ಚೆಲುವಾಜಮ್ಮಣ್ಣಿ ಕ್ಷೇಮಾಭಿವೃದ್ಧಿ ಸಂಘದ ಬೆಳ್ಳಿಹಬ್ಬ




ಮೈಸೂರು: ನಗರದ ಕೆಂಪು ಚೆಲುವಾಜಮ್ಮಣ್ಣಿ ನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಬೆಳ್ಳಿಹಬ್ಬ ಆಚರಣಾ ಕಾರ್ಯಕ್ರಮ ಜೂ.7ರಂದು ಬೆಳಗ್ಗೆ 10ಕ್ಕೆ ಕೆ.ಸಿ.ನಗರದ ಜಯಚಾಮರಾಜೇಂದ್ರ ರಸ್ತೆಯಲ್ಲಿ ನಡೆಯಲಿದೆ ಎಂದು ಅಧ್ಯಕ್ಷ ಎಚ್.ಆರ್. ಯೋಗೇಂದ್ರ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸಂಸದ ಯದುವೀರ್ ಉದ್ಘಾಟನೆ ಹಾಗೂ ಸ್ಮರಣ ಸಂಚಿಕೆ ಬಿಡುಗಡೆ ನಡೆಸಿಕೊಡಲಿದ್ದಾರೆ. ತಾವು ಅಧ್ಯಕ್ಷತೆ ವಹಿಸಲಿದ್ದು, ಶಾಸಕ ಟಿ.ಎಸ್.ಶ್ರೀವತ್ಸ, ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಅತಿಥಿಗಳಾಗಿರುವರು. ಧರ್ಮೇಂದ್ರಕುಮಾರ್ ಮುಖ್ಯ ಭಾಷಣ ಮಾಡುವರು. ಸಂಜೆ 4ಕ್ಕೆ ಪೊಲೀಸ್ ಬ್ಯಾಂಡ್, ಬಳಿಕ ಚಿತ್ರಗೀತೆ ಗಾಯನ, ಹಾಸ್ಯ ರಸಮಂಜರಿ, ರಾತ್ರಿ 9 ಕ್ಕೆ ಶಾಸಕ ಟಿ.ಎಸ್. ಶ್ರೀವತ್ಸರಿಂದ ಸಮಾರೋಪ ನುಡಿ ಇರಲಿದೆ ಎಂದು ಮಾಹಿತಿ ನೀಡಿದರು. ಟಿ.ಪಿ.ವಿಶ್ವನಾಥ್, ಎಸ್.ಸೋಮಶೇಖರ್, ಎನ್.ಬಿ.ಚೆನ್ನಕೇಶವ್, ಎಚ್.ಎಸ್.ದೀಪಕ್, ಚಿನ್ನಪ್ಪ ಇದ್ದರು.

# ಮೈಮುಲ್: ವಿಶ್ವಪರಿಸರ ದಿನಾಚರಣೆ



ಮೈಸೂರು: ವಿಶ್ವ ಪರಿಸರ ದಿನವನ್ನು ಮೈಮುಲ್ ನಲ್ಲಿ ಪರಿಸರ ದಿನಾಚರಣೆಯನ್ನು ಸರಳವಾಗಿ ಗಿಡಗಳನ್ನು ನೆಡುವ ಮೂಲಕ ಆಚರಿಸಲಾಯಿತು.

ಈ ಸಂದರ್ಭದಲ್ಲಿ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್.ಸುರೇಶ ನಾಯ್ಕ್, ಪ್ರಧಾನ ವ್ಯವಸ್ಥಾಪಕ ಎಚ್.ಕೆ.ಜಯಶಂಕರ್, ವ್ಯವಸ್ಥಾಪಕ ಹಾಗೂ ಹಿರಿಯ ಅಧಿಕಾರಿಗಳಾದ ಗುರುಪ್ರಸಾದ್, ಗಿರಿಜಾ, ಎಲ್.ಆರ್.ಕರಿಬಸವರಾಜು, ಸಂತೋಷ್, ಚಿನ್ಮಯಾನಂದ ಅರಸ್, ಸಿ.ಬಬಿತಾ, ಲಾವಣ್ಯವತಿ, ನಂದಿನಿ, ಡಾ.ಗೌರಿಶಂಕರ್, ರಶ್ಮಿ, ಎಂ.ಶಂಕರ್ ಇದ್ದರು.

# ಕ್ರೀಡಾಂಗಣದ ಕಾಮಗಾರಿ ಪೂರ್ಣಗೊಳಿಸಿ



ಚಾಮರಾಜನಗರ, ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದ ಒಳಾಂಗಣದಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಿ, ಕೂಡಲೇ ಬ್ಯಾಡ್ಮಿಂಟನ್ ಆಟ ಆಡಲು ಅವಕಾಶ ಕಲ್ಪಿಸಿಕೊಡುವಂತೆ ಒತ್ತಾಯಿಸಿ ಜಿಲ್ಲಾ ಬ್ಯಾಡ್ಮಿಂಟನ್ ಅಸೋಸಿಯೇಷನ್ ವತಿಯಿಂದ ನಗರದ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿ ಶ್ರೀರೂಪ ಅವರಿಗೆ ಮನವಿ ಸಲ್ಲಿಸಲಾಯಿತು.

2 ತಿಂಗಳಿನಿಂದ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದ ಒಳಾಂಗಣದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳು ತೀರಾ ಮಂದಗತಿಯಲ್ಲಿ ನಡೆಯುತ್ತಿದ್ದು, ಇದರಿಂದ ಆಟಗಾರರಿಗೆ ತುಂಬಾ ತೊಂದರೆಯಾಗುತ್ತಿದೆ. ಆದುದರಿಂದ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಿ ತಕ್ಷಣವೇ ಆಟಗಾರರಿಗೆ ಆಟ ಆಡಲು ಅನುವು ಮಾಡಿಕೊಡಬೇಕು.

ಒಳಾಂಗಣದ ಒಳಗಡೆ ಗೋಡೆಗಳಿಗೆ ಬಣ್ಣ ಹೊಡೆಸುವುದು, ಕುಡಿಯುವ ನೀರು ಮತ್ತು ಶೌಚಾಲಯದ ವ್ಯವಸ್ಥೆ ಮಾಡಿಸುವುದು, ಬ್ಯಾಡ್ಮಿಂಟನ್ ಅಂಕಣದ ಸುತ್ತಾ ಗ್ರೀನ್ ಮ್ಯಾಟ್ ಅಳವಡಿಸುವುದು, ಆಟಗಾರರಿಗೆ ಕುಳಿತುಕೊಳ್ಳಲು ಆಸನಗಳ ವ್ಯವಸ್ಥೆ ಮಾಡಿಸಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿರುವ ಮನವಿಯಲ್ಲಿ ಜಿಲ್ಲಾ ಕ್ರೀಡಾಂಗಣ ಸಲಹಾ ಸಮಿತಿ ಸದಸ್ಯ ಶ್ರೀನಿವಾಸ ಪ್ರಸಾದ್, ಷಟಲ್ ಬ್ಯಾಂಡ್ಮಿಟನ್ ಆಟಗಾರರಾದ ಶ್ರೀನಿಧಿಕುದರ್ ಒತ್ತಾಯಿಸಿದರು. ಷಟಲ್ ಬ್ಯಾಡ್ಮಿಂಟನ್ ಆಟಗಾರರಾದ ಸಿ.ಎಸ್. ಅಕ್ಷಯ್, ಮಲ್ಲಪ್ಪ, ಕಿರಣ್, ಡಾ. ಪ್ರವೀಣ್, ವಿಜಯ ಕುಮಾರ್, ಲೋಕೇಶ್, ಅರುಣ್, ಪರಶಿವಮೂರ್ತಿ, ಭರತ್ ಇತರರು ಹಾಜರಿದ್ದರು.

# ಕಾರು ಅಡ್ಡಗಟ್ಟಿ ದರೋಡೆಗೆ ಯತ್ನಿಸಿದ್ದ ಆರೋಪಿಗಳ ಬಂಧನ



ಗುಂಡ್ಲುಪೇಟೆ: ತಾಲ್ಲೂಕಿನ ಹಿರಿಕಾಟಿ ಗೇಟ್ ಬಳಿ ಮೈಸೂರು- ಊಟಿ ರಾಷ್ಟ್ರೀಯ ಹೆದ್ದಾರಿಯಲ್ಲಿ ದಿನಾಂಕ 21-05-2026 ರಂದು ಸಂಜೆ ಸುಮಾರು 6.45 ಗಂಟೆ ಸಮಯದಲ್ಲಿ ಮೈಸೂರು ಕಡೆಯಿಂದ ಕೇರಳ ಕಡೆ ತೆರಳುವಾಗ ಹಿಂದುಗಡೆ ಮೈಸೂರು ಕಡೆಯಿಂದ ಒಂದು ಇನೋವಾ ಕಾರಿನಲ್ಲಿ ಅರೋಪಿಗಳು ಬಂದು ಆಸೀಫ್ ಎಂಬುವರ ಅಪಹರಣ ಮಾಡಿದ ಪ್ರಕರಣದಲ್ಲಿ ಆರೊಪಿಗಳ ಎಡೆಮುರಿ ಕಟ್ಟುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಈ ಪ್ರಕರಣದಲ್ಲಿ ಆರೋಪಿತರು ಹಾಗೂ ಕಳುವಾಗಿರುವ ಕಾರುಗಳು ಪತ್ತೆಗಾಗಿ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಮುತ್ತುರಾಜ್ ಹಾಗೂ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಎಂ ಎನ್ ಶಶಿಧರ್, ಡಿವೈಎಸ್ಪಿ ಶ್ರೀಮತಿ ಸ್ನೇಹರಾಜ್ ರವರ ಮಾರ್ಗದರ್ಶನದಲ್ಲಿ ಬೇಗೂರು ವೃತ್ತದ ಆರಕ್ಷಕ ವೃತ್ತ ನಿರೀಕ್ಷಕ ಮೋಹಿತ್ ಸಹದೇವ್, ಪಿಎಸ್ಐ ನವೀನ್,ಪಿ.ಎಸ್.ಐ ಲೋಕೇಶ್, ಹಾಗೂ ಸಿಬ್ಬಂದಿಗಳಾದ ಪುಟ್ಟರಾಜು,ಅಜಿತ್ ಕುಮಾರ್,ದಿವಾಕರ,ಶಂಕರಲಿಂಗೇಗೌಡ,ಸಚಿನ್,ಮಹದೇವಸ್ವಾಮಿ, ಮಹೇಂದ್ರ,ಸಿದ್ದರಾಮು,ರಾಜು, ಚಾಲಕರಾದ ಹರೀಶ್,ಶಿವಕುಮಾರ ರವರನ್ನು ಒಳಗೊಂಡ ಒಂದು ತಂಡವನ್ನು ರಚಿಸಲಾಗಿತ್ತು. ಈ ತಂಡವು ಎಲ್ಲಾ ಆಯಾಮಗಳಿಂದಲೂ ತನಿಖೆ ನಡೆಸಿ ಆರೋಪಿಗಳನ್ನು 1) ಅನೀಶ್ ಪಿ.ಎಸ್ ಬಿನ್ ಶಶಿ ಪಿ.ಆರ. 32 ವರ್ಷ, ಹಿಂದೂ ಈಳವ ಜನಾಂಗ, ಕಲ್ಲು ಡಿಸೈನ್ ಕೆಲಸ, ಪಳ್ಳಾಯಿ ಹೌಸ್, ಕೆ.ಕೆ ರೋಡ್, ಪೊಟ್ಟ, ಚಾಲುಕುಡಿ, ತ್ರಿಶೂರು ಜಿಲ್ಲೆ, ಕೇರಳ 2) ಅನೂಪ್ ಟಿ.ಜೆ ಬಿನ್ ಜೋಶ್, 29 ವರ್ಷ, ಕ್ರಿಶ್ಚಿಯನ್ ಜನಾಂಗ, ಪರ್ನಿಚರ್ಸ್ ವ್ಯಾಪಾರ, ತಕ್ಕೋಲ್ಕಾರನ್ ಹೌಸ್, ಕೆ.ಕೆ ರೋಡ್, ಪೊಟ್ಟ, ಚಾಲುಕುಡಿ, ತ್ರಿಶೂರು ಜಿಲ್ಲೆ, ಕೇರಳ 3) ರಾಹುಲ್ ಇ.ಪಿ ಬಿನ್ ಪ್ರದೀಪ್. ಇ.ಕೆ. 28 ವರ್ಷ, ಎಲೆಕ್ಟ್ರಿಷಿಯನ್, ಹಿಂದೂ ಈಳವ ಜನಾಂಗ, ಎಲುವಂಗಲ್ ಹೌಸ್, ಪೊಟ್ಟ ಪೋಸ್ಟ್, ಚಾಳುಕುಡಿ ತಾ, ತ್ರಿಶೂರು ಜಿಲ್ಲೆ, 4) ಹೆನೋಕ್ ಆಂಟೋ ಬಿನ್ ಆಂಟೋ, 26 ವರ್ಷ, ಕ್ರಿಶ್ಚಿಯನ್ ಜನಾಂಗ, ಫುಡ್ ಡಿಲವರಿ ಕೆಲಸ, ಕೈತರನ್ ಹೌಸ್, ಕೆ.ಕೆ ರೋಡ್, ಪೊಟ್ಟ, ಚಾಳುಕುಡಿ, ತ್ರಿಶೂರು ಜಿಲ್ಲೆ, ಕೇರಳ 5) ಅನುರಾಜ್ ಪಿ.ಆರ್ ಬಿನ್ ರಾಜನ್, 35 ವರ್ಷ, ರಿಯಲ್ ಎಸ್ಟೇಟ್, ಹಿಂದೂ ಈಳವ ಜನಾಂಗ, ಪೊಟ್ಟಂಪರಂಬಿಲ್ ಹೌಸ್, ಕೆ.ಕೆ ರೋಡ್, ಪೊಟ್ಟ, ಚಾಳುಕುಡಿ, ತ್ರಿಶೂರು ಜಿಲ್ಲೆ, 6) ಅಮಲ್ ಪಿ.ಎ ಬಿನ್ ಅಯ್ಯಪ್ಪನ್, 26 ವರ್ಷ, ಹಿಂದೂ ಈಳವ ಜನಾಂಗ, ಫುಡ್ ಡಿಲವರಿ ಕೆಲಸ, ಪೊಟ್ಟಂಪರಂಬಿಲ್ ಹೌಸ್, ಕೆ.ಕೆ ರೋಡ್, ಪೊಟ್ಟ, ಚಾಳುಕುಡಿ, ತ್ರಿಶೂರು ಜಿಲ್ಲೆ, 8) ರಮೇಶ್ ಉಂಡಪ್ಪನ್ ಬಿನ್ ರಾಘವನ್ ಉಂಡಪ್ಪನ್, ಇರಿಂಗಪಿಲ್ಲಿ ಹೌಸ್, ಕೊಡಕರ ಗ್ರಾಮ, ತ್ರಿಶೂರು ಜಿಲ್ಲೆರವರನ್ನು ಬಂಧಿಸಿ ಆರೋಪಿತರಿಂದ ಕಳುವಾಗಿದ್ದ ಸುಮಾರು 8,20,000/-ರೂ ಮೌಲ್ಯದ ಸುಮಾರು ಕೆಎಲ್-05. ಎ.ಆರ್-8671 ನಂಬರಿನ ಬಿಳಿ ಬಣ್ಣದ ಮಾರುತಿ ಸ್ವಿಫ್ಟ್ ಕಾರು ಮತ್ತು ಕೆಎಲ್-45, ವಿ-2507 ನಂಬರಿನ ಬಿಳಿ ಬಣ್ಣದ ಇನ್ನೋವಾ ಕಾರು ಹಾಗೂ ಓಪ್ಪೋ ಕಂಪನಿಯ ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಪತ್ತೆ ಕಾರ್ಯದಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಲ್ಲದೇ ವೈರ್‌ಲೈಸ್ ವಿಭಾಗದ ಆರಕ್ಷಕ ನಿರೀಕ್ಷಕ, ನವೀನ್ ಕುಮಾರ್ ಹಾಗೂ ಸೈಬರ್ ವಿಭಾಗದ ವೆಂಕಟೇಶ್ ಎ,ಎಸ್,ಐ ಹಾಗೂ ಶಂಕರರಾಜು ಹೆಚ್,ಸಿ-60 ಭಾಗಿಯಾಗಿರುತ್ತಾರೆ.

ಈ ಪತ್ತೆ ಕಾರ್ಯದಲ್ಲಿ ಭಾಗವಹಿಸಿದ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಗಳ ಕಾರ್ಯವನ್ನು ಎಸ್ಪಿ ಮುತ್ತುರಾಜ್,ರವರು ಶ್ಲಾಘಿಸಿ ನಗದು ಬಹುಮಾನವನ್ನು ಘೋಷಿಸಿದರು.

# ವಂಚಿತ ಪರ ಬೆನ್ನೆಲುಬಾಗಿ

## ಅಧಿಕಾರಿಗಳು, ಸಚಿವರಿಗೆ ಆರ್.ಧರ್ಮಸೇನಾ ಕರೆ

ಚಾಮರಾಜನಗರ: ಸ್ವಾತಂತ್ರ್ಯಪೂರ್ವದಿಂದಲೂ ಸರ್ಕಾರಿ ಸವಲತ್ತುಗಳಿಂದ ವಂಚಿತವಾಗಿರುವ ಸಮುದಾಯಗಳ ಪರವಾಗಿ ಯಾವುದೇ ಸಚಿವರಾಗಲಿ ಅಥವಾ ಅಧಿಕಾರಿಗಳಾಗಲಿ ಬೆನ್ನೆಲುಬಾಗಿ ನಿಂತು ಸಹಾಯಹಸ್ತ ಚಾಚಬೇಕು ಎಂದು ಕರ್ನಾಟಕ ಮಾದರ ಮಹಾಸಭಾದ ಜಿಲ್ಲಾ ಉಸ್ತುವಾರಿ ಆರ್. ಧರ್ಮಸೇನಾ ಅವರು ಕರೆ ನೀಡಿದ್ದಾರೆ.

ನಗರದ ಡಾ. ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದ್ದ ಕರ್ನಾಟಕ ಮಾದರ ಮಹಾಸಭಾ ಜಿಲ್ಲಾ ಸಮಿತಿ ಪದಾಧಿಕಾರಿಗಳ ಸಭೆಯಲ್ಲಿ ಪಾಲ್ಗೊಂಡು, ಜಿಲ್ಲಾ ಹಾಗೂ ತಾಲೂಕು ಸಮಿತಿಗಳ ನೂತನ ಪದಾಧಿಕಾರಿಗಳಿಗೆ ನೇಮಕಾತಿ ಆದೇಶ ಪತ್ರ ವಿತರಿಸಿ ಅವರು ಮಾತನಾಡಿದರು.

### ಮುಖ್ಯಮಂತ್ರಿಗಳ ನಿರ್ಧಾರಕ್ಕೆ ಶ್ಲಾಘನೆ ಮತ್ತು ಸಂಘಟನೆಯ ಜವಾಬ್ದಾರಿ

ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ನಮ್ಮ ಸಮುದಾಯದ ಬಗ್ಗೆ ವಿಶೇಷ ಕಾಳಜಿ ವಹಿಸಿದ್ದು, ರಾತ್ರೋರಾತ್ರಿ 56 ಸಾವಿರ ಹುದ್ದೆಗಳ ಭರ್ತಿಗೆ ಅಂಕಿತ ಹಾಕಿರುವುದು ಶ್ಲಾಘನೀಯ ಎಂದು ಧರ್ಮಸೇನಾ ಅವರು ಇದೇ ವೇಳೆ ನೆನೆದರು. ಸಮಾಜದ ಪ್ರತಿಯೊಬ್ಬ ಜನಪ್ರತಿನಿಧಿ ಮತ್ತು ಅಧಿಕಾರಿಗಳು ಈ ಶೋಷಿತ ವರ್ಗಗಳ ಅಭಿವೃದ್ಧಿಗೆ ಕೈಜೋಡಿಸಬೇಕಾದ ಅಗತ್ಯವಿದೆ. ಇದೇ ಸಂದರ್ಭದಲ್ಲಿ ಚಾಮರಾಜನಗರ ಜಿಲ್ಲೆ ಹಾಗೂ ವಿವಿಧ ತಾಲೂಕುಗಳಿಗೆ ನೇಮಕಗೊಂಡಿರುವ ನೂತನ ಪದಾಧಿಕಾರಿಗಳು ಜಿಲ್ಲಾದ್ಯಂತ ವ್ಯಾಪಕ ಸದಸ್ಯತ್ವ ಅಭಿಯಾನ ಹಮ್ಮಿಕೊಳ್ಳಬೇಕು. ಆ ಮೂಲಕ ಸಂಘಟನೆಯನ್ನು ಮತ್ತಷ್ಟು ಸದೃಢಗೊಳಿಸಲು ಶ್ರಮಿಸಬೇಕು ಎಂದು ಅವರು ಕಿವಿಮಾತು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾಧ್ಯಕ್ಷ ಎಂ.ಶಿವಮೂರ್ತಿ ವಹಿಸಿದ್ದರು. ಸಭೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಾಳ್ಯ ರಾಚಪ್ಪ, ಉಪಾಧ್ಯಕ್ಷ ನಿಟ್ರೆ ಮಹದೇವಯ್ಯ, ಜಿಲ್ಲಾ ಖಜಾಂಚಿ ಬೂದುಬಾಳು ಮಹದೇವು, ಹನೂರು ತಾಲೂಕು ಅಧ್ಯಕ್ಷ ಸುದೇಶ್, ಚಾಮರಾಜನಗರ ತಾಲೂಕು ಅಧ್ಯಕ್ಷ ಎಂ.ರಾಜು ಹಾಗೂ ಗುಂಡ್ಲುಪೇಟೆ ತಾಲೂಕು ಅಧ್ಯಕ್ಷ ಅಂಕಹಳ್ಳಿ ಸಿದ್ದಯ್ಯ ಉಪಸ್ಥಿತರಿದ್ದರು. ಇವರೊಂದಿಗೆ ಚಾಮರಾಜ್ ಕೊಳ್ಳೇಗಾಲ, ಜಿಲ್ಲಾ ಸಮಿತಿ ಸದಸ್ಯರಾದ ಎಸ್.ಸೋಮಶೇಖರ್, ರಾಜಣ್ಣ, ರಾಜು ಮರಳ್ಳಿ, ಮಂಜು, ರವಳಪ್ಪ, ಕುಮಾರ್ ತಿಮ್ಮರಾಜಿಪುರ, ಸಿದ್ದಪ್ಪ, ರವಿ, ರಾಚಯ್ಯ, ಹರವೆ ಮಹದೇವಯ್ಯ, ಶಂಕರ್, ಮನು, ಸಂಪತ್ತು, ಆರ್. ಕೆ.ಶಿವಕುಮಾರ್, ಲಿಂಗರಾಜು ಬಸವನಪುರ ಸೇರಿದಂತೆ ಹಲವು ಪ್ರಮುಖರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.



### ಒಳಮೀಸಲಾತಿ ಜಾರಿ, ಮಹಾಸಭಾದ ಧ್ಯೇಯಗಳು

**ದೀರ್ಘಕಾಲದ ಸಮುದಾಯದ ಹೋರಾಟದ ಫಲವಾಗಿ ರಾಜ್ಯದಲ್ಲಿ ಒಳಮೀಸಲಾತಿ ಜಾರಿಯಾಗಿರುವುದು ನಮಗೆ ಹೆಮ್ಮೆಯ ವಿಷಯವಾಗಿದೆ. ಈ ಒಳಮೀಸಲಾತಿಯ ಆಧಾರದ ಮೇಲೆ ಸಿಗುವ ಸರ್ಕಾರಿ ಸವಲತ್ತುಗಳು ಸೇರಿದಂತೆ ಇನ್ನಿತರ ಪ್ರಮುಖ ವಿಷಯಗಳ ಬಗ್ಗೆ ಸಮಾಜದಲ್ಲಿ ಜಾಗೃತಿ ಮೂಡಿಸಿ, ಅವುಗಳನ್ನು ಅರ್ಹರಿಗೆ ತಲುಪಿಸುವ ಕೆಲಸವನ್ನು ಚಾಮರಾಜನಗರ ಮಾದರ ಮಹಾಸಭಾ ಜವಾಬ್ದಾರಿಯಿಂದ ಮಾಡಬೇಕಿದೆ. ಇಡೀ ರಾಜ್ಯದಲ್ಲೇ ಮಹಾಸಭೆಯು ಒಂದು ವಿಶಿಷ್ಟವಾದ ಕೆಲಸವನ್ನು ಮಾಡಬೇಕೆಂದು ತೀರ್ಮಾನಿಸಲಾಗಿದ್ದು, ಸಮಾಜದ ಅಸಹಾಯಕ ಕುಟುಂಬಗಳ ನೆರವಿಗೆ ನಿಲ್ಲಲು ಪದಾಧಿಕಾರಿಗಳು ಪ್ರತಿಜ್ಞೆ ಮಾಡಬೇಕಿದೆ. ನಮ್ಮ ಸಮಾಜವನ್ನು ರಕ್ಷಿಸುವುದು ಮತ್ತು ಅರ್ಹ ಸವಲತ್ತುಗಳು ಪ್ರತಿಯೊಬ್ಬರಿಗೂ ಸಿಗುವಂತೆ ನೋಡಿಕೊಳ್ಳುವುದೇ ಮಹಾಸಭಾದ ಮುಖ್ಯ ಉದ್ದೇಶವಾಗಿದೆ ಎಂದು ಅವರು ಸ್ಪಷ್ಟಪಡಿಸಿದರು.**

# ಹನೂರು: ಚಿರತೆ ಸೆರೆ



ಹನೂರು: ಮಲೆ ಮಹದೇಶ್ವರ ಬೆಟ್ಟ ತಪ್ಪಲಿನ ಇಂಡಿಗನತ್ತ, ನಾಗಮಲೆ ಗ್ರಾಮಗಳಲ್ಲಿ ಹಲವಾರು ದಿನಗಳಿಂದ ರೈತರ ನಿದ್ದೆಗಡಿಸಿದ್ದ ಚಿರತೆಯನ್ನು ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಯಶಸ್ವಿಯಾಗಿದ್ದಾರೆ.

ಕಳೆದ ಮೇ.10ರಂದು ನಾಗಮಲೆಗೆ ಕಾಲ್ನಡಿಗೆಯಲ್ಲಿ ತೆರಳುವಾಗ ಬೆಂಗಳೂರಿನ ಹರ್ಷಿತ್ ಎಂಬ ಬಾಲಕ ಚಿರತೆ ದಾಳಿಯಿಂದ ಮೃತಪಟ್ಟಿದ್ದನು. ಕಾವೇರಿ ವನ್ಯಜೀವಿಧಾಮದ ಸಿಬ್ಬಂದಿಗಳು ವಿವಿಧ ಮಾದರಿಯ ಮೂರು ಬೋನ್‌ಗಳನ್ನು ಇಟ್ಟು ಕಾರ್ಯಾಚರಣೆ ನಡೆಸುತ್ತಿದ್ದರು. 15 ದಿನಗಳ ನಂತರ ಹೆಣ್ಣು ಚಿರತೆಯೊಂದು ತುಮಕೂರು ಮಾದರಿ ಬೋನಿಗೆ ಸೆರೆಯಾಗಿತ್ತು. ರಕ್ತದ ಮಾದರಿ, ಕ್ಯಾಮರಾ ಟ್ರಾಪ್ ನಲ್ಲಿ ಸೆರೆಸಿಕ್ಕ ಚಿರತೆಯ ದೃಶ್ಯಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯ ಮತ್ತು ತಜ್ಞರಿಗೆ ರವಾನೆ ಮಾಡಿ ಬಾಲಕನ ಸಾವಿಗೆ ಕಾರಣವಾದ ಚಿರತೆ ಬಗ್ಗೆ ದೃಢಪಡಿಸಿ ಸೆರೆ ಸಿಕ್ಕ ಚಿರತೆಯನ್ನು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನಕ್ಕೆ ರವಾನೆ ಮಾಡಲಾಗುವುದು ಎಂದು ಕಾವೇರಿ ವನ್ಯಜೀವಿಧಾಮದ ಡಿಸಿಎಫ್ ಆಗಿದ್ದ ಸುರೇಂದ್ರ ಮಾಹಿತಿ ನೀಡಿದ್ದರು. ಇನ್ನೊಂದೆಡೆ ನಾಗಮಲೆಯಲ್ಲಿ ಮತ್ತೊಂದು ಚಿರತೆ ಮೇ.24ರ ಬೆಳಗ್ಗೆ ಕಾಣಿಸಿಕೊಂಡಿತ್ತು. ಚಿರತೆ ಸೆರೆಗಾಗಿ ಎರಡು ಬೋನ್‌ಗಳನ್ನು ಇಡಲಾಗಿತ್ತು. ಆದರೂ ಚಾಲಾಕಿ ಚಿರತೆ ರೈತರು ಸಾಕಿದ್ದ ಸಾಕು ನಾಯಿಗಳು, ಮೇಕೆಗಳನ್ನು ತಿಂದು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಚಳ್ಳೆಹಣ್ಣು ತಿನ್ನಿಸಿತ್ತು. ಇದೀಗ 25 ದಿನಗಳ ಬಳಿಕ ಮತ್ತೊಂದು ಚಿರತೆ ಸೆರೆಹಿಡಿಯಲಾಗಿದೆ.

# ಉಡ ಮಾರಲು ಯತ್ನಿಸಿದವರ ಬಂಧನ



ಚಾಮರಾಜನಗರ, ಕೊಳ್ಳೇಗಾಲ ತಾಲೂಕಿನ ಸತ್ತೇಗಾಲ ಹ್ಯಾಂಡ್ ಪೋಸ್ಟ್ ಬಳಿ ಇರುವ ಕಾವೇರಿ ನದಿಯ ದಡದಲ್ಲಿ ಉಡವನ್ನು ಮಾರಾಟ ಮಾಡಲು ಸಾಗಾಣಿಕೆ ಮಾಡುತ್ತಿದ್ದ ಇಬ್ಬರನ್ನು ಬಂಧಿಸಿ ಉಡವನ್ನು ಕೊಳ್ಳೇಗಾಲ ಸಿಐಡಿ ಪೊಲೀಸ್ ಅರಣ್ಯ ಸಂಚಾರಿ ದಳ ವಶಪಡಿಸಿಕೊಂಡಿದೆ.

ಕೊಳ್ಳೇಗಾಲ ತಾಲೂಕಿನ ಸತ್ತೇಗಾಲ ಹ್ಯಾಂಡ್ ಪೋಸ್ಟ್ ಬಳಿ ಇರುವ ಕಾವೇರಿ ನದಿ ದಡದಲ್ಲಿ ಉಡವನ್ನು ಹಿಡಿದು ಮಾರಾಟ ಮಾಡುವ ಸಲುವಾಗಿ ಸಾಗಾಣಿಕೆ ಮಾಡುತ್ತಿರುವುದಾಗಿ ದೊರೆತ ಮಾಹಿತಿಯಂತೆ ಜೂನ್ 3ರಂದು ಮಧ್ಯಾಹ್ನ 3.15 ಗಂಟೆ ಸಮಯದಲ್ಲಿ ಕಾವೇರಿ ನದಿಯ ದಡದ ಬಳಿ ಹೋದಾಗ ಇಬ್ಬರು ವ್ಯಕ್ತಿಗಳು ರಟ್ಟಿನಿಂದ ಸುತ್ತಿರುವ ಕಬ್ಬಿಣದ ಪಂಜರ ಸಮೇತ ಇರುವ ಒಂದು ಜೀವಂತ ಉಡವನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದುದ್ದು ಕಂಡು ಬಂತು. ತಕ್ಷಣ ದಾಳಿ ನಡೆಸಿ ಇಬ್ಬರು ಆರೋಪಿಗಳನ್ನು ಬಂಧಿಸಿ ಸ್ವತ್ತನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗಿದೆ. ಬಂಧಿತ ಆರೋಪಿಗಳು ಸರ್ದಾರ್ ಬಿನ್ ಲೇಟ್ ಮುಕ್ತಾರ್ ಅಹಮದ್ ಅಲಿಯಾಸ್ ಮುಕ್ತಾರ್ ಪಾಶ (45 ವರ್ಷ), ಹುಣಸೂರು ಪಟ್ಟಣ, ಹುಣಸೂರು ತಾಲೂಕು, ಮೈಸೂರು ಜಿಲ್ಲೆ ಹಾಗೂ ರಫೀ ಬಿನ್ ಲೇಟ್ ಅಬ್ದುಲ್ ಗನ್ನಿ (44 ವರ್ಷ) ಹುಣಸೂರು ಪಟ್ಟಣ, ಹುಣಸೂರು ತಾಲೂಕು, ಮೈಸೂರು ಜಿಲ್ಲೆಯವನಾಗಿದ್ದಾರೆ.

ಪೊಲೀಸ್ ಮಹಾನಿರೀಕ್ಷಕರು. ಸಿ.ಐ.ಡಿ. ಅರಣ್ಯ ಘಟಕ, ಬೆಂಗಳೂರು ಮತ್ತು ಮಡಿಕೇರಿ ಸಿಐಡಿ ಅರಣ್ಯ ಘಟಕದ ಪೊಲೀಸ್ ಅಧೀಕ್ಷಕರಾದ ಪವನ್‌ನೆಜ್ಜೂರು, ಐಪಿಎಸ್ ರವರ ಮಾರ್ಗದರ್ಶನದಲ್ಲಿ ಕೊಳ್ಳೇಗಾಲ ಸಿಐಡಿ ಪೊಲೀಸ್ ಅರಣ್ಯ ಸಂಚಾರಿ ದಳದ ಪೊಲೀಸ್ ಉಪನಿರೀಕ್ಷಕರಾದ ಅವಿನಾಶ್ ಹಾಗೂ ಸಿಬ್ಬಂದಿ ಬಸವರಾಜ್, ಸ್ವಾಮಿ, ಜಮೀಲ್, ಲತಾ, ರಾಮಚಂದ್ರ, ಪ್ರಭಾಕರ್ ಮತ್ತು ಬಸವರಾಜ್ ರವರು ಪಾಲ್ಗೊಂಡಿದ್ದರು ಎಂದು ಪ್ರಕಟಣೆ ತಿಳಿಸಿದೆ.

# ಸೆಸ್ಕ್‌ನಲ್ಲಿ ವಿಶ್ವ ಪರಿಸರ ದಿನಾಚರಣೆ



ಮೈಸೂರು: ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್) ವತಿಯಿಂದ ವಿಶ್ವ ಪರಿಸರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ವಿಜಯನಗರ 2ನೇ ಹಂತದಲ್ಲಿರುವ ನಿಗಮ ಕಚೇರಿ ಆವರಣದಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕರಾದ ಎಂ.ಎಸ್. ಅರ್ಚನಾ ಹಾಗೂ ಇನ್ನಿತರ ಅಧಿಕಾರಿಗಳು ಸಸಿಗಳನ್ನು ನೆಟ್ಟು, ನೀರೆರೆಯುವ ಮೂಲಕ ವಿಶ್ವ ಪರಿಸರ ದಿನದ ಮಹತ್ವವನ್ನು ಸಾರಿದರು.

ಈ ಸಂದರ್ಭದಲ್ಲಿ ಸೆಸ್ಕ್ ತಾಂತ್ರಿಕ ನಿರ್ದೇಶಕರಾ ಶರಣಮ್ಮ ಎಸ್. ಜಂಗಿನ, ಕಂಪನಿ ಕಾರ್ಯದರ್ಶಿ ಸತ್ಯ ಪ್ರಸಾದ್, ಪ್ರಧಾನ ವ್ಯವಸ್ಥಾಪಕರಾದ ಆರ್. ರಾಮಸ್ವಾಮಿ, ಡಿಜಿಎಂ ಪಿ. ರಮೇಶ್, ಸಹಾಯಕ ಪ್ರಧಾನ ವ್ಯವಸ್ಥಾಪಕ ಕೆ. ಭರತ್ ಕುಮಾರ್, ತಿಲಕ್ ಕುಮಾರ್ ಇತರರಿದ್ದರು.

# ಪರಿಸರ ಉಳಿದರೆ, ಮಾನವನ ಉಳಿವು: ಪಟೇಲ್ ರಾಜು

ರಾಮನಗರ: ಪರಿಸರ ರಕ್ಷಣೆ ಎಲ್ಲರ ಕರ್ತವ್ಯ. ಪರಿಸರ ಇರುವಲ್ಲಿ ಮಾನವನ ಆರೋಗ್ಯವೂ ವೃದ್ಧಿಸುತ್ತದೆ, ಪರಿಸರ ಉಳಿದರೆ, ಮಾನವರು ಉಳಿಯುತ್ತಾರೆ ಎಂದು ಪಟೇಲ್ ಆಂಗ್ಲ ಶಾಲೆಯ ಸಂಸ್ಥಾಪಕ ಕಾರ್ಯದರ್ಶಿ ಪಟೇಲ್ ರಾಜು ಹೇಳಿದರು.



ಶಾಲೆಯ ಆವರಣದಲ್ಲಿ ಏರ್ಪಡಿಸಿದ್ದ ವಿಶ್ವ ಪರಿಸರ ದಿನಾಚರಣೆಯ ವೇಳೆ ಗಿಡ ನೆಟ್ಟು ಅವರು ಮಾತನಾಡಿದರು. ಹುಟ್ಟು ಹಬ್ಬ ಮುಂತಾದ ವಿಶೇಷ ದಿನಗಳಲ್ಲಿಯೂ ಕೂಡ ಎಲ್ಲರೂ ಒಂದೊಂದು ಗಿಡ ನೆಟ್ಟು ಪೋಷಿಸಬೇಕು ಎಂದು ಕರೆ ನೀಡಿದರು. ಮಣ್ಣಿನ ಪೌಷ್ಠಿಕಾಂಶಗಳನ್ನು ಉಳಿಸುವ ವಿಚಾರದಲ್ಲಿ ವಿದ್ಯಾರ್ಥಿಗಳು ಕಲಿಯಬೇಕು. ತ್ಯಾಜ್ಯ ಉತ್ಪಾದನೆಯನ್ನು ತಡಿಯಬೇಕು. ತಾಜ್ಯವನ್ನು ಎಲ್ಲೆಂದರಲ್ಲಿ ಎಸೆಯಬಾರದು, ಹಸಿರೇ ಉಸಿರಾಗಲಿ ಎಂದು ಅವರು ವಿದ್ಯಾರ್ಥಿಗಳಲ್ಲಿ ತಿಳುವಳಿಕೆ ಮೂಡಿಸಿದರು.

ಶಾಲೆಯ ಅವರಣದಲ್ಲಿ ತೆಂಗಿನ ಸಸಿ ನೆಡುವುದರ ಮೂಲಕ ಜಿಲ್ಲಾ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಖಜಾಂಚಿ ರವಿ ಸಿ ಪರಿಸರ ದಿನವನ್ನು ಉದ್ಘಾಟಿಸಿದರು. ರವರು ತೆಂಗಿನ ಸಸಿ ನೆಡುವುದರ ಮೂಲಕ ಪರಿಸರ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ವೇಳೆ ಮಾತನಾಡಿದ ಅವರು ಪರಿಸರ ಉಳಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ನೀರು, ಗಾಳಿ, ಮಣ್ಣಿನ ಮಾಲಿನ್ಯವನ್ನು ನಿಯಂತ್ರಿಸಲು ಎಲ್ಲರೂ ಪ್ರಯತ್ನಿಸಬೇಕು. ವಿಶೇಷವಾಗಿ ವಿದ್ಯಾರ್ಥಿಗಳು ಪರಿಸರ ಉಳಿಸುವುದನ್ನು ರೂಢಿಸಬೇಕು ಎಂದರು.

## ವಾಸವಿ ವಿದ್ಯಾನಿಕೇತನ ಶಾಲೆಯಲ್ಲಿ ಪರಿಸರ ದಿನ

**ನಗರದ ವಾಸವಿ ವಿದ್ಯಾನಿಕೇತನ ಶಾಲೆಯಲ್ಲಿಯೂ ವಿಶ್ವ ಪರಿಸರ ದಿನವನ್ನು ಆಚರಿಸಲಾಯಿತು. ಪರಿಸರ ದಿನದ ಅಂಗವಾಗಿ ವಿವಿಧ ತರಗತಿಗಳ ಮಕ್ಕಳು ನೃತ್ಯ, ಹಾಡು, ಮೈಮ್ ಮುಂತಾದ ಕಲೆಗಳನ್ನು ಪ್ರದರ್ಶಿಸಿ ಪರಿಸರ ಕಾಳಜಿಯನ್ನು ಮೆರೆದರು. 6 ಮತ್ತು 7ನೇ ತರಗತಿಗಳಿಗೆ ಚಿತ್ರ ಬರೆಯುವ ಮತ್ತು ಕಿಜ್ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಮುಖ್ಯಶಿಕ್ಷಕಿ ವಿಜಯ ಪ್ರಭಾ, ಉಪಮುಖ್ಯ ಶಿಕ್ಷಕಿ ಕೆ.ಆರ್.ಚಾರುಮತಿ ಮತ್ತು ಶಿಕ್ಷಕ ವೃಂದ ಪರಿಸರ ದಿನಾಚರಣೆಯಲ್ಲಿ ತೊಡಗಿಸಿಕೊಂಡಿದ್ದರು.**

## ಗಿಡನೆಟ್ಟು ಪೋಷಿಸಲು ರಾಜಣ್ಣ ಕರೆ

# ಹುಟ್ಟುಹಬ್ಬ ದಿನದಂದ ಗಿಡನೆಡಿ

ರಾಮನಗರ: ಹುಟ್ಟಿದ ಹಬ್ಬ, ವಿವಾಹ ವಾರ್ಷಿಕೋತ್ಸವ ದಿನದ ಆಚರಣೆಯ ಅಂಗವಾಗಿ ಗಿಡವೊಂದನ್ನು ನೆಟ್ಟು ಅದನ್ನು ಪೋಷಿಸಿ ಎಂದು ಎಸ್.ಆರ್.ಎಸ್.ಹಾರ್ಡ್‌ವೇರ್ ಮಾಲೀಕ ರಾಜಣ್ಣ ಕರೆ ನೀಡಿದರು.

ಭಾರತ್ ವಿಕಾಸ್ ಪರಿಷದ್, ವಾಲ್ಮೀಕಿ ಶಾಖೆ ಇಲ್ಲಿಗೆ ಸಮೀಪದ ಜೈಪುರ ಗ್ರಾಮದ ಶ್ರೀ ನರಸಿಂಹ ಸ್ವಾಮಿ ದೇವಾಲಯದ ಆವರಣದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಪರಿಸರ ದಿನದ ಅಂಗವಾಗಿ ಗಿಡ ನೆಟ್ಟು ಅವರು ಮಾತನಾಡಿದರು. ಪ್ರತಿ ತಿಂಗಳು ಒಂದೊಂದು ಶಾಲೆಯ ಆವರಣದಲಿ ಗಿಡ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳುವುದಾಗಿ ಅವರು ತಿಳಿಸಿದರು.

ಕಾರ್ಯಕ್ರಮವನ್ನು ವಿಭಾಗೀಯ ಭಾರತ್ ವಿಕಾಸ್ ಪರಿಷದ್‌ನ ಪರಿಸರ ಘಟಕದ ಸಂಚಾಲಕ ರಾ.ಶಿ.ಬಸವರಾಜ್ ಉದ್ಘಾಟಿಸಿದರು. ಪ್ರಾಂತ್ಯ ಸೇವಾ ಸಂಚಾಲಕ ಎಂ. ಜಗದೀಶ್, ಸಹ ಸಂಚಾಲಕ ಕೆ.ಎಚ್. ಚಂದ್ರಶೇಖರಯ್ಯ, ಆರೋಗ್ಯ ವಿಭಾಗದ ಸಂಚಾಲ ಎಸ್.ವೆಂಕಟಪ್ಪ, ಪರಿಸರ ಸಂಚಾಲಕ ಆರ್.ಬಸವಾಚಾರ್, ಬಿಡದಿ ಕೈಗಾರಿಕಾ ವಿಭಾಗದ ಶಿವಸ್ವಾಮಿ, ಮಾಯಗಾನಹಳ್ಳಿ ಪಂಚಾಯ್ತಿ ಮಾಜಿ ಅಧ್ಯಕ್ಷ ಪ್ರಕಾಶ್, ನಿವೃತ್ತ ಪ್ರಾಂಶುಪಾಲ ವನರಾಜು, ಕರಾವೇ ಪ್ರವೀಣ್ ಶೆಟ್ಟಿ ಬಣದ ಜಿಲ್ಲಾಧ್ಯಕ್ಷ ಎಂ. ರಾಜು. ಪ್ರಮುಖರಾದ ಅಶೋಕ್, ಸಂಜಯ್ ಜೈನ್, ಆರ್.ಕುಮಾರ್, ಚಿಕ್ಕವೀರಪ್ಪ, ಮಹಿಳಾ ಸಂಚಾಲಕರಾದ ಎಂ.ಎಸ್.ಲಾವಣ್ಯ, ಲಕ್ಷ್ಮೀ ನರಸಿಂಹಸ್ವಾಮಿ ಟ್ರಸ್ಟ್‌ನ ಸದಸ್ಯರುಗಳು, ರುದ್ರೇಶ್, ಗಂಗಾಧರ್, ಹೊನ್ನಪ್ಪ, ಎಸ್.ವೆಂಕಟಪ್ಪ, ಕೆ.ಎನ್.ಮಹೇಶ್ ಮುಂತಾದವರು ಭಾಗವಹಿಸಿದ್ದರು.



## ಉತ್ತಮ ಪರಿಸರ ರೂಪಿಸಲು ಪ್ರೇರೇಪಿಸಿ: ಶಾಸಕ ಕೆ.ವೆಂಕಟೇಶ್

# ವಿದ್ಯಾರ್ಥಿಗಳಲ್ಲಿ ಪರಿಸರ ಕಾಳಜಿ ಮೂಡಿಸಿ



**ಪಿರಿಯಾಪಟ್ಟಣ:** ವಿದ್ಯಾರ್ಥಿಗಳಲ್ಲಿ ಶಾಲಾ ಹಂತದಲ್ಲೇ ಪರಿಸರದ ಬಗ್ಗೆ ಕಾಳಜಿ ಮತ್ತು ಜಾಗೃತಿ ಮೂಡಿಸಿದಾಗ ಮಾತ್ರ ಉತ್ತಮ ಪರಿಸರ ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ ಎಂದು ಶಾಸಕ ಕೆ.ವೆಂಕಟೇಶ್ ಹೇಳಿದರು.

ತಾಲೂಕಿನ ಕಿತ್ತೂರು ಸರ್ಕಾರಿ ಪದವಿಪೂರ್ವ ಕಾಲೇಜು ಆವರಣದಲ್ಲಿ ಅರಣ್ಯ ಇಲಾಖೆ ಸಹಯೋಗದೊಂದಿಗೆ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಗಿಡ ನೆಟ್ಟು ಚಾಲನೆ ನೀಡಿ ಅವರು ಮಾತನಾಡಿದರು.

ತಾಲೂಕಿನ ಕೆಲವು ಭಾಗಗಳಲ್ಲಿ ತಂಬಾಕು ಹದ ಮಾಡುವ ಉದ್ದೇಶದಿಂದ ಹೆಚ್ಚಿನ ಪ್ರಮಾಣದಲ್ಲಿ ಮರಗಳನ್ನು ಕಡಿಯಲಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಉತ್ತಮ ಪರಿಸರ ನಿರ್ಮಾಣ ಸಾಧ್ಯವಾಗುವುದಿಲ್ಲ. ಆದ್ದರಿಂದ ಮೊದಲು ಮರಗಳ ನಾಶವನ್ನು ತಡೆಯಬೇಕು ಎಂದು ಹೇಳಿದರು.

ವಿದ್ಯಾರ್ಥಿಗಳು ತಮ್ಮ ಮನೆ ಹಾಗೂ ಜಮೀನುಗಳ ಸುತ್ತಮುತ್ತ ಗಿಡಗಳನ್ನು ನೆಟ್ಟು ಬೆಳೆಸುವ ಮೂಲಕ ಪರಿಸರ ಸಂರಕ್ಷಣೆಗೆ ಆದ್ಯತೆ ನೀಡಬೇಕು. ಪರಿಸರದ ಬಗ್ಗೆ ವಿದ್ಯಾರ್ಥಿಗಳ ಜೊತೆಗೆ ಪೋಷಕರೂ ಕೈಜೋಡಿಸಿದಾಗ ಮಾತ್ರ ಆರೋಗ್ಯಕರ ಮತ್ತು ಹಸಿರುಮಯ ವಾತಾವರಣ ನಿರ್ಮಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ತಾಲೂಕು ವಲಯ ಅರಣ್ಯಾಧಿಕಾರಿ ಪದ್ಮಶ್ರೀ ಮಾತನಾಡಿ, ಮನುಷ್ಯನ ದುರಾಸೆಯಿಂದ ಪರಿಸರ ಹಾನಿಯಾಗುತ್ತಿದ್ದು, ಇದರ ಪರಿಣಾಮವಾಗಿ ಆರೋಗ್ಯ ಸಮಸ್ಯೆಗಳು ಹೆಚ್ಚುತ್ತಿರುವುದರ ಜೊತೆಗೆ ಮಳೆ ಹಾಗೂ ಬೆಳೆಗಳ ಮೇಲೂ ದುಷ್ಪರಿಣಾಮ ಉಂಟಾಗುತ್ತಿದೆ ಎಂದರು.

ಇಂದಿನ ಯುವಜನತೆ ಪರಿಸರ ಸಂರಕ್ಷಣೆಯ ಹೊಣೆಗಾರಿಕೆಯನ್ನು ಅರಿತು ಕಾರ್ಯನಿರ್ವಹಿಸಿದಾಗ ಮಾತ್ರ ಆರೋಗ್ಯವಂತ ಸಮಾಜ ಹಾಗೂ ಉತ್ತಮ ಪರಿಸರವನ್ನು ಮುಂದಿನ ಪೀಳಿಗೆಗೆ ಉಳಿಸಿಕೊಡಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಮಂಜುನಾಥ್, ಕ್ಷೇತ್ರ ಶಿಕ್ಷಣಾಧಿಕಾರಿ ಡಿ.ಎನ್. ರವಿಪ್ರಸನ್ನ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಪ್ರಶಾಂತ್, ಪ್ರಾಂಶುಪಾಲ ಜವರೇಗೌಡ, ಶಾಲಾ ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಕೆ.ಪಿ. ವೆಂಕಟೇಶ್, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಸಚಿನ್, ತಾಲೂಕು ದಂಡಾಧಿಕಾರಿ ನಿಸರ್ಗಪ್ರಿಯ, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಸುನಿಲ್ ಕುಮಾರ್, ಮುಖಂಡರಾದ ದೀಪು, ಪ್ರಕಾಶ್, ಜಯಚಂದ್ರ, ಮುಖ್ಯೋಪಾಧ್ಯಾಯ ವಿಜಯಕುಮಾರ್ ಹಾಗೂ ಇತರರು ಉಪಸ್ಥಿತರಿದ್ದರು

# ಕಿಡ್ಸ್ ಪ್ಲಾನೆಟ್ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ



**ಮಂಡ್ಯ:** ನೂರಾರು ಗಿಡಗಳನ್ನು ಮಕ್ಕಳಂತೆ ಸಾಕಿ ಬೆಳೆಸಿದ ಪರಿಸರ ಪ್ರೇಮಿ ಸಾಲುಮರದ ತಿಮ್ಮಕ್ಕ ಎಲ್ಲರಿಗೂ ಆದರ್ಶವಾಗಿದ್ದಾರೆ ಎಂದು ಕಿಡ್ಸ್ ಪ್ಲಾನೆಟ್ ಶಾಲೆಯ ಮುಖ್ಯ ಶಿಕ್ಷಕಿ ಕವಿತಾ ಹೇಳಿದರು.

ನಗರದ ಹಾಲಹಳ್ಳಿಯ ಕಿಡ್ಸ್ ಪ್ಲಾನೆಟ್ ಶಾಲೆಯಲ್ಲಿ ಹೊಂಬಾಳೆ ಎಜುಕೇಷನ್ ಟ್ರಸ್ಟ್ ವತಿಯಿಂದ ವಿಶ್ವ ಪರಿಸರ ದಿನದ ಅಂಗವಾಗಿ ಆಯೋಜಿಸಿದ್ದ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸಾಲುಮರದ ತಿಮ್ಮಕ್ಕ ಅವರು ಪ್ರಕೃತಿಯನ್ನು ಅಪಾರವಾಗಿ ಪ್ರೀತಿಸುತ್ತಿದ್ದರು.

ಅದರ ಫಲವಾಗಿ ಸಾವಿರಾರು ಸಸಿಗಳನ್ನು ನೆಟ್ಟು ಪೋಷಣೆ ಮಾಡಿದರು. ಅವರು ನೆಟ್ಟ ಗಿಡಗಳು ಇಂದು ಬೃಹದಾಕಾರದ ಮರಗಳಾಗಿ ಬೆಳೆದು ಸಮಾಜಕ್ಕೆ ಶುದ್ಧ ಆಮ್ಲಜನಕ ಮತ್ತು ನೆರಳು ನೀಡುತ್ತಿರುವುದು ಅವರ ಪರಿಸರ ಪ್ರೇಮಕ್ಕೆ ಸಾಕ್ಷಿಯಾಗಿದೆ ಎಂದು ಹೇಳಿದರು.

ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದ್ದು, ಮಕ್ಕಳು ಬಾಲ್ಯದಿಂದಲೇ ಗಿಡಮರಗಳ ಬಗ್ಗೆ ಪ್ರೀತಿ ಬೆಳೆಸಿಕೊಳ್ಳಬೇಕು. ಪ್ರತಿಯೊಬ್ಬರೂ ಕನಿಷ್ಠ ಒಂದು ಗಿಡವನ್ನು ನೆಟ್ಟು ಪೋಷಿಸುವ ಸಂಕಲ್ಪ ಮಾಡಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಶಿಕ್ಷಕಿಯರಾದ ಲಾವಣ್ಯ, ರಂಜಿತಾ ಹಾಗೂ ಸಿಬ್ಬಂದಿಗಳಾದ ಸೌಮ್ಯಾ, ರಮ್ಯಾ ಸೇರಿದಂತೆ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿ ಸಸಿ ನೆಟ್ಟು ಪರಿಸರ ಸಂರಕ್ಷಣೆಯ ಸಂದೇಶ ಸಾರಿದರು.

# ವಿಶ್ವ ಪರಿಸರ ದಿನಾಚರಣೆ



**ಕೆ.ಆರ್.ನಗರ:** ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ತಾಲೂಕಿನ ಗಂಧನಹಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಸಸಿಗಳನ್ನು ನೆಡುವ ಮೂಲಕ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ಮಾಡಲಾಯಿತು.

ಯೋಜನೆಯ ನಿರ್ದೇಶಕಿ ಮಮತರಾವ್ ಅವರು ಮಾತನಾಡಿ ಇಂದಿನ ಮಕ್ಕಳು ಪರಿಸರದ ಬಗ್ಗೆ ಹೆಚ್ಚು ಕಾಳಜಿಯನ್ನು ವಹಿಸಬೇಕು ಹಾಗೆ ಗಾಳಿ, ನೀರು, ಭೂಮಿ ಇವುಗಳ ಶುದ್ಧತೆಯನ್ನು ಕಾಪಾಡಬೇಕು. ಇವುಗಳ ಶುದ್ಧತೆ ಇಲ್ಲದಿದ್ದರೆ ನಾವುಗಳೆಲ್ಲ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತೇವೆ ಹಾಗೆ ಮಣ್ಣು ಫಲವತ್ತತೆಯಿಂದ ಇದ್ದರೆ ನಮ್ಮ ಆರೋಗ್ಯವೂ ಕೂಡ ಚೆನ್ನಾಗಿರುತ್ತೆ ಇದನ್ನು ಹಾಳು ಮಾಡದೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮದಾಗಿರುತ್ತದೆ ಎಂದರು.

ನಗರಗಳಲ್ಲಿ ಉತ್ತಮ ಗಾಳಿಯ ಕೊರತೆಯಿಂದ ತುಂಬಾ ಜನ ಕಷ್ಟಕರ ಜೀವನವನ್ನು ನಡೆಸುತ್ತಿದ್ದಾರೆ ಹಾಗೆ ನಾವು ಕೂಡ ಪರಿಸರವನ್ನು ಹಾಳುಮಾಡಿದಲ್ಲಿ ಮುಂದೆ ನಮಗೂ ಕೂಡ ಕಷ್ಟವಾಗಬಹುದು ಹಾಗೆ ನಮ್ಮ ಜೀವನ ಶೈಲಿಯನ್ನು ಕೂಡ ಬದಲಾವಣೆ ಮಾಡಿಕೊಂಡು ನಮ್ಮ ಜೀವನವನ್ನು ನಡೆಸ ಬೇಕಾಗಿರುತ್ತದೆ ಎಂದರು.

ಕೃಷಿ ಚಟುವಟಿಕೆಯನ್ನು ಸಾವಯವ ಪದ್ಧತಿಯಲ್ಲಿ ಮಾಡಿದರೆ ನಮಗೆ ತುಂಬಾ ಒಳಿತು ಮತ್ತು ಭೂಮಿಗೂ ಕೂಡ ಒಳಿತಾಗುತ್ತದೆ. ರಾಸಾಯನಿಕ ಗೊಬ್ಬರಗಳನ್ನ ಬಳಕೆ ಮಾಡುವುದು ಕಡಿಮೆ ಮಾಡುವುದರಿಂದ ಭೂಮಿಗೆ ಒಳ್ಳೆಯದು ಎಂದರು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಹಲವು ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಕೆರೆ ಹೂಳೆತ್ತುವುದು, ಜ್ಞಾನದೀಪ ಶಿಕ್ಷಕರನ್ನ ಶಾಲೆಗಳಿಗೆ ಒದಗಿಸುವುದು, ಶಾಲೆಗಳಿಗೆ ಬೆಂಚ್, ಡೆಸ್ಕ್ ನ ವ್ಯವಸ್ಥೆ, ರುದ್ರಭೂಮಿಗಳ ಪುನರುಜ್ಜೀವನ ಹೀಗೆ ಹತ್ತು ಹಲವು ಕಾರ್ಯಕ್ರಮಗಳನ್ನ ನಡೆಸಿಕೊಂಡು ಬರುತ್ತಿದ್ದು ಇದರ ಸದುಪಯೋಗವನ್ನು ಸಾರ್ವಜನಿಕರು ಪಡೆದುಕೊಳ್ಳಬೇಕೆಂದರು.

ಕಾರ್ಯಕ್ರಮದಲ್ಲಿ ತಾಲೂಕು ಯೋಜನಾಧಿಕಾರಿ ಉಮೇಶ್ ಪೂಜಾರಿ, ಮುಖ್ಯೋಪಾಧ್ಯಾಯ ದಿವಾಕರ್, ಸಹ ಶಿಕ್ಷಕರಾದ ಸುಬ್ಬರಾಮನ್, ಕಾವ್ಯ, ಬಸವೇಗೌಡ. ಸ್ವಾತಿ, ರಾಮೇಗೌಡ, ಕಾವ್ಯ, ಲೋಕೇಶ್ ಮತ್ತು ಮೇಲ್ವಿಚಾರಕಿ ಸಂಗೀತ, ಸೇವಾ ಪ್ರತಿನಿಧಿ ಲಕ್ಷ್ಮಿ, ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಅಣಬೆ ಬೇಸಾಯ ಉಚಿತ ತರಬೇತಿಗಾಗಿ ಅರ್ಜಿ ಆಹ್ವಾನ

**ರಾಮನಗರ:** ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಟ್ರಸ್ಟ್ ಮತ್ತು ಕೆನರಾ ಬ್ಯಾಂಕ್‌ನ ಸಹಯೋಗದಲ್ಲಿ ನಡೆಸುತ್ತಿರುವ ರುಡ್‌ಸೆಟ್ ಸಂಸ್ಥೆಯ ವತಿಯಿಂದ ಅಣಬೆ ಬೇಸಾಯ ಕುರಿತ 10 ದಿನಗಳ ಉಚಿತ ತರಬೇತಿಯನ್ನು 2026 ಜೂನ್ 23 ರಿಂದ ಹಮ್ಮಿಕೊಳ್ಳಲಾಗಿದ್ದು, ಗ್ರಾಮೀಣ ಆಸಕ್ತ ನಿರುದ್ಯೋಗಿ ಯುವಕ–ಯುವತಿಯರಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು 18 ರಿಂದ 50 ವರ್ಷ ವಯೋಮಾನದವರಾಗಿದ್ದು, ಕನ್ನಡ ಭಾಷೆ ಓದಲು ಮತ್ತು ಬರೆಯಲು ಬಲ್ಲವರಾಗಿರಬೇಕು. ಬಿಪಿಎಲ್ ಕಾರ್ಡ್ ಅಥವಾ ಜಾಬ್ ಕಾರ್ಡ್ ಹಾಗೂ ಆಧಾರ್ ಕಾರ್ಡ್ನ್ನು ಕಡ್ಡಾಯವಾಗಿ ಹೊಂದಿರಬೇಕು. ಆಸಕ್ತರು ತಮ್ಮ ಹೆಸರನ್ನು ನೋಂದಾಯಿಸಲು ಜೂ. 20 ಕೊನೆಯ ದಿನವಾಗಿದೆ.

ತರಬೇತಿಯು ಕಡ್ಡಾಯವಾಗಿ ವಸತಿಯುತವಾಗಿದ್ದು, ತರಬೇತಿಯ ಅವಧಿಯಲ್ಲಿ ಉಚಿತವಾಗಿ ಊಟ ಮತ್ತು ವಸತಿ ನೀಡಲಾಗುವುದು ಹಾಗೂ ತರಬೇತಿ ಪೂರ್ಣಗೊಂಡ ನಂತರ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯದಿಂದ ಪ್ರಮಾಣಪತ್ರವನ್ನು ವಿತರಿಸಲಾಗುವುದು. ಆಸಕ್ತರು ಅರ್ಜಿ ಸಲ್ಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ರುಡ್‌ಸೆಟ್ ಸಂಸ್ಥೆ, ಅರಿಶಿನಕುಂಟೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಮೊಬೈಲ್ ಸಂಖ್ಯೆ: 9380162042, 9481506564, 9481778047 ಅನ್ನು ಸಂಪರ್ಕಿಸಬಹುದಾಗಿದೆ ಎಂದು ರುಡ್‌ಸೆಟ್ ಸಂಸ್ಥೆಯ ಬೆಂಗಳೂರು ಶಾಖೆಯ ನಿರ್ದೇಶಕ ರವಿಕುಮಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅತಿಥಿ ಉಪನ್ಯಾಸಕರಿಗೆ ಪರ್ಯಾಯ ಹುದ್ದೆ: ಸರ್ಕಾರದ ನಿರ್ಧಾರಕ್ಕೆ ಸ್ವಾಗತ



**ಮಂಡ್ಯ:** ನಾನ್ ಯುಜಿಸಿಯ 1500 ಅತಿಥಿ ಉಪನ್ಯಾಸಕರುಗಳಿಗೆ ಪರ್ಯಾಯವಾಗಿ ಶೈಕ್ಷಣಿಕ ಸಂಯೋಕರ ಹುದ್ದೆ ನೀಡುವ ನಿರ್ಣಯದ ಹೆಜ್ಜೆಯಿಟ್ಟ ನಿಕಟ ಪೂರ್ವ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಸರಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ರಾಜ್ಯ ಸಮನ್ವಯ ಸಮಿತಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ.ಎಸ್.ನಾಗರಾಜು ಧನ್ಯವಾದ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯುಜಿಸಿ ಮಾನದಂಡ ಅನುಸರಿಸಿ ಅತಿಥಿ ಉಪನ್ಯಾಸಕರ ಆಯ್ಕೆ ನಡೆಸುವಂತೆ ನ್ಯಾಯಾಲಯದ ತೀರ್ಪು ಬಂದ ನಂತರ ದಶಕಗಳ ಕಾಲ ಸೇವೆ ಸಲ್ಲಿಸಿದ ಸಾವಿರಾರು ಅತಿಥಿ ಉಪನ್ಯಾಸಕರು ಕೆಲಸ ಕಳೆದುಕೊಳ್ಳುವಂತಾಗಿತ್ತು. ಈ ಸಂಬಂಧ ರಾಜ್ಯದ ವಿವಿಧೆಡೆ ಹೋರಾಟ ನಡೆಸಲಾಗಿತ್ತು ಎಂದರು.

ಶಾಸಕರ ಸಮ್ಮೇಳನದಲ್ಲಿ ಪದವೀಧರರ ಕ್ಷೇತ್ರದ ವಿಧಾನ ಪರಿಷತ್ ಸದಸ್ಯರ ನೇತೃತ್ವದಲ್ಲಿ ರಾಜ್ಯ ಮಟ್ಟದ ಸಮಾಲೋಚನೆ ನಡೆಸಿ ಬೇಡಿಕೆಗಳನ್ನು ಈಡೇರಿಸುವಂತೆ ಸರಕಾರಕ್ಕೆ ಒತ್ತಡ ಹಾಕಲಾಗಿತ್ತು. ಎಲ್ಲ ಪ್ರಯತ್ನಗಳ ಫಲವಾಗಿ ನಾನ್ ಯುಜಿಸಿ ಅತಿಥಿ ಉಪನ್ಯಾಸಕರ ಸೇವಾ ಜೇಷ್ಠತೆಯ ಮಾನದಂಡ ಅನುಸರಿಸಿ ಸೇವೆಯಲ್ಲಿ ಬಳಸಿಕೊಳ್ಳಲು ಗೌರವಧನ ನಿಗದಿಪಡಿಸಿ ಆರ್ಥಿಕ ಅನುಮೋದನೆ ನೀಡಿ ಪ್ರಸಕ್ತ ಸಾಲಿನಿಂದ ಅನ್ವಯವಾಗುವಂತೆ ತೀರ್ಮಾನದ ಹೆಜ್ಜೆ ಇಡಲಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಹಾಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ದಶಕಗಳ ಸೇವೆ ಸಲ್ಲಿಸುತ್ತಾ ಬಂದ ಅತಿಥಿ ಉಪನ್ಯಾಸಕರುಗಳ ಸೇವೆ ಗಮನದಲ್ಲಿಟ್ಟು ಉದ್ಯೋಗ ಭದ್ರತೆ, 7ನೇ ವೇತನ ಆಯೋಗದ ಶಿಫಾರಸ್ಸಿನ ಅನ್ವಯ ಗೌರವಧನ ಹೆಚ್ಚಳ, ನಿವೃತ್ತಿ ನಂತರ ನೀಡುವ ಇಡಿ ಗಂಟನ್ನು ಸೇವಾ ವರ್ಷ ಆಧಾರದಲ್ಲಿ ಕನಿಷ್ಠ 25 ಲಕ್ಷ ನೀಡುವ ನಿರ್ಧಾರ ಕೈಗೊಂಡು ಅತಿಥಿ ಉಪನ್ಯಾಸಕರ ಬಹುಮುಖ್ಯ ಬೇಡಿಕೆಯಾದ ಸೇವಾ ಸಕ್ರಮಾತಿ ಮಾಡುವ ಮೂಲಕ ಇತಿಹಾಸ ನಿರ್ಮಿಸಬೇಕು ಎಂದು ಮನವಿ ಮಾಡಿದರು.

ಗೋಷ್ಠಿಯಲ್ಲಿ ರಾಜ್ಯ ಸಂಚಾಲಕ ಮಹೇಶ್, ಮಹಿಳಾ ಕಾರ್ಯದರ್ಶಿ ಎಸ್. ಹರ್ಷಿತ, ಜಿಲ್ಲಾ ಉಪಾಧ್ಯಕ್ಷ ಟಿ.ಜೆ.ದಿಲೀಪ್, ಜಿಲ್ಲಾಕಾರ್ಯದರ್ಶಿ ಡಾ.ರಂಜನ್ ಸತ್ಯದಾಸ್, ರಾಷ್ಟ್ರೀಯ ಹೋರಾಟ ಸಮಿತಿ ಅಧ್ಯಕ್ಷ ಎಂ.ಲಿಂಗರಾಜು ಇದ್ದರು.

## ಸಮಾನ ಶಿಕ್ಷಣ ಜಾರಿಗೆ ಆಗ್ರಹಿಸಿ ಜೂನ್ 6ರಂದು ಮೆರವಣಿಗೆ



**ಮಂಡ್ಯ:** ರಾಜ್ಯದಲ್ಲಿ ಏಕರೂಪ ಸಮಾನ ಶಿಕ್ಷಣ ಜಾರಿ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಜೂ.6ರಂದು ಇಂಡುವಾಳು ಪಂಚಾಯಿತಿ ಆವರಣದಿಂದ ಜೆ.ಸಿ ವೃತ್ತದವರೆಗೆ ಪಂಜಿನ ಮೆರವಣಿಗೆ ಮಾಡಲಾಗುವುದು ಎಂದು ಜಿಲ್ಲಾ ರೈತ ಸಂಘದ ಜಿಲ್ಲಾಧ್ಯಕ್ಷ ಇಂಡುವಾಳು ಚಂದ್ರಶೇಖರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ಎಸ್‌ಡಿಎಂಸಿ ಸಂಘದ ಸಹಕಾರದೊಂದಿಗೆ ರಾಜ್ಯಾದ್ಯಂತ ಏಕರೂಪ ಸಮಾನ ಜಾರಿಗೆ ಆಗ್ರಹಿಸಿ ಜಿಲ್ಲೆಯಲ್ಲಿ ಏ.11ರಿಂದ ಜೂ.4ರವರೆಗೆ 55 ದಿನಗಳ ಕಾಲ 1295 ಕಿ.ಮೀಗೂ ಹೆಚ್ಚು ಪಾದಯಾತ್ರೆ ನಡೆಸಲಾಗಿದೆ ಎಂದರು.

ಪಾದಯಾತ್ರೆಯಲ್ಲಿ 233 ಪಂಚಾಯಿತಿಗಳ ಮೂಲಕ ಸಾವಿರಕ್ಕೂ ಹೆಚ್ಚು ಹಳ್ಳಿಗಳನ್ನು ತಲುಪಿ ಜಾಗೃತಿ ಮೂಡಿಸಲಾಗಿದೆ. ಈಗ ರಾಜ್ಯದ ಪ್ರತಿಯೊಂದು ಸರಕಾರಿ ಶಾಲೆಯಲ್ಲೂ 2 ಅಂತಸ್ತಿನ ಸುಸಜ್ಜಿತ ಕಟ್ಟಡ, ದ್ವಿಭಾಷೆಯಲ್ಲಿ ಆಂಗ್ಲ ಮಾಧ್ಯಮ ಶಿಕ್ಷಣ, ವಿಷಯವಾರು ಶಿಕ್ಷಕರ ನೇಮಕ ಹಾಗೂ ಶಿಕ್ಷಕರನ್ನು ಬೋಧಕೇತರ ಕೆಲಸಗಳಿಗೆ ಬಳಸುವುಕ್ಕೆ ನಿರ್ಬಂಧ, ಜತೆಗೆ ಜನಪ್ರತನಿಧಿಗಳು ಹಾಗೂ ಸರಕಾರಿ ನೌಕರರ ಮಕ್ಕಳು ಸರಕಾರಿ ಶಾಲೆಗಳಲ್ಲೇ ಓದಬೇಕು ಎಂಬ ನಿಯಮ ಜಾರಿಗೆ ಆಗ್ರಹಿಸಿ ಪಂಜಿನ ಮೆರವಣಿಗೆ ನಡೆಯಲಿದೆ ಎಂದು ಹೇಳಿದರು.

ಮೆರವಣಿಗೆಯಲ್ಲಿ 3000ಕ್ಕೂ ಹೆಚ್ಚು ಮಂದಿ ಸರಕಾರಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡಿದ ಹಿರಿಯ ವಿದ್ಯಾರ್ಥಿಗಳು, ಎಸ್‌ಡಿಎಂಸಿ ಸದಸ್ಯರು, ಪೋಷಕರು ಹಾಗೂ ಶಿಕ್ಷಕ ಪ್ರೇಮಿಗಳು ಭಾಗವಹಿಸಲಿದ್ದಾರೆ. ಪೊಲೀಸ್ ಇಲಾಖೆಯಿಂದ ಸೂಕ್ತ ರಕ್ಷಣೆ ಒದಗಿಸುವಂತೆ ಮನವಿ ಮಾಡಿದರು.

ಸಂಘದ ಸಂಚಾಲಕ ಪ್ರೊ.ಸಂತೋಷ್ ಮಂಡ್ಯಗೌಡ ಮಾತನಾಡಿ, ಪಾದಯಾತ್ರೆಯಲ್ಲಿ ಹಲವು ಶಾಲೆಗಳು ಶಿಥಿಲಾವಸ್ಥೆಯಲ್ಲಿವೆ. ಹಾವು, ಚೇಳು, ನಗ್ಗುವಂತಾಗಿದ್ದು, ಅವುಗಳಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಬೇಕಾಗಿದೆ. ಸರಕಾರದಿಂದ ಪಾದಯಾತ್ರೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ದ್ವಿಭಾಷ ನೀತಿಯಲ್ಲಿ ಬೋಧನೆಯನ್ನು 15 ಜಿಲ್ಲೆಗಳ ಎಲ್ಲ ಸರಕಾರಿ ಶಾಲೆಗಳಲ್ಲಿ ಜಾರಿ ಮಾಡಿದೆ ಎಂದು ಹೇಳಿದರು.

ಅಲ್ಲದೇ ರಾಜ್ಯದ ಎಲ್ಲ ಸರಕಾರಿ ಶಾಲೆಗಳಲ್ಲಿ ವಸ್ತುಸ್ಥಿತಿ ಪರಿಶೀಲನೆ ನಡೆಸಿ ವರದಿ ನೀಸಲು ಸಕಾರದ ಪ್ರಧಾನ ಕಾರ್ಯದರ್ಶಿ ರಶ್ಮಿಮಹೇಶ್ ಆದೇಶ ನೀಡುರುವದಾಗಿ ಹರ್ಷ ವ್ಯಕ್ತಪಡಿಸಿದರು.

ಗೋಷ್ಠಿಯಲ್ಲಿ ಉಪಾಧ್ಯಕ್ಷ ಶಿವಳ್ಳಿ ಚಂದ್ರಶೇಖರ್, ಸಾರಥಿ ಕೃಷ್ಣೇಗೌಡ, ತೇಜಸ್‌ಗೌಡ, ಹುಬ್ಬಳ್ಳಿಯ ರವಿಚಂದ್ರ, ಹಾವೇರಿಯ ಮಲ್ಲಣ್ಣಗೌಡ, ಧನುಷ್ ಗೌಡ ಇದ್ದರು.

# ಗಿಡ ನೆಡುವುದು–ಪೋಷಿಸುವುದು ನಮ್ಮೆಲ್ಲರ ಕರ್ತವ್ಯ: ಸುಬ್ರಮಣ್ಯ ಜೆ.ಎನ್



**ಮಂಡ್ಯ:** ಗಿಡಗಳನ್ನು ನೆಡುವುದು ಎಷ್ಟು ಮುಖ್ಯವೋ, ಅವುಗಳನ್ನು ಪಾಲನೆ–ಪೋಷಣೆ ಮಾಡಿ ಬೆಳೆಸುವುದೂ ಅಷ್ಟೇ ಮುಖ್ಯವಾಗಿದೆ. ಗಿಡ–ಮರಗಳು ಭೂಮಿಯ ರಕ್ಷಾಕವಚವಾಗಿದ್ದು, ಪರಿಸರ ಸಮತೋಲನ ಕಾಪಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಸುಬ್ರಮಣ್ಯ ಜೆ.ಎನ್. ಹೇಳಿದರು.

ಜಿಲ್ಲಾ ನ್ಯಾಯಾಂಗ, ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಕೀಲರ ಸಂಘ ಹಾಗೂ ಅರಣ್ಯ ಇಲಾಖೆ ಸಂಯುಕ್ತ ಆಶ್ರಯದಲ್ಲಿ ವಿಶ್ವ ಪರಿಸರ ದಿನ–2026 ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮವನ್ನು ಗಿಡ ನೆಡುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಗಿಡಗಳು ಮಾನವನಿಗೆ ಆಮ್ಲಜನಕ, ಶುದ್ಧ ಗಾಳಿ ಮತ್ತು ಉತ್ತಮ ಮಳೆಯನ್ನು ನೀಡುತ್ತವೆ. ಕೇವಲ ಸಸಿಗಳನ್ನು ನೆಡುವುದಷ್ಟೇ ಅಲ್ಲದೆ, ಅವು ಮರಗಳಾಗಿ ಬೆಳೆಯುವವರೆಗೆ ಕಾಳಜಿ ವಹಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು. ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡಿ, ಮಕ್ಕಳಲ್ಲಿ ಪರಿಸರ ಮತ್ತು ಪ್ರಕೃತಿಯ ಬಗ್ಗೆ ಪ್ರೀತಿ ಹಾಗೂ ಕಾಳಜಿಯ ಬೀಜ ಬಿತ್ತಬೇಕಿದೆ. ಮುಂದಿನ ಪೀಳಿಗೆಗೆ ಉತ್ತಮ ಪರಿಸರವನ್ನು ಉಳಿಸಿಕೊಡುವುದು ನಮ್ಮೆಲ್ಲರ ಹೊಣೆಗಾರಿಕೆಯಾಗಿದೆ ಎಂದು ಹೇಳಿದರು. ಮನೆ ಹಾಗೂ ಶಾಲೆಗಳಲ್ಲಿ ಮಕ್ಕಳಿಗೆ ಪರಿಸರ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸುವುದು ಅತ್ಯಗತ್ಯ. ಬಾಲ್ಯದಿಂದಲೇ ನೈಸರ್ಗಿಕ ಪರಿಸರದ ಬಗ್ಗೆ ಅಭಿಮಾನ ಬೆಳೆಸುವ ಕಾರ್ಯ ನಡೆಯಬೇಕು ಎಂದು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶೋಭಾ ರಾಣಿ ವಿ.ಜೆ. ಮಾತನಾಡಿ, ಪರಿಸರ ಸಂರಕ್ಷಣೆ ಒಂದು ದಿನದ ಕಾರ್ಯಕ್ರಮವಾಗಿರದೆ ಪ್ರತಿದಿನದ ಕರ್ತವ್ಯವಾಗಬೇಕು. ಮಕ್ಕಳಲ್ಲಿ ಶಾಶ್ವತವಾಗಿ ಪರಿಸರದ ಅರಿವು ಮೂಡಿಸುವ ಜೊತೆಗೆ ಪ್ಲಾಸ್ಟಿಕ್ ಬಳಕೆಯನ್ನು ನಿಯಂತ್ರಿಸುವತ್ತ ಹೆಚ್ಚಿನ ಗಮನ ಹರಿಸಬೇಕಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿ ಆನಂದ್ ಎಂ., ಅಪರ ಜಿಲ್ಲಾ ನ್ಯಾಯಾಧೀಶೆ ಮಂಜುಳಾ, ಪ್ರಾದೇಶಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ರಘು ಡಿ., ಸಾಮಾಜಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸುಮಂತ್, ವಕೀಲರ ಸಂಘದ ಅಧ್ಯಕ್ಷ ಸತ್ಯಾನಂದ ಟಿ.ಎಸ್., ಪ್ರಧಾನ ಕಾರ್ಯದರ್ಶಿ ಸತೀಶ್ ಬಿ. ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಅರ್ಜಿ ಆಹ್ವಾನ

**ರಾಮನಗರ:** 2026–27ನೇ ಸಾಲಿನಲ್ಲಿ ರಾಮನಗರ ತಾಲ್ಲೂಕಿನ ತೋಟಗಾರಿಕೆ ಇಲಾಖೆ ವತಿಯಿಂದ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಹೊಸ ಪ್ರದೇಶ ವಿಸ್ತರಣೆ, ಕಳೆ ನಿಯಂತ್ರಣ ಮ್ಯಾಟ್ (ವೀಡ್ ಮ್ಯಾಟ್), ಪ್ಲಾಸ್ಟಿಕ್ ಹೊದಿಕೆ, ಲಘು ಪೋಷಕಾಂಶಗಳ ಖರೀದಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಶೇ. 25 ರಿಂದ 50 ರಷ್ಟು ಸಹಾಯಧನ ನೀಡಲಾಗುವುದು. ಈ ಸೌಲಭ್ಯಗಳನ್ನು ಪಡೆಯಲು ಅರ್ಹ ಸಾಮಾನ್ಯ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ರೈತರು ಜೂ. 15ರೊಳಗೆ ಅರ್ಜಿ ಸಲ್ಲಿಸಬೇಕು. ಅರ್ಜಿಯೊಂದಿಗೆ ಪಹಣಿ, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್‌ಬುಕ್, ಜೆರಾಕ್ಸ್ ಪ್ರತಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ವರ್ಗದವರಾಗಿದ್ದರೆ ಜಾತಿ ಪ್ರಮಾಣ ಪತ್ರ ಹಾಗೂ ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಬೇಕು.

ಹೆಚ್ಚಿನ ಮಾಹಿತಿಗೆ ಹೋಬಳಿಯ ಸಹಾಯಕ ತೋಟಗಾರಿಕೆ ಅಧಿಕಾರಿಗಳನ್ನು ಅಥವಾ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸುವಂತೆ ರಾಮನಗರದ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# "ಅನುಭವವೇ ನಿಜವಾದ ಗುರು"




ಡಾ.ಸುಧಾಕರ.ಜಿ.ಲಕ್ಕವಳ್ಳಿ

ಸ್ಫೂರ್ತಿ ಸುಧೆ - 37

ಶಾಲೆಯ ನಾಲ್ಕು ಗೋಡೆಗಳೊಳಗೆ ನಾವು ಅಂಕಗಳನ್ನು ಗಳಿಸುತ್ತೇವೆ. ಆದರೆ ಬದುಕಿನ ವಿಶಾಲ ಪಾಠಶಾಲೆಯಲ್ಲಿ ನಮ್ಮನ್ನು ರೂಪಿಸುವುದು ಅನುಭವ. ಪುಸ್ತಕದ ಜ್ಞಾನವು ದಾರಿ ತೋರಿಸಬಹುದು, ಆದರೆ ಆ ದಾರಿಯಲ್ಲಿ ನಡೆಯುವ ಧೈರ್ಯ, ಸ್ಥೈರ್ಯ ಮತ್ತು ಸೃಜನಶೀಲತೆಯನ್ನು ನೀಡುವುದು ಬದುಕಿನ ಅನುಭವವೇ.ಈ ಸತ್ಯವನ್ನು ಜೀವಂತವಾಗಿ ತೋರಿಸುವ ಉದಾಹರಣೆ ವಿಜ್ಞಾನಿ ಜೇಮ್ಸ್ ಡೆವರ್ ಅವರ ಜೀವನ. ಅವರು ಶೂನ್ಯ ತಾಪದ ಪಾತ್ರೆ (ವ್ಯಾಕ್ಯೂಮ್ ಫ್ಲಾಸ್ಕ್) ಎಂಬ ಕ್ರಾಂತಿಕಾರಿ ಆವಿಷ್ಕಾರದ ಮೂಲಕ ವಿಜ್ಞಾನ ಲೋಕಕ್ಕೆ ಅಳಿಸಲಾಗದ ಕೊಡುಗೆ ನೀಡಿದರು. ಇಂದು ನಾವು ಬಳಸುವ ಥರ್ಮೋಸ್ ಬಾಟಲಿಯ ಮೂಲವೂ ಅವರ ಈ ಸಂಶೋಧನೆಯೇ.

ಡೆವರ್ ಅವರ ಯಶಸ್ಸಿನ ಹಿಂದೆ ಅನೇಕ ಪ್ರಯೋಗಗಳು, ತಪ್ಪುಗಳು ಮತ್ತು ಮರುಪ್ರಯತ್ನಗಳ ಕಥೆಯಿದೆ. ಅವರು ಎದುರಿಸಿದ ಪ್ರತಿಯೊಂದು ವಿಫಲತೆಯೂ ಅವರನ್ನು ಕುಗ್ಗಿಸಲಿಲ್ಲ; ಬದಲಿಗೆ ಮತ್ತಷ್ಟು ಆಳವಾಗಿ ಯೋಚಿಸಲು ಪ್ರೇರೇಪಿಸಿತು. ಹೀಗೆ ಅನುಭವವೇ ಅವರ ನಿಜವಾದ ಗುರುವಾಗಿ ರೂಪುಗೊಂಡಿತು.ಅವರ ಜೀವನ ನಮಗೆ ಮತ್ತೊಂದು ಮಹತ್ವದ ಪಾಠ ನೀಡುತ್ತದೆ ಯಶಸ್ಸು ಕೇವಲ ಹೆಸರು, ಹಣ ಅಥವಾ ಪೇಟೆಂಟ್‌ನಲ್ಲಲ್ಲ; ಅದು ಸಮಾಜಕ್ಕೆ ನೀಡುವ ಕೊಡುಗೆಯಲ್ಲಿ ಇದೆ. ಅವರ ಆವಿಷ್ಕಾರವು ವಿಜ್ಞಾನ ಕ್ಷೇತ್ರದಲ್ಲಿ ಹೊಸ ದಿಕ್ಕು ತೆರೆದಿತು ಮತ್ತು ಮಾನವ ಜೀವನವನ್ನು ಸುಲಭಗೊಳಿಸಿತು.

ಇಂದಿನ ಯುವಪೀಳಿಗೆಗೆ ಈ ಕಥೆ ಒಂದು ಶಕ್ತಿಯ ಸಂದೇಶ ನೀಡುತ್ತದೆ. ಶಾಲೆಯ ಅಂಕಗಳು ಮುಖ್ಯವಾದರೂ, ಬದುಕಿನ ನಿಜವಾದ ಪರೀಕ್ಷೆಯಲ್ಲಿ ಧೈರ್ಯ, ಪರಿಶ್ರಮ ಮತ್ತು ಅನುಭವವೇ ನಮ್ಮನ್ನು ಗೆಲ್ಲಿಸುತ್ತವೆ. ತಪ್ಪುಗಳನ್ನು ಭಯಪಡದೆ ಕಲಿಯುವ ಮನೋಭಾವವೇ ಯಶಸ್ಸಿನ ಬಾಗಿಲು ತೆರೆದಿಡುತ್ತದೆ.ಡೆವರ್ ಅವರ ಜೀವನ ನಮಗೆ ಸ್ಫೂರ್ತಿ ನೀಡುವುದು ಒಂದೇ ಸತ್ಯವನ್ನು ಅನುಭವವೇ ನಿಜವಾದ ಗುರು, ಮತ್ತು ಬದುಕೇ ಅತ್ಯಂತ ದೊಡ್ಡ ಸಾಧನೆಯ ಪಾಠಶಾಲೆ.



# ಅಕ್ಕಿ ತೊಳೆದ ನೀರು: ರೇಷ್ಮೆಯಂತಹ ಕೇಶರಾಶಿಗೆ ಪ್ರಕೃತಿಯ ವರ ಪ್ರಸಾದ!



ಉದ್ದವಾದ, ಹೊಳೆಯುವ ಮತ್ತುಆರೋಗ್ಯಕರವಾದ ಕೂದಲನ್ನು ಪಡೆಯುವಆಸೆಯಲ್ಲಿ ಇಂದಿನ ಸೌಂದರ್ಯಜಗತ್ತು ಹೆಚ್ಚಾಗಿ ರಾಸಾಯನಿಕಯುಕ್ತ ಉತ್ಪನ್ನಗಳ ಕಡೆಗೆ ಮುಖ ಮಾಡುತ್ತದೆ. ಆದರೆ, ಅತ್ಯಂತ ಶಕ್ತಿಶಾಲಿ ಮತ್ತು ಸಂಪೂರ್ಣಉಚಿತವಾಗಿ ಸಿಗುವ ಕೇಶ ಸಂಜೀವಿನಿ ನಿಮ್ಮಅಡುಗೆಮನೆಯಲ್ಲೇಅಡಗಿದೆ; ಅದೇ ಅಕ್ಕಿ ತೊಳೆದ ನೀರು (ರೈಸ್ ವಾಟರ್).ಅಕ್ಕಿಯನ್ನು ತೊಳೆಯುವಾಗ ಅಥವಾ ಬೇಯಿಸುವಾಗ ಸಿಗುವ ಈ ಗಂಜಿ ನೀರಿನ ಬಳಕೆ ಇಂದಿನ ಹೊಸ ಟ್ರೆಂಡ್‌ಏನಲ್ಲ. ಇದರಇತಿಹಾಸಜಪಾನ್‌ನ ಹೀಯಾನ್‌ಅವಧಿಗೆ (ಕ್ರಿ.ಶ: 794 – 1185 ರ ನಡುವೆ) ಕೊಂಡೊಯ್ಯುತ್ತದೆ. ಅಲ್ಲಿನರಾಜಮನೆತನದ ಮಹಿಳೆಯರು ನೆಲ ಮುಟ್ಟುವಷ್ಟುಉದ್ದನೆಯ ಕೇಶರಾಶಿಯನ್ನು ಹೊಂದಲು ಈ ಹುದುಗಿಸಿದ ಅಕ್ಕಿ ನೀರನ್ನು (ಯು–ಸು) ಬಳಸುತ್ತಿದ್ದರು. ಅದೇರೀತಿ, ಚೀನಾದ ಹುವಾಂಗ್ಲುವೋಗ್ರಾಮದ 'ಯಾವೋ'ಬುಡಕಟ್ಟು ಮಹಿಳೆಯರು ತಮ್ಮಅಸಾಧಾರಣವಾದಉದ್ದ, ಹೊಳಪು ಮತ್ತು ವಯಸ್ಸಾದರೂ ನರೆಯದ ಕೂದಲಿನ ರಹಸ್ಯದಿಂದಾಗಿಯೇಗಿನ್ನೆಸ್ ಬುಕ್‌ಆಫ್ ವರ್ಲ್ಡ್‌ರೆಕಾರ್ಡ್ಸ್‌ನಲ್ಲಿ ಸ್ಥಾನ ಪಡೆದಿದ್ದಾರೆ. ಅವರ ಈ ಸೌಂದರ್ಯಕ್ಕೆಕಾರಣ ಕೇವಲ ಈ ನೈಸರ್ಗಿಕ ನೀರು ಮಾತ್ರ! ನಿಮ್ಮ ಕೇಶವಿನ್ಯಾಸಕ್ಕೆ ಸಂಪೂರ್ಣ ನೈಸರ್ಗಿಕ ಮತ್ತು ಸಸ್ಯಆಧಾರಿತ ಪೋಷಣೆ ನೀಡಲು ಬಯಸಿದರೆ, ಅಕ್ಕಿ ನೀರು ಹೇಗೆ ಕೆಲಸ ಮಾಡುತ್ತದೆ ಮತ್ತುಅದು ನಿಮ್ಮ ಕೂದಲನ್ನು ಹೇಗೆ ಬದಲಾಯಿಸುತ್ತದೆಎಂಬುದರ ಸಂಪೂರ್ಣ ಮಾಹಿತಿಇಲ್ಲಿದೆ.

**ಈ ರಹಸ್ಯದ ಹಿಂದಿನ ವಿಜ್ಞಾನವೇನು?**

ಅಕ್ಕಿ ನೀರುಕೂದಲಿಗೆ ಪೋಷಕಾಂಶಗಳ ದಟ್ಟವಾದ ಮತ್ತು



ಪ್ರೊಟೀನ್ ಭರಿತರಕ್ಷಣಾ ಕವಚವಾಗಿ ಕೆಲಸ ಮಾಡುವುದರಿಂದಇದು ಹೆಚ್ಚು ಪರಿಣಾಮಕಾರಿಯಾಗಿದೆ. ಅಕ್ಕಿಯನ್ನು ನೆನೆಸಿದಾಗ ಅಥವಾ ಬೇಯಿಸಿದಾಗ, ಧಾನ್ಯದಲ್ಲಿರುವ ಜೀವಸತ್ವಗಳು, ಖನಿಜಗಳು ಮತ್ತುಜೈವಿಕ ಸಕ್ರಿಯ ಸಂಯುಕ್ತಗಳು ನೀರನ್ನು ಸೇರಿಕೊಳ್ಳುತ್ತವೆ.

ಆರೋಗ್ಯ ಭಾಗ್ಯ

ಮುಖ್ಯವಾಗಿ, ಅಕ್ಕಿ ನೀರಿನಲ್ಲಿ ಇನೋಸಿಟಾಲ್ ಎಂಬ ಕಾರ್ಬೋಹೈಡ್ರೇಟ್ ಸಂಯುಕ್ತವಿದೆ. ಇದು ಹಾನಿಗೊಳಗಾದ ಕೂದಲಿನ ಎಳೆಗಳ ಒಳಹೊಕ್ಕು ಅವುಗಳನ್ನು ಒಳಗಿನಿಂದಲೇ ಸರಿಪಡಿಸುತ್ತದೆ. ವಿಶೇಷವೆಂದರೆ, ನೀರನ್ನು ತೊಳೆದ ನಂತರವೂ ಇನೋಸಿಟಾಲ್ ಕೂದಲಿನ ಒಳಗೇ ಉಳಿದುಕೊಳ್ಳುತ್ತದೆ. ಇದುಕೂದಲು ಬಾಚುವಾಗ ಅಥವಾ ಹೀಟ್ ಸ್ಟೈಲಿಂಗ್ ಮಾಡುವಾಗಉಂಟಾಗುವಯಾಂತ್ರಿಕಒತ್ತಡದಿಂದಕೂದಲಿಗೆ ನಿರಂತರರಕ್ಷಣೆ ನೀಡುತ್ತದೆ.

**ಕೂದಲಿಗೆ ಅಕ್ಕಿ ನೀರಿನ ಪ್ರಮುಖ ಪ್ರಯೋಜನಗಳು**

ನಿಮ್ಮ ವಾರಾನ್ನದ ಕೇಶ ತೊಳೆಯುವ ದಿನಚರಿಯಲ್ಲಿ ಅಕ್ಕಿ ನೀರನ್ನು ಸೇರಿಸಿಕೊಳ್ಳುವುದು ಒಂದು ನೈಸರ್ಗಿಕ ಮತ್ತು ಆಳವಾದ ಕಂಡೀಷನರ್ ಆಗಿ ಕೆಲಸ ಮಾಡುತ್ತದೆ. ಇದರಿಂದ ನೀವು ಪಡೆಯಬಹುದಾದ ಮುಖ್ಯ ಪ್ರಯೋಜನಗಳು ಇಲ್ಲಿವೆ:

**ಕೂದಲಿನ ಬುಡವನ್ನು ಬಲಪಡಿಸುತ್ತದೆ:** ಅಕ್ಕಿ ನೀರಿನಲ್ಲಿ ಅಮೈನೋ ಆಮ್ಲಗಳು ಹೇರಳವಾಗಿವೆ, ಇವು ಪ್ರೊಟೀನ್‌ನ ಮೂಲ ಘಟಕಗಳಾಗಿವೆ. ಈ ಅಮೈನೋ ಆಮ್ಲಗಳು ಹಾನಿಗೊಳಗಾದ ಕೂದಲಿನ ಸೂಕ್ಷ್ಮ ರಂಧ್ರಗಳನ್ನು ತುಂಬಿ, ಕೂದಲಿನ ವಿನ್ಯಾಸವನ್ನುತಾತ್ಕಾಲಿಕವಾಗಿ ಬಲಪಡಿಸುತ್ತವೆ ಮತ್ತುಕೂದಲುತುಂಡಾಗುವುದನ್ನುಕಡಿಮೆ ಮಾಡುತ್ತವೆ.

ಸ್ಥಿತಿಸ್ಥಾಪಕತ್ವವನ್ನು ಹೆಚ್ಚಿಸುತ್ತದೆ ಮತ್ತುಕರುಕಲುತನವನ್ನು (ಈಡುದದ) ಕಡಿಮೆ ಮಾಡುತ್ತದೆ: ಇನೋಸಿಟಾಲ್ ಮತ್ತು ಪಿಷ್ಟದ ಸಕ್ರಿಯ ಅಂಶಗಳ ಸಂಯೋಜನೆಯು ಕೂದಲಿನ ಹೊರಪದರವನ್ನು ನಯಗೊಳಿಸುತ್ತದೆ. ಇದು ಕೂದಲಿನ ಎಳೆಗಳು ಒಂದಕ್ಕೊಂದು ಸುಲಭವಾಗಿಜಾರುವಂತೆ ಮಾಡುತ್ತದೆ, ಸ್ಥಿತಿಸ್ಥಾಪಕತ್ವವನ್ನು ಹೆಚ್ಚಿಸುತ್ತದೆ ಮತ್ತು ಮೊಂಡುತನದಕರುಕಲುತನವನ್ನು (ಈಡುದದ) ಗಣನೀಯವಾಗಿಕಡಿಮೆ ಮಾಡುತ್ತದೆ.

ನೈಸರ್ಗಿಕ ಹೊಳಪನ್ನು ನೀಡುತ್ತದೆ: ಅಕ್ಕಿ ನೀರು ಕೂದಲಿನ ಮೇಲೆ ಪೋಷಕಾಂಶ ಭರಿತ ತೆಳುವಾದ ಪದರವನ್ನು ನಿರ್ಮಿಸುವುದರಿಂದ, ಅದು ಕೂದಲಿನ ಮೇಲ್ಮೈಯಲ್ಲಿ ಬೆಳಕನ್ನು ಪ್ರತಿಫಲಿಸುವಂತೆ ಮಾಡುತ್ತದೆ. ಇದು ಮಂದ ಹಾಗೂ ಜೀವವಿಲ್ಲದಕೂದಲಿಗೆಕೃತಕ ಸಿಲಿಕೋನ್‌ಗಳ ಅಡ್ಡಪರಿಣಾಮವಿಲ್ಲದೆ ನೈಸರ್ಗಿಕ ಮತ್ತುಆಕರ್ಷಕ ಹೊಳಪನ್ನು ನೀಡುತ್ತದೆ.

ನೆತ್ತಿಯನ್ನುತಂಪಾಗಿರಿಸುತ್ತದೆ: ಅಕ್ಕಿ ನೀರಿನಲ್ಲಿ ನೈಸರ್ಗಿಕ ಜೀವಸತ್ವಗಳು, ವಿಶೇಷವಾಗಿ ವಿಟಮಿನ್ ಇ ಮತ್ತು ಬಿ (ಬಯೋಟಿನ್ ನಂತಹ) ಮತ್ತುಉತ್ಕರ್ಷಣ ನಿರೋಧಕಗಳು (Antioxidants) ಇರುತ್ತವೆ. ಇದನ್ನು ಕೂದಲಿನ ಬುಡಕ್ಕೆ ಮಸಾಜ್ ಮಾಡಿದಾಗ, ಅದು ಕೂದಲಿನ ರಂಧ್ರಗಳನ್ನು ಪೋಷಿಸುತ್ತದೆ, ಪರಿಸರ ಮಾಲಿನ್ಯದಒತ್ತಡವನ್ನುಕಡಿಮೆ ಮಾಡುತ್ತದೆ ಮತ್ತುಆರೋಗ್ಯಕರ ಕೂದಲಿನ ಬೆಳವಣಿಗೆಗೆ ಪೂರಕವಾದ ವಾತಾವರಣವನ್ನು ಸೃಷ್ಟಿಸುತ್ತದೆ.

ಮನೆಯಲ್ಲೇ ಅಕ್ಕಿ ನೀರನ್ನುತಯಾರಿಸುವುದು ಹೇಗೆ?

ಅಕ್ಕಿ ನೀರನ್ನು ನೈಸರ್ಗಿಕಕಂಡೀಷನರ್ ಆಗಿ ಬಳಸಲು, ಈ ಕೆಳಗಿನ ಎರಡುಜನಪ್ರಿಯ ವಿಧಾನಗಳಲ್ಲಿ ಒಂದನ್ನು ಬಳಸಬಹುದು:

1. ನೆನೆಸುವ ವಿಧಾನ
   ಅರ್ಧಕಪ್ ಬೇಯಿಸದ ಸಾವಯವ ಅಕ್ಕಿ (ಕಂದು, ಬಿಳಿ ಅಥವಾ ಕೆಂಪು) ತೆಗೆದುಕೊಳ್ಳಿ ಮತ್ತು ಕೊಳೆಯನ್ನು ತೆಗೆದುಹಾಕಲುಅದನ್ನುಚೆನ್ನಾಗಿ ತೊಳೆಯಿರಿ.ತೊಳೆದ ಅಕ್ಕಿಯನ್ನುಒಂದು ಬಟ್ಟಲಿನಲ್ಲಿ ಹಾಕಿ 2 ರಿಂದ 3 ಕಪ್ ನೀರು ಸೇರಿಸಿ. ಅದನ್ನು 30 ನಿಮಿಷಗಳಿಂದ 1 ಗಂಟೆಯವರೆಗೆನೆನೆಯಲು ಬಿಡಿ. ನೀರು ಮಸುಕಾಗುವವರೆಗೆ (Cloudy) ಮಧ್ಯದಲ್ಲಿ ಆಗಾಗ ಕಲಕುತ್ತಿರಿ. ನಂತರ ಆ ನೀರನ್ನುಒಂದು ಸ್ವಚ್ಛವಾದ ಸ್ಪ್ರೇ ಬಾಟಲ್‌ಅಥವಾಜಾರ್‌ಗೆ ಸೋಸಿಕೊಳ್ಳಿ.

**ವಿಶೇಷ ಸಲಹೆ:** ಹೆಚ್ಚಿನ ಪ್ರಯೋಜನಗಳಿಗಾಗಿ, ಸೋಸಿದ ಅಕ್ಕಿ ನೀರನ್ನುಕೋಣೆಯಉಷ್ಣಾಂಶದಲ್ಲಿ 12 ರಿಂದ 24 ಗಂಟೆಗಳ ಕಾಲ ಸ್ವಲ್ಪ ಹುಳಿ ವಾಸನೆ ಬರುವವರೆಗೆ ಇಡಿ, ನಂತರಅದನ್ನುರೆಫ್ರಿಜರೇಟರ್‌ನಲ್ಲಿ ಇರಿಸಿ. ಹುದುಗುವಿಕೆಯು (Fermentation) ನೀರಿನ ಪಿ.ಹೆಚ್ ಮಟ್ಟವನ್ನು ನಿಮ್ಮ ಕೂದಲಿನ ನೈಸರ್ಗಿಕ ಪಿ.ಹೆಚ್ ಮಟ್ಟಕ್ಕೆ ಹೊಂದಿಸಲು ಸಹಾಯ ಮಾಡುತ್ತದೆ ಮತ್ತು ಹೆಚ್ಚಿನ ಮಟ್ಟದಉತ್ಕರ್ಷಣ ನಿರೋಧಕಗಳನ್ನು ಸಕ್ರಿಯಗೊಳಿಸುತ್ತದೆ.

**ಬಳಸುವ ವಿಧಾನ**

**ಹಂತ 1:** ಮೊದಲು ನಿಮ್ಮ ಕೂದಲನ್ನು ಸಲ್ಫೇಟ್ ಮುಕ್ತ ಮೃದುವಾದ ಶಾಂಪೂ ಬಳಸಿ ಎಂದಿನಂತೆ ತೊಳೆಯಿರಿ.

**ಹಂತ 2:** ಅಕ್ಕಿ ನೀರನ್ನು ನಿಮ್ಮ ನೆತ್ತಿ ಮತ್ತು ಕೂದಲಿನ ಸಂಪೂರ್ಣಉದ್ದಕ್ಕೂಚೆನ್ನಾಗಿ ಸ್ಪ್ರೇ ಮಾಡಿ.

**ಹಂತ 3:** ನಿಮ್ಮ ಕೂದಲಿನ ಬುಡಕ್ಕೆ ಮೃದುವಾಗಿ ಮಸಾಜ್ ಮಾಡಿ ಮತ್ತು 15 ರಿಂದ 20 ನಿಮಿಷಗಳ ಕಾಲ ಹಾಗೆಯೇ ಬಿಡಿ.


**ಹಂತ 4:** ನಂತರತಣ್ಣಗಿನಅಥವಾ ಸಾಮಾನ್ಯ ನೀರಿನಿಂದ ಕೂದಲನ್ನುಚೆನ್ನಾಗಿ ತೊಳೆಯಿರಿ. ಇದರ ನಂತರಯಾವುದೇಕೃತಕ ಕಂಡೀಷನರ್ ಬಳಸುವ ಅಗತ್ಯವಿಲ್ಲ.

**ಪ್ರಮುಖ ಮುನ್ನೆಚ್ಚರಿಕೆಗಳು:** ಪ್ರೊಟೀನ್‌ಅತಿರೇಕವನ್ನು ತಪ್ಪಿಸಿ: ಅಕ್ಕಿ ನೀರುಅತ್ಯಂತ ಪ್ರಯೋಜನಕಾರಿಯಾಗಿದ್ದರೂ, ಇದನ್ನುಎಚ್ಚರಿಕೆಯಿಂದ ಬಳಸಬೇಕು. ಇದರಲ್ಲಿ ಹೆಚ್ಚಿನಪ್ರೊಟೀನ್‌ಅಂಶವಿರುವುದರಿಂದ, ಇದನ್ನುಅತಿಯಾಗಿ ಬಳಸುವುದರಿಂದ ಅಥವಾಗಂಟೆಗಟ್ಟಲೆ ಕೂದಲಿನಲ್ಲಿ ಬಿಡುವುದರಿಂದ 'ಪ್ರೊಟೀನ್‌ಓವರ್‌ಲೋಡ್' ಎಂಬ ಸಮಸ್ಯೆಉಂಟಾಗಬಹುದು. ಅತಿಯಾದ ಪ್ರೊಟೀನ್ ಕೂದಲಿನ ಮೇಲೆ ಸಂಗ್ರಹವಾದಾಗ, ಅದು ಕೂದಲಿನ ತೇವಾಂಶವನ್ನುಕಿತ್ತುಕೊಂಡು, ಕೂದಲುಒರಟಾಗಲು, ಸುಲಭವಾಗಿತುಂಡಾಗಲು ಮತ್ತು ಹುಲ್ಲಿನಂತೆಒಣಗಲುಕಾರಣವಾಗಬಹುದು.ಉತ್ತಮ ಫಲಿತಾಂಶಕ್ಕಾಗಿ, ಅಕ್ಕಿ ನೀರನ್ನುತೀವ್ರವಾದ ಪೋಷಣೆ ನೀಡುವ ಪ್ರೊಟೀನ್ ಮಾಸ್ಕ್‌ನಂತೆ ಪರಿಗಣಿಸಿ. ಇದರ ಬಳಕೆಯನ್ನು ವಾರಕ್ಕೆ ಒಮ್ಮೆ ಮಾತ್ರ ಸೀಮಿತಗೊಳಿಸಿ (ನಿಮ್ಮಕೂದಲುಕಡಿಮೆರಂಧ್ರ ಮುಕ್ತವಾಗಿದ್ದರೆ – Low porosity hair – ಎರಡು ವಾರಕ್ಕೊಮ್ಮೆ ಬಳಸಿ). ತೇವಾಂಶ ಮತ್ತು ಶಕ್ತಿಯ ಪರಿಪೂರ್ಣ ಸಮತೋಲನವನ್ನು ಕಾಯ್ದುಕೊಳ್ಳಲು ನಿಮ್ಮ ಕೂದಲಿನ ಪ್ರತಿಕ್ರಿಯೆಯನ್ನುಯಾವಾಗಲೂ ಗಮನಿಸುತ್ತಿರಿ.



–ಆರ್. ಯಶಸ್
ಲೇಖಕ ಮತ್ತು ಸಾಮಾಜಿಕಕಾರ್ಯಕರ್ತ,
ಮೈಸೂರು
ದೂ: 63662 87446

# ಬಿಜೆಪಿಗೆ ಅಗ್ನಿಪರೀಕ್ಷೆ: ಅಣ್ಣಾಮಲೈ ನಿರ್ಗಮನ, ಡಿ.ಕೆ. ಶಿ ಪಟ್ಟಾಭಿಷೇಕ





ದಕ್ಷಿಣ ಭಾರತದ ರಾಜಕೀಯ ಇತ್ತೀಚಿನ ದಿನಗಳಲ್ಲಿ ತೀವ್ರ ಸೈದ್ಧಾಂತಿಕ ಮತ್ತು ಕಾರ್ಯತಂತ್ರದ ಬದಲಾವಣೆಗಳಿಗೆ ಸಾಕ್ಷಿಯಾಗುತ್ತಿದೆ. ಪ್ರಸ್ತುತ ದಕ್ಷಿಣದ ರಾಜಕಾರಣದಲ್ಲಿ ಎರಡು ಪ್ರಮುಖ ವಿದ್ಯಮಾನಗಳು ರಾಷ್ಟ್ರೀಯ ಮತ್ತು ಪ್ರಾದೇಶಿಕ ಪಕ್ಷಗಳ ಭವಿಷ್ಯವನ್ನು ನಿರ್ಧರಿಸುವಲ್ಲಿ ಅತ್ಯಂತ ನಿರ್ಣಾಯಕವಾಗಿವೆ.

ಮೊದಲನೆಯದು, ತಮಿಳುನಾಡು ಬಿಜೆಪಿಯಲ್ಲಿ ಆಕ್ರಮಣಕಾರಿ ರಾಜಕಾರಣಕ್ಕೆ ನಾಂದಿ ಹಾಡಿದ್ದ ಕೆ. ಅಣ್ಣಾಮಲೈ ಅವರ ಬಹುತೇಕ ನಿಶ್ಚಯವಾಗಿರುವ ನಿರ್ಗಮನ. ಎರಡನೆಯದು, ಕರ್ನಾಟಕ ಕಾಂಗ್ರೆಸ್‌ನ ಸಂಘಟನಾ ಚತುರ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿರುವುದು.

ಈ ಬದಲಾವಣೆಗಳು ದ್ರಾವಿಡ ಸಿದ್ಧಾಂತದ ಭದ್ರಕೋಟೆಯಾದ ತಮಿಳುನಾಡು ಮತ್ತು ರಾಷ್ಟ್ರೀಯ ಪಕ್ಷಗಳ ಮುಖಾಮುಖಿಗೆ ವೇದಿಕೆಯಾಗಿರುವ ಕರ್ನಾಟಕದ ರಾಜಕೀಯ ಸಮೀಕರಣಗಳನ್ನು ಸಂಪೂರ್ಣವಾಗಿ ಮರುರೂಪಿಸುತ್ತಿವೆ.

**ತಮಿಳುನಾಡು:** ಮೈತ್ರಿ ರಾಜಕಾರಣದ ಮಿತಿ

ತಮಿಳುನಾಡಿನಲ್ಲಿ ಕಳೆದ ಐದು ದಶಕಗಳಿಂದ ದ್ರಾವಿಡ ಪಕ್ಷಗಳಾದ ಡಿಎಂಕೆ ಮತ್ತು ಎಐಎಡಿಎಂಕೆಯದೇ ಮೇಲುಗೈ. ಅಲ್ಲಿ ರಾಷ್ಟ್ರೀಯ ಪಕ್ಷಕ್ಕೆ ಜಾಗ ಕಲ್ಪಿಸುವ ನಿಟ್ಟಿನಲ್ಲಿ ಮಾಜಿ ಐಪಿಎಸ್ ಅಧಿಕಾರಿ ಕೆ. ಅಣ್ಣಾಮಲೈ ಅವರನ್ನು ಬಿಜೆಪಿ ಮುಂಚೂಣಿಗೆ ತಂದಿತ್ತು. ಅವರ "ಎನ್ ಮಣ್, ಎನ್ ಮಕ್ಕಳ್" ಪಾದಯಾತ್ರೆ ಮತ್ತು ಭ್ರಷ್ಟಾಚಾರ ವಿರೋಧಿ ಹೋರಾಟ ಬಿಜೆಪಿಗೆ ಮೂರನೇ ಪರ್ಯಾಯ ಶಕ್ತಿಯಾಗಿ ಹೊರಹೊಮ್ಮಲು ನೆರವಾದವು. 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಯಾವುದೇ ಸೀಟು ಗೆಲ್ಲದಿದ್ದರೂ, ಶೇಕಡಾ 11 ಕ್ಕೂ ಹೆಚ್ಚು ಮತಗಳನ್ನು ಗಳಿಸುವ ಮೂಲಕ ತನ್ನ ಸ್ವತಂತ್ರ ಮತ ಹಂಚಿಕೆಯನ್ನು ಗಣನೀಯವಾಗಿ ಹೆಚ್ಚಿಸಿಕೊಂಡಿತು.

ಆದಾಗ್ಯೂ, ಪ್ರಾದೇಶಿಕ ಮೈತ್ರಿಗಳ ಕೊರತೆ ಮತ್ತು ತಮಿಳು ರಾಷ್ಟ್ರೀಯತೆಯ ಚೌಕಟ್ಟಿನಲ್ಲಿ ಹಿಂದುತ್ವದ ಮಿತಿಗಳಿಂದಾಗಿ ಅಣ್ಣಾಮಲೈ ಸವಾಲು ಎದುರಿಸಬೇಕಾಯಿತು. ಅವರ ನಿರ್ಗಮನವು ಬಿಜೆಪಿಗೆ ಆಕ್ರಮಣಕಾರಿ ನಾಯಕತ್ವದ ಕೊರತೆಯನ್ನು ಉಂಟುಮಾಡಬಹುದಾದರೂ, ಹಳೆಯ ಮಿತ್ರಪಕ್ಷಗಳೊಂದಿಗೆ ಮರು–ಮೈತ್ರಿಗೆ ಹಾದಿ ಸುಗಮಗೊಳಿಸಬಹುದು.

**ಕರ್ನಾಟಕ: ಹೊಸ ನಾಯಕತ್ವದ ಉದಯ ಮತ್ತು ಪ್ರಭಾವ:** ಕರ್ನಾಟಕದ ರಾಜಕಾರಣವು ಒಕ್ಕಲಿಗ, ಲಿಂಗಾಯತ ಹಾಗೂ ಅಹಿಂದ (AHINDA) ವರ್ಗಗಳ ಸುತ್ತ ಹೆಣೆದಿದೆ. 2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಭರ್ಜರಿ ಬಹುಮತ ಪಡೆಯಲು ಕೆಪಿಸಿಸಿ ಅಧ್ಯಕ್ಷರಾಗಿ ಶಿವಕುಮಾರ್ ಪ್ರಮುಖ ಕಾರಣಕರ್ತರಾಗಿದ್ದರು. ಹಳೇ ಮೈಸೂರು ಭಾಗದಲ್ಲಿ ಒಕ್ಕಲಿಗ ಸಮುದಾಯದ ಪ್ರಭಾವಿ ನಾಯಕರಾಗಿ ಸ್ಥಾನ ಭದ್ರಪಡಿಸಿಕೊಂಡಿದ್ದ ಅವರು, ಈಗ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಪಟ್ಟಾಭಿಷೇಕಗೊಂಡಿದ್ದಾರೆ.

**ಶಿವಕುಮಾರ್ ಅವರ ಈ ರಾಜಕೀಯ ಏಳಿಗೆಯು ಮೂರು ಪ್ರಮುಖ ಪರಿಣಾಮಗಳನ್ನು ಬೀರಲಿದೆ:**

**ಆಡಳಿತಾತ್ಮಕ ಶೈಲಿ:** ಮಾಜಿ ಮುಖ್ಯಮಂತ್ರಿ ಎಸ್. ಎಂ. ಕೃಷ್ಣ ಅವರನ್ನೇ ರಾಜಕೀಯ ಗುರು ಎಂದು ಪರಿಗಣಿಸಿರುವ ಶಿವಕುಮಾರ್, ಅವರ ಕಾಲದ 'ಜಾಗತಿಕ ಬೆಂಗಳೂರು' ಅಭಿವೃದ್ಧಿಯ ದೂರದೃಷ್ಟಿ ಮತ್ತು ರಾಜತಾಂತ್ರಿಕ ಶೈಲಿಯನ್ನು ಮರುಕಳಿಸುವ ಲಕ್ಷಣಗಳು ಕಾಣಿಸುತ್ತಿವೆ.

**ಜೆಡಿಎಸ್‌ಗೆ ಅಸ್ತಿತ್ವದ ಬಿಕ್ಕಟ್ಟು:** ಹಳೇ ಮೈಸೂರು ಭಾಗದ ಒಟ್ಟು 61 ಸೀಟುಗಳ ಪೈಕಿ ಕಾಂಗ್ರೆಸ್ ಕಳೆದ ಚುನಾವಣೆಯಲ್ಲಿ ಬಹುಪಾಲು ಸೀಟುಗಳನ್ನು ಗೆಲ್ಲಲು ಇವರ ತಂತ್ರವೇ ಕಾರಣವಾಗಿತ್ತು. ಈಗ ಶಿವಕುಮಾರ್ ಮುಖ್ಯಮಂತ್ರಿಯಾಗಿರುವುದರಿಂದ, ಜೆಡಿಎಸ್‌ನ ಸಾಂಪ್ರದಾಯಿಕ ಒಕ್ಕಲಿಗ ಮತಬ್ಯಾಂಕ್ ಸಂಪೂರ್ಣ ಕುಸಿಯುವ ಭೀತಿ ಎದುರಿಸುತ್ತಿದೆ.

**ಹಿಂದುತ್ವ ಅಸ್ತ್ರಕ್ಕೆ ಬ್ರೇಕ್:** ತಾವೊಬ್ಬ ಕಟ್ಟಾ ದೈವಭಕ್ತ ಎಂಬುದನ್ನು ಸಾರುತ್ತಾ ಬಂದಿರುವ ಶಿವಕುಮಾರ್, ಪ್ರಮಾಣವಚನಕ್ಕೆ ಎಲ್ಲಾ ಪ್ರಮುಖ ಮಠಾಧೀಶರನ್ನು ಆಹ್ವಾನಿಸುವ ಮೂಲಕ 'ಧಾರ್ಮಿಕ ಸಮತೋಲನ' ಕಾಯ್ದುಕೊಂಡಿದ್ದಾರೆ. ಇದು ಕಾಂಗ್ರೆಸ್ ವಿರುದ್ಧ ಬಿಜೆಪಿ ಬಳಸುತ್ತಿದ್ದ "ಹಿಂದೂ ವಿರೋಧಿ" ಎಂಬ ಅಸ್ತ್ರದ ತೀಕ್ಷ್ಣತೆಯನ್ನು ಕಡಿಮೆ ಮಾಡಲಿದೆ.

**ಬಿಜೆಪಿಗೆ ಎದುರಾಗಿರುವ ಹೊಸ ಸವಾಲು:**

ಕರ್ನಾಟಕದಲ್ಲಿ ಕಾಂಗ್ರೆಸ್ ಮತ್ತು ಡಿ.ಕೆ. ಶಿವಕುಮಾರ್ ಅವರ ಈ ಪ್ರಭಾವಿ ಜಂಟಿ ಶಕ್ತಿಯನ್ನು ಮುರಿಯಲು ಬಿಜೆಪಿಗೆ ಸಾಂಪ್ರದಾಯಿಕ ತಂತ್ರಗಳು ಸಾಲುವುದಿಲ್ಲ. ಹೀಗಾಗಿ, ತಮಿಳುನಾಡಿನಲ್ಲಿ ಅಣ್ಣಾಮಲೈ ಅವರನ್ನು ತಂದ ಮಾದರಿಯಲ್ಲೇ, ಕರ್ನಾಟಕದಲ್ಲೂ ಬಿಜೆಪಿಯು ರಾಜ್ಯ ಮಟ್ಟದಲ್ಲಿ ಹೊಸ ತಲೆಮಾರಿನ, ಆಕ್ರಮಣಕಾರಿ ಸ್ವಭಾವದ ಬಲಿಷ್ಠ ಯುವ ನಾಯಕನನ್ನು ಪಕ್ಷದ ಮುಂಚೂಣಿಗೆ ತರಬೇಕಾದ ಅನಿವಾರ್ಯತೆಗೆ ಸಿಲುಕಿದೆ.



| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email: Swamynathann@gmail.com

ಅಣ್ಣಾಮಲೈ ಅವರ ನಿರ್ಗಮನವು ರಾಷ್ಟ್ರೀಯ ಪಕ್ಷವೊಂದು ದ್ರಾವಿಡ ನೆಲದಲ್ಲಿ ಪ್ರಾದೇಶಿಕ ಸೂಕ್ಷ್ಮತೆಗಳು ಮತ್ತು ಮೈತ್ರಿಗಳನ್ನು ನಿರ್ಲಕ್ಷಿಸಿ ಬೆಳೆಯಲು ಸಾಧ್ಯವಿಲ್ಲ ಎಂಬುದನ್ನು ಸಾಬೀತುಪಡಿಸಿದೆ. ಅದೇ ಸಮಯದಲ್ಲಿ, ಡಿ.ಕೆ. ಶಿವಕುಮಾರ್ ಅವರ ಪ್ರವೇಶವು ಪ್ರಾದೇಶಿಕ ನಾಯಕತ್ವ, ಸಮುದಾಯದ ಬೆಂಬಲ ಮತ್ತು ಧಾರ್ಮಿಕ ಸಮತೋಲನ ಇದ್ದಾಗ ಮಾತ್ರ ರಾಷ್ಟ್ರೀಯ ಪಕ್ಷಗಳು ರಾಜ್ಯಗಳಲ್ಲಿ ದೀರ್ಘಕಾಲ ಆಡಳಿತ ನಡೆಸಲು ಸಾಧ್ಯ ಎಂಬುದನ್ನು ತೋರಿಸುತ್ತದೆ.

ಭವಿಷ್ಯದಲ್ಲಿ ವಿರೋಧ ಪಕ್ಷಗಳು ಈ ಹೊಸ ಸವಾಲಿಗೆ ಹೇಗೆ ಪ್ರತಿಕ್ರಿಯಿಸುತ್ತವೆ ಮತ್ತು ಹೊಸ ಯುವ ನಾಯಕತ್ವವನ್ನು ಹೇಗೆ ಮುಂಚೂಣಿಗೆ ತರುತ್ತವೆ ಎಂಬುದರ ಮೇಲೆ ದಕ್ಷಿಣದ ರಾಜಕೀಯ ಭವಿಷ್ಯ ನಿರ್ಧಾರವಾಗಲಿದೆ.




# ಮಕ್ಕಳಿಗೆ ಶಿಕ್ಷಣದ ಪ್ರಾಮುಖ್ಯತೆ



| ಗಿರಿಜಾ.ಎಸ್. ದೇಶಪಾಂಡೆ. ಬೆಂಗಳೂರು.

ಪ್ರತಿಯೊಬ್ಬ ಮಗುವಿಗೂ ಪೋಷಕರ ಸಂಬಂಧ ಬಹಳ ಅಮೂಲ್ಯವೂ ಪ್ರಮುಖವೂ ಆಗಿದೆ.ಈ ಸಂಬಂಧ ಮಗುವಿನ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯ ಮೇಲೆ ಬಹಳಷ್ಟು ಪ್ರಭಾವ ಬೀರುತ್ತದೆ.ಪ್ರತೀ ಮಗುವಿನ ಶಿಕ್ಷಣ ಪ್ರಾರಂಭವಾಗುವದೇ ತನ್ನ ಸುತ್ತಲಿನ ಪರಿಸರದ ವೀಕ್ಷಣೆ,ಸದ್ದುಗದ್ದಲಗಳ ಆಲಿಸುವಿಕೆ,ತನ್ನ ಸುತ್ತಲಿರುವವರು ನಡೆಸುವ ಚಟುವಟಿಕೆಗಳ ಅನುಕರಣೆ ಮಾಡುವ ಮೂಲಕ .ಮಗು ಈ ಕ್ರಿಯೆಗಳನ್ನು ಪ್ರಾರಂಭಿಸುವದು ಪೋಷಕರ ಜೊತೆಯಲ್ಲಿಯೇ.

ಮಗುವಿನ ಯೋಚನಾಶಕ್ತಿ ಹಾಗೂ ಸಮಾಜದಲ್ಲಿ ಬದುಕಲು ಬೇಕಾಗುವ ಕೌಶಲಗಳು ಮಗುವೊಂದು ಶಾಲೆಯಲ್ಲಿ ಉತ್ತಮ ರೀತಿಯಲ್ಲಿ ತೇರ್ಗಡೆಹೊಂದಲು ಬೇಕಾಗುವಂತಹ ಕೌಶಲಗಳಾಗಿವೆ.ಮಕ್ಕಳು ಕೌಶಲಗಳನ್ನು ಗಳಿಸಿಕೊಳ್ಳುವಲ್ಲಿ ಪೋಷಕರ ಪಾತ್ರ ಮುಖ್ಯವಾದುದು. ಇದನ್ನು ನಾವು ಪೋಷಕರ ಜವಾಬ್ದಾರಿ ಎಂದುಕೂಡ ಕರೆಯಬಹುದು.

**ಪೋಷಕರ ಪಾತ್ರ:** ಮಗುವಿನ ಮಾನಸಿಕ ಹಾಗೂ ದೈಹಿಕ ಬೆಳವಣಿಗೆಗಳ ಬಗ್ಗೆ ಕಾಳಜಿ ಯಾವ ಪೋಷಕರು ವಹಿಸುತ್ತಾರೋ ಅದು ಮಕ್ಕಳಿಗೆ ಪೂರಕವಾಗಿರುತ್ತದೆ. ಅದನ್ನು ಹಲವು ರೀತಿಯಲ್ಲಿ ಗಮನಿಸಬಹುದಾಗಿದೆ.

1. ಉತ್ತೇಜಿಸುವ ನಾಯಕ.
2. ಸ್ನೇಹಿತ ಅಥವಾ ಸ್ನೇಹಿತೆ
3. ಶಿಕ್ಷಕ
4. ಸ್ಫೂರ್ತಿ.

ಪೋಷಕರು ಈ ನಾಲ್ಕು ಪಾತ್ರಗಳ ಕರ್ತವ್ಯ ಮತ್ತು ಜವಾಬ್ದಾರಿಯನ್ನು ಸರಿಯಾಗಿ ತಿಳಿದುಕೊಂಡಾಗ ನಿಮ್ಮ ಮಗುವನ್ನು ಶಿಕ್ಷಣದಲ್ಲಿ ಉತ್ತಮ ಸಾಧನೆ ಮಾಡಿಸಲು ಸಾಧ್ಯವಾಗುತ್ತದೆ.

ಉತ್ತೇಜನ ನೀಡುವ ನಾಯಕ ಅಥವಾ ಲೀಡರ

ಮಕ್ಕಳ ಕಲಿಕೆಗೆ ಮುಖ್ಯವಾಗಿ ಬೇಕಾಗಿರುವದು ಪ್ರೋತ್ಸಾಹ.ಪ್ರೋತ್ಸಾಹವೆಂದರೆ ಅವರು ಕೇಳಿದ ವಸ್ತು ಕೊಡಿಸುವದು ಅಥವಾ ನೀಡುವದಲ್ಲ.ಮಕ್ಕಳನ್ನು ಆಗಾಗ ಪ್ರಶ್ನಿಸುವದು ಅವರ ಅಭಿರುಚಿ ಅರಿಯುವದು ನಾಯಕತ್ವ ಗುಣದಮೊದಲನೇಯ ಲಕ್ಷಣವೆಂದು ಹೇಳಬಹುದು.

ಸ್ನೇಹಿತ ಅಥವಾ ಸ್ನೇಹಿತೆಯಂತೆ ವರ್ತಿಸುವದು

ಓದುವ ಮಕ್ಕಳಿಗೆ ವಿದ್ಯೆಯ ಕಷ್ಟಕರ ವಿಚಾರದಲ್ಲಿ




ತೊಡಗಿರುವದು ಎಂದು ಊಹಿಸದೇ ಮಗುವು ತನ್ನ ಶಿಕ್ಷಕರು ಅಥವಾ ಸ್ನೇಹಿತರೊಂದಿಗೆ ಬೆರೆಯುವ ,ವ್ಯವಹರಿಸುವ ವಿಚಾರದಲ್ಲಿ ತೊಂದರೆ ಕಾಣಬಹುದು. ಅವುಗಳನ್ನು ವಿಚಾರಿಸುವ ತಾಳ್ಮೆ ಸ್ವಭಾವ ಸ್ನೇಹಗುಣ ಪೋಷಕರಲ್ಲಿ ಇರಬೇಕು.ನಾವು ಮಕ್ಕಳ ಸ್ನೇಹ ಸಂಪಾದಿಸಿ ಅವರು ನಮ್ಮಲ್ಲಿ ಮುಕ್ತವಾಗಿ ಹಂಚಿಕೊಳ್ಳುವಂತಹ ವಾತಾವರಣ ಸೃಷ್ಟಿಸಬೇಕು.

**ಮಕ್ಕಳ ಪಾಲಿಗೆ ಉತ್ತಮ ಶಿಕ್ಷಕಿ ಅಥವಾ ಶಿಕ್ಷಕ**

ಕೇವಲ ಶಾಲೆಯಲ್ಲಿ ಶಿಕ್ಷಕರು ಕಲಿಸುವ ಪಾಠ ಸಾಲದು.ಶಿಕ್ಷಣ ಬರೀ ಶಾಲೆಗೆ ಸೀಮಿತವಾದದ್ದಲ್ಲ. ಮಕ್ಕಳ ಮನೆಯ ಪಾಠ,ಪ್ರಾಜೆಕ್ಟ ಕೆಲಸಗಳಲ್ಲಿ ನಾವು ಅವರ ಜೊತೆ ಬೆರೆತು ಮಾಡಿಸುವದು ಅಗತ್ಯವಾಗಿರುತ್ತದೆ. ಮಕ್ಕಳ ಕಲಿಕೆಯು ಶಿಕ್ಷಕರೊಂದಿಗೆ ನಿರಂತರ ಸಂಪರ್ಕದಲ್ಲಿರುವದೂ ಅಷ್ಟೇ ಮುಖ್ಯವಾಗಿದೆ.ಪ್ರತೀ ದಿನ ಮಕ್ಕಳಿಗಾಗಿ ಕೆಲವು ಸಮಯ ಮೀಸಲಾಗಿಡುವದು ಮುಖ್ಯವಾಗಿದೆ.

**ಸ್ಫೂರ್ತಿ**

ಮಕ್ಕಳ ಕೆಲಸದಲ್ಲಿ ಪೋಷಕರ ಸ್ಫೂರ್ತಿ ಮುಖ್ಯವಾಗಿದೆ. ಮಕ್ಕಳಿಗೆ ಸಂತೋಷದಿಂದ ಕೆಲಸ ನಿರ್ವಹಿಸಲು ವಾತಾವರಣ ನಿರ್ಮಿಸಿಕೊಡಬೇಕು.ಕೆಲವೊಮ್ಮೆ ದೃಢ ಮತ್ತು ಕಠಿಣ ನಿಲುವನ್ನು ತೆಗೆದುಕೊಳ್ಳಬೇಕಾದ ಅನಿವಾರ್ಯತೆ ಒದಗಿ ಬರಬಹುದು.

ಮಕ್ಕಳ ವಿದ್ಯಾಭ್ಯಾಸದಲ್ಲಿ ಕರ್ತವ್ಯವನ್ನು ಸಕಾರಾತ್ಮಕವಾಗಿ ಪೋಷಕರು ನಿಭಾಯಿಸಿದರೆ ಜೀವನದಲ್ಲಿ ಪೂರಕ ಬದಲಾವಣೆ ತರಲು ಸಾಧ್ಯವಾಗುತ್ತದೆ. ಮಕ್ಕಳಿಗೆ ಅಕ್ಷರ ಜ್ಞಾನವೊಂದೇ ಶಿಕ್ಷಣವಲ್ಲ. ಉತ್ತಮಭವಿಷ್ಯ ಕೊಂಡುಕೊಳ್ಳುವಲ್ಲಿ ಸಕಾರಾತ್ಮಕ ವ್ಯಕ್ತಿತ್ವವನ್ನು ರೂಪುಗೊಳಿಸುವಲ್ಲಿ ಶಿಕ್ಷಣದ ಪಾತ್ರ ಮಹತ್ವದ್ದಾಗಿರುತ್ತದೆ.ಹಿರಿಯರಾದ ಪೋಷಕರು ನುಡಿದಂತೆ ನಡೆದು ಅದೇ ದಾರಿಯಲ್ಲಿ ನಮ್ಮ ಮಕ್ಕಳು ನಡೆಯುವಂತೆ ನೋಡಿಕೊಳ್ಳುವದು ನಮ್ಮೆಲ್ಲರ ಕರ್ತವ್ಯವಾಗಿದೆ.



Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,